



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 18 ಶನಿವಾರ 2023

ಸಂಪುಟ: 43 | ಸಂಚಿಕೆ: 328 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





# ಯಾವುದೇ ಕ್ಷಣದಲ್ಲಿ ಕಾಂಗ್ರೆಸ್ 140 ಅಭ್ಯರ್ಥಿಗಳ ಪಟ್ಟಿ ಪ್ರಕಟ

- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅಧಿನಾಯಕ ರಾಹುಲ್‌ಗಾಂಧಿ ನೇತೃತ್ವದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಪಟ್ಟಿ ಅಂತಿಮ
- ಮೊದಲ ಪಟ್ಟಿಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯರ ಹೆಸರಿಲ್ಲ
- ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಅಧ್ಯಕ್ಷ ಡಾ.ಜಿ. ಪರಮೇಶ್ವರ್ ಸೇರಿ ಹಲವು ಹಿರಿಯ ಮುಖಂಡರ ಹೆಸರು ಸೇರ್ಪಡೆ
- ಉಳಿದಂತೆ 75ರಿಂದ 80 ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ಕಗ್ಗಂಟು



ಬೆಂಗಳೂರು, ಮಾ. 17 (ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ 140 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದು, ಯಾವುದೇ ಕ್ಷಣದಲ್ಲಿ ಪಟ್ಟಿ ಹೊರ ಬೀಳಲಿದೆ.

ದೆಹಲಿಯಲ್ಲಿಂದು ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ರಾಜಕೀಯ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸೇರಿದಂತೆ ಕೇಂದ್ರ ಚುನಾವಣಾ ಸಮಿತಿ ಸಭೆ ಸೇರಿ ವಿವಾದವಿಲ್ಲದ ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ. ಆಶ್ಚರ್ಯವೆಂದರೆ ಮೊದಲ ಪಟ್ಟಿಯಲ್ಲಿ ವಿಧಾನಸಭೆ ಪ್ರತಿಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿಲ್ಲ.

ಸಿದ್ದರಾಮಯ್ಯ ಅವರ ಕೋರಿಕೆಯಂತೆ ಅವರು ಯಾವ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬುದನ್ನು ಅಂತಿಮ ಗಳಿಗೆಯಲ್ಲಿ ಪ್ರಕಟಿಸಲು ಪಕ್ಷ ತೀರ್ಮಾನಿಸಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಸಿದ್ದರಾಮಯ್ಯ ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ್ದಲ್ಲದೆ, ಆ ಕ್ಷೇತ್ರದಲ್ಲಿ ಪ್ರಚಾರವನ್ನೂ ಆರಂಭಿಸಿದ್ದರು. ನಂತರದ ದಿನಗಳಲ್ಲಿ ಅವರಿಗೆ ಗೆಲುವಿನ ಅನುಮಾನವುಂಟಾಗಿದೆ ಎನ್ನಲಾಗಿದೆ. ಈ ಕಾರಣಕ್ಕಾಗಿ ಅವರು ತಮ್ಮ ಕ್ಷೇತ್ರವನ್ನು ಅಂತಿಮಗೊಳಿಸಲು ಅವಕಾಶ ನೀಡಿಲ್ಲವಂತೆ. ಒಂದು ವೇಳೆ ಕೋಲಾರದಿಂದ ಸ್ಪರ್ಧಿಸದಿದ್ದರೆ, ಕೊಪ್ಪಳ ಇಲ್ಲವೇ ▶ 9ನೇ ಪುಟಕ್ಕೆ




ಸರ್ಕಾರದ ಭರವಸೆ ತಿರಸ್ಕರಿಸಿದ ಸಾರಿಗೆ ನೌಕರರು

# ಮಾ.21ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನಿರ್ಧಾರ



**ಬೆಂಗಳೂರು:** ಶೇ.15ರಷ್ಟು ವೇತನ ಹೆಚ್ಚಳ ಮಾಡುವ ಸರ್ಕಾರದ ಭರವಸೆಯನ್ನು ಸಾರಿಗೆ ನೌಕರರು ತಿರಸ್ಕರಿಸಿದ್ದು, ಮಾರ್ಚ್ 21ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಸ್ಪಷ್ಟತೆ ಇಲ್ಲ. ವೇತನ ಹೆಚ್ಚಳ ಸಂಬಂಧ ಅಧಿಕೃತ ಆದೇಶಗಳು ಬಂದಿಲ್ಲ. ಈ ಕುರಿತ ವಿವರಗಳೂ ನಮಗೆ ಸಿಕ್ಕಿಲ್ಲ. ಶೇ.20ಕ್ಕಿಂತ ಕಡಿಮೆ ವೇತನ ಆದೇಶವನ್ನು ನಾವು ಸ್ವೀಕರಿಸುವುದಿಲ್ಲ. ಸರಕಾರ ಏಕಪಕ್ಷೀಯವಾಗಿ ಶೇ.15ರಷ್ಟು ವೇತನ ಹೆಚ್ಚಳ ಮಾಡಲು ನಿರ್ಧರಿಸಿದ್ದು, ಇದು ನ್ಯಾಯಸಮ್ಮತವಲ್ಲ. ಹೀಗಾಗಿ ಈ ಹಿಂದೆ ಘೋಷಿಸಿದಂತೆ ಮಾರ್ಚ್ 21 ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಜಂಟಿ ಕ್ರಿಯಾ ಸಮಿತಿ (ಜೆಎಸಿ) ಪ್ರಕಟಣೆಯಲ್ಲಿ ತಿಳಿಸಿದೆ.

**ಎಸ್ಕಾಂ ಸಿಬ್ಬಂದಿಗೆ ಶೇ.20ರಷ್ಟು ವೇತನ ಹೆಚ್ಚಳ:** 2023ರ ಏಪ್ರಿಲ್ 22ರಿಂದ ಅನ್ವಯವಾಗುವಂತೆ ಕೆಪಿಟಿಸಿಎಲ್ ಮತ್ತು ಎಸ್ಕಾಂ ನೌಕರರ ವೇತನವನ್ನು ಶೇ.20ರಷ್ಟು ಹೆಚ್ಚಿಸಲಾಗುವುದು ಎಂದು ಇಂಧನ ಸಚಿವ ವಿ.ಸುನೀಲ್‌ಕುಮಾರ್ ಗುರುವಾರ ಹೇಳಿದ್ದಾರೆ. ವೇತನ ಹೆಚ್ಚಳ ಮಾಡುವಂತೆ ನೌಕರರು ಹಲವು ಬಾರಿ ಮನವಿ ಮಾಡಿದ್ದು, ಅದಕ್ಕೆ ಸಿಎಂ ಒಪ್ಪಿಗೆ ಸೂಚಿಸಿದ್ದಾರೆಂದು ತಿಳಿಸಿದ್ದಾರೆ.





'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ, ಅದರ ಸುಧಾರಣಾ ಮಾರ್ಗ' ಕುರಿತು

# ಇಂದು ಜಾಗೃತಿ ಕಾರ್ಯಕ್ರಮ

ಮೈಸೂರು,ಮಾ.17(ಪಿಎಂ)– ಮೈಸೂರು ಮುಕ್ತ ವೇದಿಕೆ (Mysore open forum) ವತಿಯಿಂದ 'ಭಾರತದಲ್ಲಿ ಭ್ರಷ್ಟ ಚುನಾವಣಾ ವ್ಯವಸ್ಥೆ ಮತ್ತು ಅದರ ಸುಧಾರಣಾ ಮಾರ್ಗಗಳು' ವಿಷಯ ಕುರಿತಂತೆ ನಾಗರಿಕರ ಜಾಗೃತಿ ಕಾರ್ಯಕ್ರಮವನ್ನು ಮಾ.18ರ ಅಪರಾಹ್ನ 4 ಗಂಟೆಗೆ ಮೈಸೂರಿನ ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಆವರಣದಲ್ಲಿ ಏರ್ಪಡಿಸಲಾಗಿದೆ.

'ಮೈಸೂರು ಮಿತ್ರ ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅವರು ಕಾರ್ಯಕ್ರಮದ ▶ 9ನೇ ಪುಟಕ್ಕೆ








# ಮುಡಾದಿಂದ ಭೂ ಪರಿಹಾರ, ತುಂಡು ಭೂಮಿ ಹಂಚಿಕೆಗೆ ಬ್ರೇಕ್



ಮೈಸೂರು, ಮಾ.17– ಭೂಪರಿಹಾರ ಹಾಗೂ ತುಂಡು ಭೂಮಿ ಹಂಚಿಕೆ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಕೈಗೊಂಡಿದ್ದ ನಿರ್ಣಯಕ್ಕೆ ಸರ್ಕಾರ ಬ್ರೇಕ್ ಹಾಕಿದೆ.

ಭೂ ಪರಿಹಾರವಾಗಿ ಜಾಗ ನೀಡುವುದು ಹಾಗೂ ತುಂಡು ಭೂಮಿ ಹಂಚಿಕೆ ವಿಷಯದಲ್ಲಿ ಮಾರ್ಗಸೂಚಿ ರೂಪಿಸುವವರೆಗೆ ಯಾವುದೇ ರೀತಿಯ ನಿರ್ಣಯ ಕೈಗೊಳ್ಳದಂತೆ ನಗರಾಭಿವೃದ್ಧಿ ಇಲಾಖೆ ಇತ್ತೀಚೆಗೆ ಪತ್ರದ ಮೂಲಕ ತಾಕೀತು ಮಾಡಿದ್ದು, ಮುಡಾ ಯೋಜನೆಗೆ ಹಿನ್ನಡೆಯಾದಂತಾಗಿದೆ.

ಬದಲಿ ನಿವೇಶನಗಳ ಮಂಜೂರು ಮಾಡಲು ಇತ್ತೀಚಿನ ಸಭೆಗಳಲ್ಲಿ ಪ್ರಾಧಿಕಾರ ತೀರ್ಮಾನಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕರ್ನಾಟಕ ನಗರಾಭಿವೃದ್ಧಿಪ್ರಾಧಿಕಾರ(ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 16ರಲ್ಲಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ಪ್ರಾಧಿಕಾರವು ನಿಯಮಕ್ಕೆ ವ್ಯತಿರಿಕ್ತವಾಗಿ ಹಲವಾರು ಪ್ರಕರಣಗಳಲ್ಲಿ ಬದಲಿ ನಿವೇಶನ ಮಂಜೂರು ಮಾಡುವ ಬಗ್ಗೆ ಕ್ರಮ ವಹಿಸಿರುವುದು ಕಂಡು ಬಂದಿದೆ.

ಹಲವು ಪ್ರಕರಣಗಳಲ್ಲಿ ಭೂ ಮಾಲೀಕರಿಗೆ ಪರಿಹಾರ ನೀಡಿಲ್ಲವೆಂದು ಬದಲಿಯಾಗಿ ಅವರಿಗೆ ಅಭಿವೃದ್ಧಿ ಹೊಂದಿದ ಜಾಗದಲ್ಲಿ ಬೆಲೆ ಬಾಳುವ ಆಸ್ತಿಗಳನ್ನು ಹಂಚಿಕೆ ಮಾಡುತ್ತಿರುವುದು ಹಾಗೂ ಶೇ.50:50 ಅನುಪಾತವನ್ನು ಅನುಸರಿಸಿರುವುದು ಕಂಡುಬಂದಿದೆ. ಈ ನಿರ್ಧಾರವನ್ನು ಯಾವ ನಿಯಮದಲ್ಲಿ ಮಾಡಲಾಗಿದೆ ಎಂಬ ವಿವರವನ್ನು ಉಲ್ಲೇಖಿಸಿಲ್ಲ. ತುಂಡು ಭೂಮಿ ಹಂಚಿಕೆ ಮತ್ತು ಭೂ ಪರಿಹಾರವಾಗಿ ಬದಲಿ ಜಾಗ ನೀಡಿರುವ ಪ್ರಕರಣಗಳಲ್ಲಿ ಕಾಯ್ದೆ ಮತ್ತು ನಿಯಮಗಳಿಗೆ ವ್ಯತಿರಿಕ್ತವಾಗಿ ಕ್ರಮ ವಹಿಸಿದರೆ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿದೆ. ಹಾಗಾಗಿ ಹಿಂದಿನ ಪ್ರಕರಣಗಳಿಗೆ ಪ್ರಾಧಿಕಾರವೇ ಜವಾಬ್ದಾರಿಯಾಗಿರುತ್ತದೆ. ತುಂಡು ಭೂಮಿ ಹಂಚಿಕೆ, ಭೂ ಪರಿಹಾರವಾಗಿ ಜಾಗ ನೀಡುವ ಕುರಿತು ಮಾರ್ಗಸೂಚಿ ತಯಾರಿಸುವ ಅವಶ್ಯಕತೆ ಇದೆ. ಅಲ್ಲಿಯವರೆಗೆ ಇಂತಹ ಪ್ರಕರಣಗಳಲ್ಲಿ ಯಾವುದೇ ನಿರ್ಣಯ ಕೈಗೊಳ್ಳದಂತೆ ನಗರಾಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಸತೀಶ್ ಕಬಾಡಿ ನಿರ್ದೇಶಿಸಿರುವುದಾಗಿ ತಿಳಿದುಬಂದಿದೆ.

# ಮರಣದ ನಂತರವೂ ಜೀವಿಸಿರುವ ಪುನೀತ್

## ಕೆ.ಆರ್.ಆಸ್ಪತ್ರೆಯ ಡೀನ್ ಡಾ.ದಾಕ್ಷಾಯಿಣಿ ಬಣ್ಣನೆ



ಮೈಸೂರು, ಮಾ.17– ಮರಣಿಸಿದ ನಂತರವೂ ಜನರ ಮನಸ್ಸಿನಲ್ಲಿ ಜೀವಂತವಾಗಿರುವಂತೆ ಬದುಕಬೇಕು. ಅಂತಹ ಬದುಕು ಪುನೀತ್ ರಾಜ್‌ಕುಮಾರ್ ಅವರದ್ದಾಗಿತ್ತು ಎಂದು ಕೆ.ಆರ್. ಆಸ್ಪತ್ರೆಯ ಡೀನ್ ಡಾಕ್ಟರ್ ದಾಕ್ಷಾಯಿಣಿ ಅಭಿಪ್ರಾಯಪಟ್ಟರು.

ನಗರದ ಕೆ.ಆರ್.ಆಸ್ಪತ್ರೆಯ ರೋಗಿಗಳಿಗೆ ಪುನೀತ್ ರಾಜಕುಮಾರ್ ಅಭಿಮಾನಿ ಬಳಗ ಹಾಗೂ ಪ್ರಜ್ಞಾವಂತ ನಾಗರಿಕ ವೇದಿಕೆ ಹಣ್ಣು ಹಂಪಲು ಹಾಗೂ ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸುವ ಮೂಲಕ ಕರ್ನಾಟಕ ರತ್ನ ಡಾ. ಪುನೀತ್ ರಾಜಕುಮಾರ್ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯ ಎಷ್ಟು ಶ್ರೀಮಂತ ಎನ್ನುವ ಕಾಲ ಬದಲಾಗಿದೆ. ಎಷ್ಟು ಆರೋಗ್ಯವಂತನಾಗಿ ಜೀವನ ಸಾಗಿಸುತ್ತಿದ್ದಾನೆ ಎನ್ನುವುದು ಮುಖ್ಯ.

ಪ್ರತಿಯೊಬ್ಬರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿಕೊಳ್ಳಬೇಕು, ತಿಂಗಳಿಗೊಮ್ಮೆ ಆದರೂ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಆರೋಗ್ಯವಂತ ಜೀವನ ನಡೆಸಬೇಕು ಎಂದರು. ನಂತರ ಮಾತನಾಡಿದ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಹೇಮಾ ನಂದೀಶ್, ಪುನೀತ್ ಸಮಾಜ ಸೇವೆಯಲ್ಲೂ ತೊಡಗಿದ್ದರು. ಅವರ ಅಭಿಮಾನಿಗಳು ಅವರಂತೆ ಒಳ್ಳೆಯ ಕೆಲಸ ಮಾಡುವ ಸಂಕಲ್ಪ ಕೈಗೊಳ್ಳಬೇಕು ಎಂದರು.

ಪುನೀತ್ ರಾಜ್‌ಕುಮಾರ್ ಅವರು ತಮ್ಮ ಚಿತ್ರಗಳಲ್ಲಿ ಸಮಾಜಕ್ಕೆ ಒಳ್ಳೆಯ ಸಂದೇಶಗಳನ್ನು ನೀಡುತ್ತಿದ್ದರಲ್ಲದೇ, ಎಲೆಮರೆಯ ಕಾಯಿಯಂತೆ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದು, ಇಂದಿನ ಯುವ ಪೀಳಿಗೆಗೆ ಆದರ್ಶ ಪ್ರಾಯರಾಗಿದ್ದಾರೆ ಎಂದು ತಿಳಿಸಿದರು. ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ರಾಜೇಂದ್ರ, ಕೆ.ಆರ್.ಆಸ್ಪತ್ರೆಯ ಆರ್‌ಎಂಓ ಡಾ. ಶಿವರಾಮಕೃಷ್ಣ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಮಾಜ ಸೇವಕರಾದ ಕಾರ್ತಿಕ್‌ಗೌಡ, ಸಚಿಂದ್ರ ರಾಕೇಶ್, ಸೂರಜ್, ಸದಾಶಿವ, ಚಂದ್ರು, ಶಿವಗೌಡ, ಕೌಶಿಕ್‌ಗೌಡ, ಸಾಗರ್, ಶಾಂತರಾಜು ಹಾಗೂ ಇನ್ನಿತರರು ಹಾಜರಿದ್ದರು.

# ಉರಿಗೌಡ, ನಂಜೇಗೌಡ ಪಾತ್ರಧಾರಿ ಸೃಷ್ಟಿಸಿ ಒಕ್ಕಲಿಗರಿಗೆ ಕಳಂಕ ತರಲು ಬಿಜೆಪಿ ಹುನ್ನಾರ


**● ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ● ಕೆಲ ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ**

ಬೆಂಗಳೂರು, ಮಾ. 17 (ಕೆಎಂಶಿ)– ಕಲ್ಪಿತಕಥೆ, ಸುಳ್ಳುಗಳಿಂದಲೇ ಜನರ ಮನಸ್ಸಿನಲ್ಲಿ ವಿಷಬೀಜ ಬಿತ್ತಿ ಕರ್ನಾಟಕವನ್ನು ಅಲ್ಲೋಲಕಲ್ಲೋಲ ಮಾಡುತ್ತಿರುವ ಬಿಜೆಪಿ ವಕ್ರದೃಷ್ಟಿ ಸದ್ಯಕ್ಕೆ ಒಕ್ಕಲಿಗರ ಮೇಲೆ ಬಿದ್ದಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಕಿಡಿಕಾರಿದ್ದಾರೆ.

ಸ್ವಾಭಿಮಾನಿ ಒಕ್ಕಲಿಗರನ್ನು ಹೇಗಾದರೂ ಹಳ್ಳ ಹಿಡಿಸಲೇಬೇಕೆಂಬ ಹಿಡೆನ್ ಅಜೆಂಡಾ ಇಟ್ಟುಕೊಂಡು ಹೊರಟಿದ್ದಾರೆ ಎಂದು ಸರಣಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಈ ಮಹಾ ಷಡ್ಯಂತ್ರದ ಭಾಗವೇ ಉರಿಗೌಡ, ನಂಜೇಗೌಡ ಎಂಬ ಸುಳ್ಳುಪಾತ್ರಗಳ ಸೃಷ್ಟಿ, ಟಿಪ್ಪುವನ್ನು ಕೊಂದವರೆಂದು ಸೃಷ್ಟಿಸಲಾದ ಕಲ್ಪಿತ ಒಕ್ಕಲಿಗ ಹೆಸರುಗಳ ಮೂಲಕ ಒಕ್ಕಲಿಗ ಸಮುದಾಯವನ್ನು ಕಳಂಕದ ದಳ್ಳುರಿಗೆ ತಳ್ಳುವ, ಐತಿಹಾಸಿಕ ನಂಜಿನ ವಿಷವರ್ತುಲಕ್ಕೆ ನೂಕುವ ಹೇಯ ಕೃತ್ಯವನ್ನು ಮಾಡುತ್ತಿದೆ. ಹೆದ್ದಾರಿ ಲೋಕಾರ್ಪಣೆಗೆ ಆಗಮಿಸಿದ್ದ ಪ್ರಧಾನಿಗಳ ಸ್ವಾಗತ ಕಮಾನಿಗೆ ಉರಿಗೌಡ–ನಂಜೇಗೌಡ ಕಲ್ಪಿತ ಹೆಸರುಗಳನ್ನು ಇಟ್ಟಿತ್ತು. ಸರಕಾರ ಮೊದಲೇ ಇದ್ದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಗಳ ಹೆಸರನ್ನು ಮರೆಮಾಚಿ ಕಲ್ಪಿತ ಹೆಸರುಗಳ ಕಮಾನು ಕಟ್ಟಿದ್ದೇ ಪರಮದ್ರೋಹ.

ಕುಲಕ್ಕೆ ಕುಲ ಗುರುವಿಗಾದ ಈ ಘೋರ ಅಪಮಾನದಿಂದ ಕುದಿಯುತ್ತಿರುವ ಒಕ್ಕಲಿಗ ಸಮಾಜವನ್ನು ಇನ್ನಷ್ಟು ಹೀನಾಯವಾಗಿ ಕಳಂಕದ ಕೂಪಕ್ಕೆ ತಳ್ಳಲು ಇದೇ ಸರಕಾರದ ಸಚಿವರೊಬ್ಬರು ಧೂರ್ತ ಪ್ರಯತ್ನ ನಡೆಸಿದ್ದಾರೆ. ಸಚಿವರು, ವೃತ್ತಿಯಲ್ಲಿ ಚಿತ್ರ ನಿರ್ಮಾಪಕ ಮುನಿರತ್ನ ಅವರು ತಮ್ಮ ವೃಷಭಾದ್ರಿ ಪ್ರೊಡಕ್ಷನ್ಸ್ ಮೂಲಕ 'ಉರಿಗೌಡ ನಂಜೇಗೌಡ' ಹೆಸರನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ನೋಂದಾಯಿಸಿ ಸಿನಿಮಾ ಮಾಡಲು ಹೊರಟಿದ್ದಾರೆ. ಈ ಮೂಲಕ ಒಕ್ಕಲಿಗರ ಗೌರವವನ್ನು ಬೆಳ್ಳಿತೆರೆಯ ಮೇಲೆಯೂ ಮೂರಾಬಟ್ಟೆ ಮಾಡಲು ಸಂಚು ರೂಪಿಸಿದ್ದಾರೆ. ಕುದಿಯುತ್ತಿರುವ ಒಕ್ಕಲಿಗರ ನೋವಿನ ಮೇಲೆ ಮಾರಣಾಂತಿಕ ಬರೆ ಎಳೆಯುವಂತಿದೆ ಮುನಿರತ್ನರ ಈ ದುರಹಂಕಾರ. ಸೃಷ್ಟಿಸಿದ ಕಿರಾತಕ ಸುಳ್ಳನ್ನೇ ಸಿನಿಮಾ ಮಾಡಿ ಒಕ್ಕಲಿಗರನ್ನು ಇತಿಹಾಸದಲ್ಲಿ ಶಾಶ್ವತವಾಗಿ ಖಳನಾಯಕರನ್ನಾಗಿ ಚಿತ್ರಿಸುವುದೇ ಅವರ ದುರುದ್ದೇಶವಾಗಿದೆ. ಈ ದ್ರೋಹವನ್ನು ಒಕ್ಕಲಿಗರು ಸಹಿಸುವ ಪ್ರಶ್ನೆಯೇ ಇಲ್ಲ.



ಚರಿತ್ರೆಯನ್ನು ವಿರೂಪಗೊಳಿಸುವ ನಿರ್ಲಜ್ಜ ರಾಜಕಾರಣಕ್ಕೆ ಮೂಲ ಕಾರಣರು ಯಾರು? ಇಷ್ಟಕ್ಕೂ, ಈ ಮುನಿರತ್ನಗೂ ಮಂಡ್ಯದ ಒಕ್ಕಲಿಗರಿಗೂ ಸಂಬಂಧವೇನು? ಒಕ್ಕಲಿಗ ಕುಲದಲ್ಲೇ ಹುಟ್ಟಿ ಒಕ್ಕಲು ಸಂಕುಲಕ್ಕೆ ಟಿಪ್ಪು ಕೊಲೆಯ ಕೊಳೆ ಮೆತ್ತಿಸಲು ಹೊರಟಿರುವ ಒಕ್ಕಲು ಕುಲದ ಇಬ್ಬರು ನಿಜವಾದ ಖಳನಾಯಕರನ್ನು, ಒಕ್ಕಲಿಗರೆಂದೂ ಕ್ಷಮಿಸರು. ಮುನಿರತ್ನ ಮಾಡುವ ಸಿನಿಮಾಕ್ಕೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಕಥೆ ಬರೆಯುತ್ತಾರಾ? ಟಿಪ್ಪು ನೆಪದಲ್ಲಿ ಜನ್ಮತಳೆದ ಜಾತಿ ವಿರುದ್ಧವೇ ವಿಷ ಕಕ್ಕುತ್ತಿರುವ ಎತ್ತಿಕಟ್ಟುತ್ತಿರುವ ಸಿ.ಟಿ.ರವಿ ಅವರು ಉರಿಗೌಡ, ನಂಜೇಗೌಡರೆಂಬ ಕಲ್ಪಿತ ಹೆಸರುಗಳ ನೆಪದಲ್ಲಿ ದಿನವೂ ವಿಷ ಕಕ್ಕುತ್ತಿದ್ದಾರೆ.

ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ ಎಂದು ಸದಾ ಬಡಬಡಿಸುತ್ತಿದ್ದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರಂತೂ ಈಗ ಉರಿಗೌಡ, ನಂಜೇಗೌಡ ಎಂದು ವಿಷನಂಜು ಉಗುಳುತ್ತಿದ್ದಾರೆ. ಅವರು ಈ ಸಿನಿಮಾಕ್ಕೆ ಚಿತ್ರಕಥೆ ಬರೆಯುತ್ತಾರೆಯೇ? ಬರೆದರೂ ಬರೆಯಬಹುದು.

ಏಕೆಂದರೆ, ಇವರಿಬ್ಬರೂ ಕುಲದ್ರೋಹಿಗಳಷ್ಟೇ ಅಲ್ಲ, ಒಕ್ಕಲು ಸಂಕುಲದ ವಿನಾಶಕರು. ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತಿದೆ ಬಿಜೆಪಿ ಸ್ಥಿತಿ. ಪ್ರತೀ ಸೂಕ್ಷ್ಮ ವಿಷಯದಲ್ಲೂ ಮತ ರಾಜಕಾರಣ ಮಾಡುವ ಕಮಲ ಪಕ್ಷಕ್ಕೆ ಕರ್ನಾಟಕವೇ ಪ್ರಯೋಗಶಾಲೆ. ಜಾತಿ, ಧರ್ಮಗಳ ನಡುವೆ ಕಿಚ್ಚಿಟ್ಟು, ಸರ್ವ ಜನಾಂಗದ ತೋಟವಾದ ಕರ್ನಾಟಕಕ್ಕೆ ಕೋಮುಪ್ರಾಷನ ಮಾಡಿಸುತ್ತಿದೆ

ಉರಿಗೌಡ, ನಂಜೇಗೌಡ ಎಂಬ ಕಲ್ಪಿತ ಒಕ್ಕಲಿಗ ಹೆಸರುಗಳ ಸೃಷ್ಟಿ, ಸಿನಿಮಾ ಮಾಡುವ ದುರುಳ ಐಡಿಯಾ, ಒಕ್ಕಲಿಗರ ಮೇಲೆ ಬೀರುತ್ತಿರುವ ವಕ್ರದೃಷ್ಟಿ.. ಇದೆಲ್ಲವೂ ಒಕ್ಕಲಿಗರನ್ನು ರಾಜಕೀಯವಾಗಿ ಮುಗಿಸಿಬಿಡುವ ಬಿಜೆಪಿ ರಕ್ಕಸ ಹಿಡೆನ್ ಅಜೆಂಡಾ ಅಲ್ಲದೆ ಮತ್ತೇನೂ ಅಲ್ಲ ಎಂದಿದ್ದಾರೆ.

# ಎನ್‌ಪಿಎಸ್ ರದ್ದುಗೊಳಿಸಲು ಆಗ್ರಹಿಸಿ ಮಾ.21ರಂದು ಮೈಸೂರಲ್ಲಿ ಭಾರೀ ಪ್ರತಿಭಟನೆ

ಮೈಸೂರು, ಮಾ.17(ಎಂಟಿವೈ)– ಎನ್‌ಪಿಎಸ್ ವ್ಯವಸ್ಥೆ ರದ್ದುಗೊಳಿಸಿ, ಹಳೆ ಪಿಂಚಣಿ ವ್ಯವಸ್ಥೆ ಮರು ಜಾರಿಗೊಳಿಸುವಂತೆ ಆಗ್ರಹಿಸಿ ಹಳೆಯ ಪಿಂಚಣಿ ಯೋಜನೆ ಮರುಸ್ಥಾಪನೆಗಾಗಿ ಜಂಟಿ ವೇದಿಕೆ ವತಿಯಿಂದ ಮೈಸೂರಲ್ಲಿ ಮಾ. 21ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲು ಉದ್ದೇಶಿಸಲಾಗಿದೆ ಎಂದು ಹಳೆಯ ಪಿಂಚಣಿ ಯೋಜನೆ ಮರುಸ್ಥಾಪನೆಗಾಗಿ ಜಂಟಿ ವೇದಿಕೆಯ ವಿಭಾಗೀಯ ಕಾರ್ಯದರ್ಶಿ ಶಿವಪ್ರಕಾಶ್ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಪಿಎಸ್ ವ್ಯವಸ್ಥೆಯನ್ನು 2004ರಲ್ಲಿಯೇ ಕಾರ್ಮಿಕ ಸಂಘಟನೆಗಳು ವಿರೋಧಿಸಿದ್ದವು. ಹೊಸ ಪಿಂಚಣಿ ಯೋಜನೆಯು ಮುಂಬರುವ ದಿನದಲ್ಲಿ ನೋ ಪೆನ್ಷನ್ ಯೋಜನೆ ಆಗಲಿದೆ ಎಂದು ಅನುಮಾನ ದಟ್ಟವಾಗಿದೆ. ಅದರಂತೆ ಈಗ ನೌಕರರು ಮತ್ತು ಕಾರ್ಮಿಕರು ಪಿಂಚಣಿ ರಹಿತರಾಗುತ್ತಿದ್ದಾರೆ. ಎನ್‌ಪಿಎಸ್ ಪೂರ್ಣಗೊಂಡ 18 ವರ್ಷಗಳ ಬಳಿಕ ನೌಕರರು ಬದುಕು ದುಸ್ತರವಾಗಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸರ್ಕಾರಿ ನೌಕರರ ಸಂಘ ಪ್ರತ್ಯೇಕವಾಗಿ ಇದುವರೆಗೂ ಹೋರಾಟ ನಡೆಸುತ್ತಾ ಬಂದಿದ್ದವು. ಇದೀಗ ಒಟ್ಟಾಗಿ ಹೋರಾಟ ಮಾಡಲು ಜಂಟಿ ವೇದಿಕೆಯನ್ನು ರಚಿಸಲಾಗಿದೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ವರ್ಗಗಳ ನಿರಂತರ ಹೋರಾಟದಿಂದ ಜಾರ್ಖಂಡ್, ರಾಜಸ್ಥಾನ, ಛತ್ತೀಸ್‌ಗಡ, ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳು ಎನ್‌ಪಿಎಸ್ ರದ್ದುಪಡಿಸಲು, ಒಪಿಎಸ್ ಮರು ಜಾರಿಗೊಳಿಸಲು ಅಧಿಸೂಚನೆ ಹೊರಡಿಸಿವೆ. ಆದರೆ ಕೇಂದ್ರ ಸರ್ಕಾರ ಎನ್‌ಪಿಎಸ್ ಅನ್ನು ರದ್ದುಪಡಿಸಲು ಇನ್ನೂ ಸಿದ್ಧವಾಗಿಲ್ಲ. ಇದು ಕಾರ್ಮಿಕರ ತಲೆಯ ಮೇಲೆ ನೇತಾಡುವ ಕತ್ತಿಯಂತೆ ಚಾಲ್ತಿಯಲ್ಲಿದೆ. ಕೇಂದ್ರ ಸರ್ಕಾರ ನೌಕರರ ಹಿತ ಬಲಿ ಕೊಡುತ್ತಿದೆ. ಈ ಹಿನ್ನೆಲೆಯಲ್ಲಿ ಸರಣಿ ಪ್ರತಿಭಟನೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಮಾ.21 ರಂದು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯಿಂದ ಬೃಹತ್ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಚಲೋ ನಡೆಸಲಾಗುತ್ತದೆ. ಈ ಪ್ರತಿಭಟನಾ ಮೆರವಣಿಗೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು ಪಾಲ್ಗೊಳ್ಳಲಿದ್ದಾರೆ. ಮುಂಬರುವ ದಿನಗಳಲ್ಲಿ ದೆಹಲಿ ಚಲೋ, ಪಂಜಿನ ಮೆರವಣಿಗೆ, ಕುಟುಂಬದ ಸದಸ್ಯರಿಂದ ಮೆರವಣಿಗೆ ಸೇರಿದಂತೆ ವಿವಿಧ ಸ್ವರೂಪದ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಿಭಾಗೀಯ ಅಧ್ಯಕ್ಷ ಸೋಮೇಗೌಡ, ವಲಯ ಕಾರ್ಯದರ್ಶಿ ಆರ್ಥರ್ ಫರ್ನಾಂಡೀಸ್, ವಿಭಾಗೀಯ ಅಧ್ಯಕ್ಷ ಸೋಮಶೇಖರ್, ತುಳಜಪ್ಪ ನಡಗಟ್ಟಿ, ಡಿ.ಶಿವಪ್ರಕಾಶ್, ಪವಿತ್ರನ್ ಇದ್ದರು.

# ಯಡಿಯೂರಪ್ಪ, ಸೋಮಣ್ಣ ನಡುವೆ ಮನಸ್ತಾಪ ಇಲ್ಲ

**● ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಸ್ಪಷ್ಟನೆ**

**● ಇಬ್ಬರು ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸುತ್ತಿದ್ದಾರೆ**



ಮೈಸೂರು, ಮಾ.17(ಎಂಟಿವೈ)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ವಸತಿ ಸಚಿವ ವಿ.ಸೋಮಣ್ಣ ಅವರಿಬ್ಬರ ನಡುವೆ ಯಾವುದೇ ಮನಸ್ತಾಪವಿಲ್ಲ. ಮುಂಬರುವ ಚುನಾವಣೆಯಲ್ಲಿ ಈ ಇಬ್ಬರೂ ನಾಯಕರು ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಲಿದ್ದಾರೆ ಎಂದು ಕೈಗಾರಿಕಾ ಸಚಿವ ಮುರುಗೇಶ್ ಆರ್.ನಿರಾಣಿ ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾಜಿ ಸಿಎಂ ಯಡಿಯೂರಪ್ಪ ನಮ್ಮ ನಾಯಕರು. ಸೋಮಣ್ಣ ಅವರೂ ಸಮಾನವಾಗಿ ಬೆಳೆದು ಬಂದಿದ್ದಾರೆ. ಇಬ್ಬರ ನಡುವೆ ಯಾವುದೇ ಮನಸ್ತಾಪ ಇಲ್ಲ. ವಿ.ಸೋಮಣ್ಣ ಹಲವಾರು ಬಾರಿ ದೆಹಲಿಗೆ ಹೋಗಿದ್ದಾರೆ. ನಾನೂ ದೆಹಲಿಗೆ ಹೋಗಿ ಬಂದಿದ್ದೇನೆ. ಅದರಲ್ಲಿ ವಿಶೇಷವೇನು ಇಲ್ಲ. ಸಣ್ಣಪುಟ್ಟ ಸಮಸ್ಯೆ ಇದ್ದರೆ ನಮ್ಮ ನಾಯಕರು ಬಗೆಹರಿಸುತ್ತಾರೆ. ದೊಡ್ಡಮಟ್ಟದಲ್ಲಿ ಯಾವುದೇ ಸಮಸ್ಯೆ ಉಂಟಾಗಿಲ್ಲ. ನಾನು ಬೆಳಗಾವಿಯ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯ ಉಸ್ತುವಾರಿಯಾಗಿದ್ದೆ. ನನ್ನನ್ನು ಬಿಜೆಪಿ ಕಡೆಗಣಿಸಿಲ್ಲ. ಮುಂದೆಯೂ ಕಡೆಗಣಿಸುವುದಿಲ್ಲ. ಬಿಜೆಪಿಯಲ್ಲಿ 224 ಕ್ಷೇತ್ರಗಳ ಅಭ್ಯರ್ಥಿಗಳೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳೇ ಆಗಿರುತ್ತಾರೆ ಎಂದರು.

ನಮ್ಮ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬಿನ ತೂಕದಲ್ಲಿ ಮೋಸ ಮಾಡುತ್ತಾರೆ ಎಂಬುದು ಸುಳ್ಳು. ಸಿದ್ದರಾಮಯ್ಯ ಏಕೆ ಆ ರೀತಿ ಆರೋಪ ಮಾಡಿದ್ದಾರೋ ಗೊತ್ತಿಲ್ಲ. ನಮ್ಮ ಸಕ್ಕರೆ ಫ್ಯಾಕ್ಟರಿ ಬಳಿ ರೈತರ ಎದುರು ತೂಕ ಹಾಕಿ ರಿಜಿಸ್ಟರ್‌ನಲ್ಲಿ ಬರೆದುಕೊಳ್ಳಲಾಗುತ್ತದೆ. ಯಾರು ಬೇಕಾದರೂ ಪರಿಶೀಲನೆ ಮಾಡಿಕೊಳ್ಳಬಹುದು. ಪ್ರತಿ ವರ್ಷ ಸಕ್ಕರೆ ಹಂಚುತ್ತೇವೆ. ಇದನ್ನೆಲ್ಲ ಚುನಾವಣೆಗಾಗಿ ಮಾಡುತ್ತಿಲ್ಲ ಎಂದು ಹೇಳಿದರು. ರಾಜ್ಯದಲ್ಲಿ ಮತ್ತೆ 6 ವಿಮಾನ ನಿಲ್ದಾಣಗಳು ಉದ್ಘಾಟನೆಗೆ ಸಿದ್ಧವಾಗುತ್ತಿವೆ. ರಾಯಚೂರು, ಚಿಕ್ಕಮಗಳೂರು, ದಾವಣಗೆರೆ ಸೇರಿದಂತೆ ಒಟ್ಟು 6 ಕಡೆ ವಿಮಾನ ನಿಲ್ದಾಣಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

100 ಕಿಲೋಮೀಟರ್‌ಗೆ ಒಂದರಂತೆ ವಿಮಾನ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

# ನಾಳೆ 'ಹಾಡೊಂದು ನಾ ಹಾಡುವೆನು' ಗೀತ ಗಾಯನ ಕಾರ್ಯಕ್ರಮ

ಮೈಸೂರು, ಮಾ.17(ಎಂಟಿವೈ)– ಮೈಸೂರಿನ ಪುರಭವನದ ಸಭಾಂಗಣದಲ್ಲಿ ಮಾ.19ರಂದು ಸಂಜೆ 5ಕ್ಕೆ ಜನಚೈತನ್ಯ ಫೌಂಡೇಷನ್ ವತಿಯಿಂದ 'ಹಾಡೊಂದು ನಾ ಹಾಡುವೆನು' ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಚೈತನ್ಯ ಫೌಂಡೇಷನ್ ವತಿಯಿಂದ ಕಳೆದ ಹಲವು ತಿಂಗಳಿಂದ ಗೀತ ಗಾಯನದ ಮೂಲಕ ದಿಗ್ಗಜರಿಗೆ ಗೌರವ ಸಮರ್ಪಿಸುವ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಹಾಡೊಂದು ನಾ ಹಾಡುವೆನು ಕಾರ್ಯಕ್ರಮದಲ್ಲಿ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳು ಚಲನಚಿತ್ರಗೀತೆಗಳ ಗೀತೆಗಳನ್ನು ಹಾಡಲಾಗುವುದು. ಸಮಾಜ ಸೇವಕ ಕೆ.ರಘುರಾಂ ಈ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲೇಖಕ ಅಮ್ಮಸಂದ್ರ ಸುರೇಶ್ ವಹಿಸಲಿದ್ದಾರೆ ಎಂದರು. ಗಾಯಕರಾದ ಆರ್. ಲಕ್ಷ್ಮಣ್, ಎಂ. ಪುಟ್ಟಸ್ವಾಮಿ, ಉಮೇಶ್, ಮೇರಿ ಬೆಸಲಿಕ, ಕೆ.ಪಿ. ಪ್ರೇಮಾಕುಮಾರಿ, ಆರ್.ದಾಸು, ಡಾ. ರೇಖಾ ಅರುಣ್, ಅಜರುದ್ದೀನ್, ಎನ್. ಗುರುರಾಜ್, ಡಾ. ಸುರೇಂದ್ರನ್, ಎನ್.ಬಸವರಾಜು, ಎನ್. ಶ್ರೀನಿವಾಸಲು, ಸತ್ಯವತಿ, ಎನ್.ಲೋಕೇಶ್, ಪಿ.ಗುರುಸ್ವಾಮಿ, ಚಾಮುಂಡಿ ಮತ್ತು ಲಕ್ಷ್ಮೀ ಅವರು ಕನ್ನಡ, ಹಿಂದಿ, ತೆಲಗು, ತಮಿಳು ಚಿತ್ರಗೀತೆಗಳನ್ನು ಹಾಡುವರು. ಗಾಯಕ ಎಂ. ಪುಟ್ಟಸ್ವಾಮಿ, ಉಮೇಶ್, ಸತ್ಯವತಿ, ತಿಪ್ಪಯ್ಯ, ಪಿ. ಪ್ರಶಾಂತ್ ಇದ್ದರು.

# ನಿಧನ



### ಗುರುರಾಜ್

ಮೈಸೂರು, ಮಾ. 17– ಮೈಸೂರಿನ ಟಿ.ಕೆ.ಬಡಾವಣೆಯ ನಿವಾಸಿ, ಜೆಡಿಎಸ್ ಮುಖಂಡ ಹಾಗೂ ಉಪೇಂದ್ರ ಅಭಿಮಾನಿ ಬಳಗದ ಅಧ್ಯಕ್ಷರಾಗಿದ್ದ ಗುರುರಾಜ್ (55) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಮತ್ತು ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಪೈಲ್ವಾನ್ ಗಂಗಾಧರಯ್ಯ



ಮೈಸೂರಿನ ಅಶೋಕಪುರಂ ನಿವಾಸಿ ಹಾಗೂ ಚಿಕ್ಕಗರಡಿ ಉಸ್ತಾದ್ ಪೈಲ್ವಾನ್ ಗಂಗಾಧರಯ್ಯ (82) ಗುರುವಾರ ನಿಧನರಾದರು. ಮೈಸೂರು ಮಹಾನಗರ ಪಾಲಿಕೆ ನಿವೃತ್ತ ಉದ್ಯೋಗಿಯಾದ ಇವರು, ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಗಂಗಾಧರಯ್ಯ ಅವರು ಹಲವಾರು ಭಾಗಗಳಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ, ಪದಕಗಳನ್ನು ಗೆದ್ದಿದ್ದರು. ಅಂತ್ಯಕ್ರಿಯೆ ವಿಶ್ವೇಶ್ವರನಗರದ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



### ಚಿಕ್ಕೀರಮ್ಮ

ಮೈಸೂರಿನ ಹೊಸಬಂಡಿಕೇರಿಯ 3ನೇ ಕ್ರಾಸ್ ನಿವಾಸಿ ಚಿಕ್ಕೀರಮ್ಮ (90) ಗುರುವಾರ ನಿಧನರಾದರು. ಮೃತರು ಐವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಡಿ.ಎನ್.ಪುಟ್ಟಮ್ಮ



ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿ ಡಿ.ಎನ್. ಪುಟ್ಟಮ್ಮ (89) ಗುರುವಾರ ನಿಧನರಾದರು. ಮೃತರು ಪುತ್ರಿ ವಿ.ಡಿ. ಉಮಾರಾಣಿ, ಅಳಿಯ ಕೆ.ಟಿ.ಜಯಣ್ಣ, ಮೊಮ್ಮಕ್ಕಳಾದ ಸುಚೇತಾ, ಸುಶಾಂತ್ ಮತ್ತು ಪ್ರೇಮ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



### ಕೆ.ಎಸ್.ಮಹೇಶ್‌ಕುಮಾರ್

**ನಂಜನಗೂಡು:** ನಂಜನಗೂಡು ಪುರಸಭಾ ಸದಸ್ಯರಾದ ಕೆ.ಎಸ್.ಮಹೇಶ್ ಕುಮಾರ್ (63) ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವೀರಶೈವ–ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ನಾಗರತ್ನಮ್ಮ



ಮೈಸೂರು, ಮಾ.17–ನಂಜನಗೂಡು ತಾಲೂಕು ತಗಡೂರು ನಿವಾಸಿ, ಶತಾಯುಷಿ ನಾಗರತ್ನಮ್ಮ(101) ಅವರು ಗುರುವಾರ ನಿಧನರಾದರು. ಇವರು ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುರುವಾರವೇ ತಗಡೂರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



### ವಿ.ನಂಜುಂಡಯ್ಯ

ಮೈಸೂರು, ಮಾ.17–ಮೈಸೂರಿನ ಟಿ.ಕೆ.ಲೇಔಟ್ ನಿವಾಸಿ, ಕೆ.ಆರ್.ಆಸ್ಪತ್ರೆಯ ನಿವೃತ್ತ ನರ್ಸಿಂಗ್ ಪ್ರಾಂಶುಪಾಲರಾದ ವಿ.ನಂಜುಂಡಯ್ಯ(90) ಅವರು ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ನಾಳೆ (ಶನಿವಾರ) ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಇಂದು ವಿದ್ಯುತ್ ಅದಾಲತ್

ಮೈಸೂರು, ಮಾ.17– ಚಾ.ವಿ.ಸ.ನಿ.ನಿ.ಯ ನರಸಿಂಹರಾಜ ಮೊಹಲ್ಲಾ ವಿಭಾಗ ವ್ಯಾಪ್ತಿಯ ಉಪವಿಭಾಗಗಳಾದ ಕೇಂದ್ರ, ಜ್ಯೋತಿನಗರ, ನರಸಿಂಹರಾಜ ಮೊಹಲ್ಲಾ ಚಾಮುಂಡಿಪುರಂ ಹಾಗೂ ವರುಣಾ ಉಪವಿಭಾಗಳ ವ್ಯಾಪ್ತಿಯಲ್ಲಿರುವ ಗ್ರಾಹಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮಾ.18 ರಂದು ಬೆಳಗ್ಗೆ 11 ಗಂಟೆಗೆ ಎಲ್ಲಾ ಉಪವಿಭಾಗ ಕಛೇರಿಗಳಲ್ಲಿ ವಿದ್ಯುತ್ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಆಯಾಯ ಉಪವಿಭಾಗದ ವ್ಯಾಪ್ತಿಯ ಆಯ್ದ ಗ್ರಾಮಗಳಲ್ಲಿ ನಡೆಯುವ ವಿದ್ಯುತ್ ಅದಾಲತ್ ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಮಾಸ್ಕ್ (ಮುಖ ಕವಚ) ಅನ್ನು ಹಾಕಿಕೊಂಡು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಸೆಸ್ಕ್ ಪ್ರಕಟಣೆ ತಿಳಿಸಿದೆ.


# ನಾಳೆ 1440 ಮನೆಗಳ ಶಂಕುಸ್ಥಾಪನೆ

ಮೈಸೂರು, ಮಾ.17–ಮಾ.19 ರಂದು ಮೈಸೂರು ಮಹಾನಗರ ಪಾಲಿಕೆ ಕೃಷ್ಣರಾಜ ಕ್ಷೇತ್ರದ ಆಶ್ರಯ ಸಮಿತಿ ವತಿಯಿಂದ ಲಲಿತಾದ್ರಿಪುರದಲ್ಲಿ 1440 ಮನೆಗಳ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರಮನೆಯ ಧ್ವನಿ–ಬೆಳಕು ಕಾರ್ಯಕ್ರಮ ತಾತ್ಕಾಲಿಕ ರದ್ದು

ಮೈಸೂರು, ಮಾ.17– ವಿಶ್ವ–ವಿಖ್ಯಾತ ಮೈಸೂರು ಅರಮನೆ ಆವರಣದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಅರಮನೆ ಮಂಡಳಿ ವತಿಯಿಂದ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸದರಿ ಸಂಗೀತೋತ್ಸವಕ್ಕೆ ಪೂರ್ವಭಾವಿ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಮಾ.20 ರಿಂದ 26 ರವರೆಗೆ ಮೈಸೂರು ಅರಮನೆ ಆವರಣದಲ್ಲಿ ಸಂಜೆ 7 ರಿಂದ 8 ಗಂಟೆಯವರೆಗೆ ನಡೆಸಲ್ಪಡುವ 'ಧ್ವನಿ ಮತ್ತು ಬೆಳಕು' ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿರುತ್ತದೆ ಎಂದು ಅರಮನೆ ಮಂಡಳಿಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**18.3.2023 ಶನಿವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023**
**ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,**
**ತಿಥಿ: ಏಕಾದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ**

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ – ಸಿ.ಎಫ್.ಟಿ.ಆರ್.ಐ. ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ಉಪಾಸನಾ ಮೋಹನ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಬಸವನಗಿರಿ ಹಾಡಿಯ ಭಾಗ್ಯಮ್ಮ ಅವರೊಂದಿಗೆ ಸಂವಾದ. ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಸ್ಮಿತಾ ಶ್ರೀ ಕಿರಣ್–ವೇಣುವಾದನ

**ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ರಾಮಶೆಟ್ಟಿ ಮತ್ತು ತಂಡ, 1.20 ಭಾವಗೀತೆ– ಎನ್.ಹೇಮಾ, 3.30 ಮಕ್ಕಳ ಮಂಟಪ–ಕೆ.ಆರ್. ಪೇಟೆ ತಾಲೂಕು ಕಿಕ್ಕೇರಿಯಲ್ಲಿರುವ ಕೇಂಬ್ರಿಡ್ಜ್ ಪಬ್ಲಿಕ್ ಶಾಲಾ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ– ಚಿತ್ರ ಸಾಹಿತಿ, ಹಾಸ್ಯ ನಟ ಕುಣಿಗಲ್ ನಾಗಭೂಷಣ್ ಅವರೊಂದಿಗೆ ಎಂ. ಶಂಕರಪ್ಪ ಮತ್ತು ಎಂ.ಎಸ್. ಅನುಪಮಾ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ–ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ–ಚಿತ್ರ ಚಿತ್ತಾರ, ಯುಗಾದಿ ವಿಶೇಷ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ ಶ್ರೀರಂಗಪಟ್ಟಣದ ಶ್ರಾವಣ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಎಂ. ಲಕ್ಷ್ಮಣ್–ನಾಗಸ್ವರ

- **ಜೀವನ್ ಜೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.
- **ಟಿಎಂಎನ್ ಹೆಲ್ತ್ ಸೆಂಟರ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ದೊಡ್ಡಮ್ಮತಾಯಿ ಸಮುದಾಯ ಭವನ, ಮಂಜುನಾಥಪುರ, ಬೆಳಗ್ಗೆ 10 ರಿಂದ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್ :** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30 ರಿಂದ ರಾತ್ರಿ 9.30 ರವರೆಗೆ.
- **ವ್ಯವಸ್ಥಾಪಕರು :** ಮಾಜಿ ಸಂಸದ ದಿವಂಗತ ಆರ್. ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಸಭೆ, ಸ್ಥಳ: ಶ್ರೀಮತಿ ಲೀಲಾ ಚೆನ್ನಯ್ಯ ಕಲ್ಯಾಣ ಮಂಟಪ, ವಾಲ್ಮೀಕಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ: ವಿಶ್ರಾಂತ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, ಅಧ್ಯಕ್ಷತೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಾಸ್ತಾವಿಕ ನುಡಿ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಔಟ್‌ಲುಕ್ ಮಾಜಿ ಸಂಪಾದಕ ಕೃಷ್ಣಪ್ರಸಾದ್, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತರಾದ ಕೆ.ಎನ್.ಚನ್ನೇಗೌಡ, ಜಿ.ಎನ್.ಮೋಹನ್, ಮೇಯರ್ ಶಿವಕುಮಾರ್, ಶಾಸಕ ಎಸ್.ಎ.ರಾಮದಾಸ್, ಉದ್ಯಮಿ ಎಂ.ರಾಜೇಂದ್ರ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸ್ಥಳ: ರಾಜೇಂದ್ರ ಕಲಾಮಂದಿರ, ರಾಮಾನುಜ ರಸ್ತೆ, ಬೆಳಗ್ಗೆ 10.35ಕ್ಕೆ.
- **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ:** ಮಂಜು ಮಹದೇವ್ ಹೊಂಗನೂರು ಅವರ ಜೀವಂತ ಕವನ ಸಂಕಲನ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಕವನ ಸಂಕಲನ ಲೋಕಾರ್ಪಣೆ: ಶ್ರೀ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಕವನ ಸಂಕಲನ ಕುರಿತು: ಹಿರಿಯ ಕವಿ ಡಾ. ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮುಖ್ಯ ಅತಿಥಿಗಳು: ಡಾ.ಎಂ.ಆರ್. ಜಯಪ್ರಕಾಶ್, ಪ್ರಾಂಶುಪಾಲ ಡಾ.ಮಹೇಶ್ ದಳಪತಿ, ಸ್ಥಳ: ಎಸ್.ಎನ್.ಪಿ. ಸೆಮಿನಾರ್ ಹಾಲ್, ಶ್ರೀ ನಟರಾಜ ಶಿಕ್ಷಣ ಸಂಸ್ಥೆ, ಬೆಳಗ್ಗೆ 11ಕ್ಕೆ.
- **ಸೆಂಟರ್ ಫಾರ್ ಮೆಟೀರಿಯಲ್ಸ್ ಸೈನ್ಸ್ ಅಂಡ್ ಟೆಕ್ನಾಲಜಿ, ಭೌತಶಾಸ್ತ್ರ ಅಧ್ಯಯನ ವಿಭಾಗ :** ಸುಸ್ಥಿರ ಅಭಿವೃದ್ಧಿಗಾಗಿ ಆಯಾನು ಕಿರಣಗಳ ಮೂಲಕ ವಸ್ತುಗಳ ಕುಶಲತೆ ಕುರಿತು ಡಾ. ಫೌರನ್ ಸಿಂಗ್ ಅವರಿಂದ ಉಪನ್ಯಾಸ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಎ.ಪಿ. ಜ್ಞಾನಪ್ರಕಾಶ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ.
- **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಚುಟುಕು ರತ್ನ ಡಾ. ಸಿ.ಪಿ. ಕೃಷ್ಣಕುಮಾರ್, ಪ್ರಶಸ್ತಿ ಪ್ರದಾನ : ಚುಟುಕು ಸಾಹಿತ್ಯ ಪರಿಷತ್, ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಅಭಿನಂದನಾ ಭಾಷಣ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಚುಟುಕು ಸಾಹಿತಿ ಡಾ. ಎಂ.ಜಿ.ಆರ್. ಅರಸ್, ಉಪಸ್ಥಿತರು : ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ, ಶ್ರೀಮತಿ ಮಮತಾ ಸುರೇಶ್, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು ಹಾಸ್ಟೆಲ್ ಸಭಾಂಗಣ, ಸರಸ್ವತಿಪುರಂ, ಸಂಜೆ 4ಕ್ಕೆ.
- **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಪಣೀಂದ್ರಾಚಾರ್ಯ ಅವರಿಂದ ಭಗವದ್ಗೀತೆಯ 6ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.
- **ಗಾನ ವೈದ್ಯಲೋಕ :** ಗಾನ ಸವಿಸಂಜೆ ಎಂದೂ ಮರೆಯದ ಹಾದು–4, ಉದ್ಘಾಟನೆ : ಹಿರಿಯ ರಂಗಕರ್ಮಿ ಪ್ರೊ. ಸಿ.ವಿ. ಶ್ರೀಧರಮೂರ್ತಿ, ಅಧ್ಯಕ್ಷತೆ : ಗಾನ ವೈದ್ಯಲೋಕ ಗೌರವಾಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಪ್ರಾಸ್ತಾವಿಕ ನುಡಿ : ಗಾನ ವೈದ್ಯಲೋಕ ಅಧ್ಯಕ್ಷ ಡಾ. ಟಿ. ರವಿಕುಮಾರ್, ಮುಖ್ಯ ಅತಿಥಿಗಳು : ಹಿರಿಯ ಲೇಖಕ ಎಂ.ಎಲ್. ರಮೇಶ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.
- **ಪದ್ಮಶ್ರೀ ಜೈನ ಮಹಿಳಾ ಸಮಾಜ :** ಮಧ್ಯಾಹ್ನ 3.30ಕ್ಕೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಲತಾ ಸುದರ್ಶನ್, ಉಪಸ್ಥಿತರು: ಮಹಾಕವಯತ್ರಿ ಡಾ. ಲತಾ ರಾಜಶೇಖರ್, ಶ್ರೀಮತಿ ನಾಗಶ್ರೀ ಮುಪ್ಪಾನೆ, ಶ್ರೀಮತಿ ಛಾಯಾನಂಜಪ್ಪ ರಾಜಪ್ಪ, ಸಂಜೆ 6 ರಿಂದ ಕು. ನಿಸರ್ಗ ಮತ್ತು ಕು. ವಿಸ್ಮಯ ತಂಡದವರಿಂದ ಭಾವಗೀತೆಗಳ ಸುಮಧುರ ಗಾಯನ, ಸಂಜೆ 7 ರಿಂದ ಪದ್ಮಶ್ರೀ ಜೈನ ಮಹಿಳಾ ಸಮಾಜದವರಿಂದ ನೃತ್ಯ ಕಾರ್ಯಕ್ರಮಗಳು, ಸ್ಥಳ: ಜಗನ್ಮೋಹನ ಅರಮನೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

## ನಕ್ಕರೆ ಅದೇ ಸ್ವರ್ಗ

ಗುರುಗಳು : ಸುಮ್ಮನೆ ಕುಳಿತರೆ ಯಾವ ಕೆಲಸವೂ ಆಗುವುದಿಲ್ಲ ಕಣಯ್ಯಾ

ವಿದ್ಯಾರ್ಥಿ : ಯಾಕೆ ಆಗೋಲ್ಲ ಸಾರ್. ಮೊಟ್ಟೆಯ ಮೇಲೆ ಕೋಳಿ ಸುಮ್ಮನೆ ಕುಳಿತಿರುತ್ತೆ, ಅವು ಮರಿಯಾಗಿ ಬಿಡುತ್ತವೆಯಲ್ಲಾ

ಮೈಸೂರು ಮಿತ್ರ

ಶನಿವಾರ, 18 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ..........**

ಕಷ್ಟಪಟ್ಟು ದುಡಿಯುವುದರಲ್ಲಿ ಯಾವ ಅವಮಾನವೂ ಇಲ್ಲ.

– ಜಮನಾಲಾಲ್ ಬಜಾಜ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಂಬಿ ತುಂಬಿ ಹೊಯ್ದರೂ ಹಂಬಲ ಮಾತ್ರ ಹೋಗದು

## ನಿಮ್ಮ ಪತ್ರಗಳು

### ಟೋಲ್ ಹೆಸರಿನಲ್ಲಿ ಸಾಗಾಣಿಕೆ ದರ ಏರಿಕೆ ಅಸಮರ್ಥನೀಯ

ಮಾನ್ಯರೆ,

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಸಂಚಾರಕ್ಕೆ ಟೋಲ್ ಶುಲ್ಕ ವಸೂಲಿ ಮಾಡುತ್ತಿರುವುದರಿಂದ ಬೆಂಗಳೂರು–ಮೈಸೂರು ಬಸ್ ಪ್ರಯಾಣ ದರವನ್ನು ಕೆಎಸ್‌ಆರ್‌ಟಿಸಿ ರೂ.15 ರಿಂದ 20ರೂ.ಗಳವರೆಗೆ ಹೆಚ್ಚಳ ಮಾಡಿದೆ ಎಂದು ವರದಿಯಾಗಿದೆ. ಅಲ್ಲದೇ ಇತ್ತೀಚೆಗೆ ಸರಕು ಸಾಗಾಣಿಕೆಗೆ ಸಂಬಂಧಿಸಿದಂತೆ ಲಾರಿ ಮಾಲೀಕರು ಸಭೆ ಸೇರಿ ಸರಕು ಸಾಗಾಣಿಕೆ ದರವನ್ನು ಹೆಚ್ಚಳ ಮಾಡಲು ನಿರ್ಧರಿಸಿರುವ ಬಗ್ಗೆಯೂ ವರದಿಯಾಗಿದೆ. ಈ ರೀತಿ ಸಂಘಟಿತ ವಲಯಗಳು ಏಕಮುಖವಾಗಿ ದರವನ್ನು ಹೆಚ್ಚಿಸಿ ಅಂತಿಮವಾಗಿ ಈ ಬೆಲೆ ಏರಿಕೆಯ ನಡುವೆಯೂ ಸರಕಿನ ಮೇಲಿನ ತೆರಿಗೆ, ಸೇವೆಯ ಮೇಲಿನ ತೆರಿಗೆ, ಆದಾಯದ ಮೇಲಿನ ತೆರಿಗೆ, ವೃತ್ತಿಯ ಮೇಲಿನ ತೆರಿಗೆ, ನಿವೇಶನ, ಕಟ್ಟಡದ ಮೇಲಿನ ತೆರಿಗೆ, ರಸ್ತೆ ತೆರಿಗೆ, ಉದ್ಯಾನ ತೆರಿಗೆ, ನೀರಿನ ತೆರಿಗೆ, ಸೆಸ್, ನಿವೇಶನ ಖರೀದಿ ನೋಂದಣಿ ತೆರಿಗೆ ಸೇರಿದಂತೆ ಹಲವಾರು ತೆರಿಗೆಗಳನ್ನು ಸರ್ಕಾರ ಹುಡುಕಿ ವಿಧಿಸುತ್ತಿದೆ. ಹೀಗೆ ನಾವು ಸೇವಿಸುವ ಗಾಳಿಯನ್ನು ಹೊರತುಪಡಿಸಿ ಎಲ್ಲಾ ರೀತಿಯ ತೆರಿಗೆಯ ಮೇಲೆ ತೆರಿಗೆಯನ್ನು ಪಾವತಿಸುತ್ತಿರುವ ಈ ದೇಶದ ಅಸಂಘಟಿತ ನಾಗರಿಕನ ಮೇಲೆ ಮತ್ತೊಂದು ಪ್ರಹಾರವಾಗಿದೆ. ಈ ದಿಶೆಯಲ್ಲಿ ಅವರ ವಾದವನ್ನು ಒಪ್ಪಲು ಬರುವುದಿಲ್ಲ. ರಸ್ತೆ ಉನ್ನತೀಕರಣದಿಂದ ಪ್ರಯಾಣದ ಖರ್ಚು ಕೂಡಾ ಕಡಿಮೆಯಾಗಿರುವುದನ್ನು ಜನರ ಗಮನಕ್ಕೆ ಇವರು ತರುತ್ತಿಲ್ಲ. ಪ್ರಯಾಣದ ಅಂತರ ಈ ಹಿಂದಿಗಿಂತ ಕಡಿಮೆಯಾಗಿದೆ. ಸಮಯ ಉಳಿತಾಯವಾಗಿದೆ. ಉತ್ತಮ ರಸ್ತೆಯಿಂದಾಗಿ ವಾಹನ ದುರಸ್ತಿ ಖರ್ಚು ಕಡಿಮೆಯಾಗಿದೆ. ಇಂಧನದ ಉಳಿತಾಯದಿಂದ ಖರ್ಚು ಕಡಿಮೆಯಾಗಿದೆ. ಹೀಗೆ ಹಲವಾರು ರೀತಿಯಲ್ಲಿ ಉಳಿತಾಯವಾಗಿದ್ದು, ಸದರಿ ಉಳಿತಾಯದ ಹಣವನ್ನು ಗ್ರಾಹಕರಿಗೆ ವರ್ಗಾಯಿಸುವ ಬದಲಿಗೆ ಟೋಲ್ ಶುಲ್ಕದ ಏಕಮುಖ ವಾದವನ್ನು ಮುಂದಿಟ್ಟುಕೊಂಡು ದರ ಏರಿಕೆ ಸರಿಯಾದ ಕ್ರಮವಲ್ಲ. ಈ ಬಗ್ಗೆ ಸಂಬಂಧಿಸಿದವರು ಯೋಚಿಸಿ ಬುದ್ಧಿವಂತಿಕೆಯ ವಾದವನ್ನು ಕೈಬಿಟ್ಟು ಗ್ರಾಹಕರ ಹಿತಚಿಂತನೆ ಮಾಡಿ ಉಳಿತಾಯವನ್ನು ವರ್ಗಾಯಿಸದಿದ್ದರೂ ಪರವಾಗಿಲ್ಲ ಕನಿಷ್ಠ ಪಕ್ಷ ದರ ಏರಿಕೆ ಕ್ರಮವನ್ನು ಕೈಬಿಡಬೇಕಾಗಿದೆ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

### ಹಬ್ಬದ ಸಂದರ್ಭದಲ್ಲಿ ಸಾರಿಗೆ ನೌಕರರ ಮುಷ್ಕರ ಸೂಕ್ತವಲ್ಲ

ಮಾನ್ಯರೆ,

ತಮ್ಮ ವೇತನ ಹೆಚ್ಚಳಕ್ಕಾಗಿ ರಾಜ್ಯ ಸಾರಿಗೆ ಸಂಸ್ಥೆಯ ನೌಕರರು ಇದೇ 21 ರಿಂದ ಮುಷ್ಕರ ನಡೆಸುವುದಾಗಿ ಕರೆ ನೀಡಿದ್ದಾರೆ. ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುತ್ತಿದೆ. ಮತ್ತು ಇದೇ 22ರಂದು ಹಿಂದೂಗಳ ಪವಿತ್ರ ಹೊಸ ವರ್ಷದ ಹಬ್ಬ 'ಯುಗಾದಿ' ಇದೆ. ದೂರ–ದೂರದ ಊರುಗಳಲ್ಲಿ ಉದ್ಯೋಗ ನಿಮಿತ್ತ ನೆಲೆಸಿರುವವರು ತಮ್ಮ ಸ್ವ–ಗ್ರಾಮಗಳಿಗೆ ಬಂದು ತಮ್ಮ ಪೂರ್ವಿಕರಿಗೆ 'ಎಡೆ' ಇಡುವುದು ಸಂಪ್ರದಾಯ. ಮತ್ತು ಯುಗಾದಿ ಹಬ್ಬದ ಮಾರನೇ ದಿನ ಮಾಂಸಹಾರಿಗಳಿಗೆ 'ವರ್ಷತೊಡಕು' ವಿಶೇಷ ಹಬ್ಬ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆ ಆಗಲೆಂದೇ ಮುಷ್ಕರಕ್ಕೆ ಕರೆ ಕೊಟ್ಟಿರುವುದು ಎಷ್ಟರಮಟ್ಟಿಗೆ ಸರಿ ವಿಧಾನಸಭಾ ಚುನಾವಣೆ ಹತ್ತಿರ ಇರುವ ಈ ಸಂದರ್ಭದಲ್ಲಿ ಈ ರೀತಿಯ ಕರೆ ಕೊಟ್ಟರೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದೆಂದು ಯೋಚನೆಯು ಇರಬಹುದು. ಈಗಾಗಲೇ ಸಾರಿಗೆ ಇಲಾಖೆ ನಷ್ಟ ಅನುಭವಿಸುತ್ತಿದೆ. ಈ ರೀತಿಯ ಸಂಧೋರ್ಬಿಚಿತ ಕರೆಗಳಿಂದ, ಇಲಾಖೆ ಸಾರ್ವಜನಿಕರ ವಿಶ್ವಾಸವನ್ನು ಕಳೆದುಕೊಳ್ಳಬಹುದು.

– ಬೂಕನಕೆರೆ ವಿಜೇಂದ್ರ, ಮೈಸೂರು

### ನಿಜವಾದ ಕಲಾವಿದರನ್ನು ಗುರುತಿಸದ ಚಿತ್ರರಂಗ

ಮಾನ್ಯರೆ,

ಇತ್ತೀಚೆಗೆ ಕನ್ನಡ ಚಿತ್ರರಂಗದ ಸದಭಿರುಚಿಯ ಚಿತ್ರಗಳ ನಿರ್ದೇಶಕ ಎಸ್.ಕೆ. ಭಗವಾನ್ (ದೊರೆ–ಭಗವಾನ್) ನಿಧನರಾದದ್ದು ದುಃಖದ ಸಂಗತಿ. ಮಂತ್ರಾಲಯ ಮಹಾತ್ಮೆ ಬಯಲುದಾರಿ, ಎರಡು ಕನಸು, ಕಸ್ತೂರಿನಿವಾಸ, ಚಂದನದ ಗೊಂಬೆ, ಬೆಂಕಿಯ ಬಲೆ ಇನ್ನೂ ಅನೇಕ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ ಖ್ಯಾತಿ ಅವರದ್ದು. ಕನ್ನಡಿಗರ ಆರಾಧ್ಯ ದೈವ ಡಾ.ರಾಜ್ ಕುಟುಂಬದ ಜೊತೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಅವರ ಸೇವೆಯನ್ನು ಕನ್ನಡ ಚಿತ್ರರಂಗ ಗುರುತಿಸಿ ಒಂದು ನಿವೇಶನವನ್ನು ಕಲಾವಿದರ ಕೋಟಾದಿಂದ ಕೊಡಬಹುದಿತ್ತು. ಕೊನೆವರೆಗೂ ಅವರು ಪಾಪ ಬಾಡಿಗೆ ಮನೆಯಲ್ಲೇ ವಾಸವಿದ್ದರು. ಕನ್ನಡಿಗರ ಹೃದಯದಲ್ಲಿ ಅವರ ಚಿತ್ರಗಳು ಅಜರಾಮರ. ತಾಯಿ ಚಾಮುಂಡೇಶ್ವರಿ ಅವರ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ.

–ಜಿ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.


### ಈ ಬಾರಿಯ ಮೌಲ್ಯಾಂಕನ ಪರೀಕ್ಷೆಯು ಯಶಸ್ವಿಯಾಗಲಿ!

ಮಾನ್ಯರೆ,

ವಿದ್ಯಾರ್ಥಿಗಳ ಕಲಿಕಾ ಸಾಧನ ಮಟ್ಟವನ್ನು ಸಮೀಕ್ಷೆ ಮಾಡುವ ಉದ್ದೇಶದಿಂದ ಈ ಬಾರಿ 5 ಹಾಗೂ 8ನೇ ತರಗತಿಯ ಮಕ್ಕಳಿಗೆ ರಾಜ್ಯ ಸರ್ಕಾರ ಈ ಮೌಲ್ಯಾಂಕನ ಪರೀಕ್ಷೆ ನಡೆಸುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಪ್ರಸ್ತುತ ಹೈಕೋರ್ಟ್‌ನ ವಿಭಾಗಿಯ ಪೀಠವು ಪರೀಕ್ಷೆ ನಡೆಸಲು ಅನುಮತಿ ನೀಡಿರುವುದರಿಂದ ರಾಜ್ಯ ಪಠ್ಯಕ್ರಮ ಬೋಧಿಸುತ್ತಿರುವ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳು ಈ ಮೌಲ್ಯಾಂಕನ ಪರೀಕ್ಷೆಗಳನ್ನು ಮಕ್ಕಳಿಗೆ ನಡೆಸಬೇಕಾಗುತ್ತದೆ. ಸಾಮಾನ್ಯ ಪರೀಕ್ಷೆಯಲ್ಲಿ 100 ಅಂಕದ ಪ್ರಶ್ನೆಪತ್ರಿಕೆ ನೀಡಿ ಅದಕ್ಕೆ ಉತ್ತರ ಬರೆಯುವಂತೆ ಸೂಚಿಸಲಾಗುತ್ತಿತ್ತು. ಆದರೀಗ ಪ್ರತಿ ವಿಷಯಕ್ಕೆ ಲಿಖಿತ ಪರೀಕ್ಷೆಗೆ 30 ಅಂಕಗಳನ್ನು ನಿಗದಿ ಮಾಡಲಾಗಿದೆ. ಈ ಮೌಲ್ಯಾಂಕನ ಪರೀಕ್ಷೆಯು ಆಯಾ ಶಾಲಾ ಹಂತದಲ್ಲಿಯೇ ನಡೆಸಲಾಗುತ್ತದೆ. ಪರೀಕ್ಷೆ ಕಾರಣಕ್ಕಾಗಿ ಯಾವುದೇ ವಿದ್ಯಾರ್ಥಿಯನ್ನು ಅದೇ ತರಗತಿಯಲ್ಲಿ ಕಲಿಕಾ ಪ್ರಗತಿ ಸಾಧಿಸದ ವಿದ್ಯಾರ್ಥಿ ಎಂದು ಪರಿಗಣಿಸಿ ಅನುತ್ತೀರ್ಣಗೊಳಿಸಬಾರದು ಎಂದು ರಾಜ್ಯ ಸರ್ಕಾರ ಈಗಾಗಲೇ ತನ್ನ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದೆ. ವಿದ್ಯಾರ್ಥಿಗಳ ಕಾರ್ಯಕ್ಷಮತೆ ಅಥವಾ ಪ್ರಗತಿಯ ಬಗ್ಗೆ ಸೂಕ್ತವಾದ ಮಾಹಿತಿಯನ್ನು ಸಂಗ್ರಹಿಸುವುದು ಈ ಮೌಲ್ಯಂಕನದ ಉದ್ದೇಶ. ಅಲ್ಲದೆ ಪಠ್ಯಕ್ರಮ ನಿಗದಿಪಡಿಸಿದ ಗುರಿ ಉದ್ದೇಶಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದ್ದಾರೆ ಎಂಬುದನ್ನು ತೀರ್ಮಾನಿಸಲು ಹಾಗೂ ಮಗುವಿನ ಕಲಿಕೆ ಮತ್ತು ಪ್ರಗತಿಯನ್ನು ಇನ್ನಷ್ಟು ಉತ್ತಮ ಪಡಿಸಲು ಮೌಲ್ಯಂಕನ ಪರೀಕ್ಷೆ ಬೋಧಿಸುವ ಶಿಕ್ಷಕರಿಗೆ ಹಾಗೂ ಯೋಜನೆ ರೂಪಿಸುವ ಸರ್ಕಾರಕ್ಕೆ ನೆರವಾಗಲಿದೆ. ಹೀಗಾಗಿ ಐದು ಹಾಗೂ ಎಂಟನೇ ತರಗತಿಯ ಮಕ್ಕಳಿಗೆ ರಾಜ್ಯ ಸರ್ಕಾರ ನಡೆಸಲು ಉದ್ದೇಶಿಸಿರುವ ರಾಜ್ಯಮಟ್ಟದ ಮೌಲ್ಯಾಂಕನ ಪರೀಕ್ಷೆಯು ಬಹಳ ಉತ್ತಮ ಹಾಗೂ ಪ್ರಯೋಜನಕಾರಿಯಾಗಿದ್ದು, ಈ ಬಗ್ಗೆ ಯಾವುದೇ ವಿದ್ಯಾರ್ಥಿಗಳು ಭಯಪಡದೆ ಮುಕ್ತ ಮನಸ್ಸಿನಿಂದ ಪರೀಕ್ಷೆಯನ್ನು ಬರೆಯಲಿ ಹಾಗೂ ಪೋಷಕರು ಕೂಡ ಯಾವುದೇ ಗೊಂದಲ ಅನುಮಾನಗಳಿಗೆ ಆಸ್ಪದ ಕೊಡದೆ ಸರ್ಕಾರದ ಜೊತೆ ಕೈಜೋಡಿಸಿ ಈ ಬಾರಿಯ ಮೌಲ್ಯಾಂಕನ ಪರೀಕ್ಷೆಯನ್ನು ಯಶಸ್ವಿಗೊಳಿಸಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

# ಪ್ರಜಾಪ್ರಭುತ್ವ, ಚುನಾವಣೆ ಮತ್ತು ಚುನಾವಣಾ ಸುಧಾರಣೆ



ಪ್ರೊ.ಎಂ.ಉಮಾಪತಿ
ಸಂಚಾಲಕರು
ಮೈಸೂರು ಓಪನ್ ಫೋರಂ

> “ ಪ್ರಜಾಪ್ರಭುತ್ವ ವ್ಯವಸ್ಥೆಯ ಆಧಾರಸ್ತಂಭವಾಗಿ ಚುನಾವಣೆಗಳಿವೆ. ಇದರ ಬೇರೆ ಎಲ್ಲಾ ಪ್ರಕ್ರಿಯೆಗಳಿಗಿಂತ ಚುನಾವಣಾ ಪ್ರಕ್ರಿಯೆ ಅತೀ ಪ್ರಮುಖ ಬೃಹತ್ ಗಾತ್ರದ, ಕ್ಲಿಷ್ಟ ಹಾಗೂ ಜನ ಭಾಗವಹಿಸುವ ಪ್ರಕ್ರಿಯೆಯಾಗಿರುತ್ತದೆ. ಇದು ಭ್ರಷ್ಟಾಚಾರಕ್ಕೆ ತೆರೆದ ವ್ಯವಸ್ಥೆಯೂ ಆಗಿರುತ್ತದೆ. ಕಾಲದಿಂದ ಕಾಲಕ್ಕೆ ಚುನಾವಣಾ ವ್ಯವಸ್ಥೆಯನ್ನು ಪರಿಶೀಲಿಸುವ ಅಗತ್ಯವಿದೆ.

**ಚು**ನಾವಣೆಗಳ ಕಾಲ ರಾಜಕೀಯ ವಸಂತ ಕಾಲ. ರಾಜಕೀಯ ವಿಷಯಗಳಾದ ಪ್ರಜಾಪ್ರಭುತ್ವ, ಚುನಾವಣೆ, ಚುನಾವಣಾ ಸುಧಾರಣೆ ಮುಂತಾದವು ಹೆಚ್ಚು ಗಮನ ಸೆಳೆಯುತ್ತವೆ. ಇವುಗಳನ್ನು ಉತ್ತಮ ಪಡಿಸುವ ದೃಷ್ಟಿಯಿಂದ ಇವುಗಳ ಬಗ್ಗೆ ವಿಶೇಷವಾದ ಚರ್ಚೆಗಳು, ವಿಮರ್ಶೆಗಳು, ವಿಶ್ಲೇಷಣೆಗಳು ನಡೆಯುತ್ತವೆ. ನ್ಯೂನತೆಗಳೂ ಗಮನಕ್ಕೆ ಬರುತ್ತವೆ. ಜೊತೆಗೆ ಪರಿಹಾರಗಳ ಸುರಿಮಳೆಯೂ ಆಗುತ್ತದೆ.

### I. ಪ್ರಜಾಪ್ರಭುತ್ವ

“ಪ್ರಜೆಗಳಿಂದ (by), ಪ್ರಜೆಗಳಿಗಾಗಿ(for) ಮತ್ತು ಪ್ರಜೆಗಳಿಗೋಸ್ಕರ (of) ಇರುವ ಸರ್ಕಾರವೇ ಪ್ರಜಾಪ್ರಭುತ್ವ” ಎಂದು ಅಮೇರಿಕಾದ ಅಧ್ಯಕ್ಷರಾಗಿದ್ದಂತಹ ಅಬ್ರಹಾಂ ಲಿಂಕನ್ ಅವರು 19ನೇ ಶತಮಾನದ ಮಧ್ಯಭಾಗದಲ್ಲಿ ಹೇಳಿದರು. ಸುಮಾರು ನೂರು ವರ್ಷಕ್ಕೂ ಹೆಚ್ಚಿನ ಕೆಲವು ವರ್ಷಗಳ ನಂತರ ಸಂಸದರಾಗಿ, ಭಾರತದ ಪ್ರಜಾಪ್ರಭುತ್ವವನ್ನೂ ಗಮನಿಸಿದ್ದ, ಮೇಧಾವಿ ಸಂಸದ ನಾಥ ಪೈ ಅವರು ಲಿಂಕನ್ನರ ಮೇಲಿನ ಹೇಳಿಕೆಯನ್ನು ತಮಾಷೆಯಾಗಿ ತಿರುಚಿ: “ಪ್ರಜೆಗಳನ್ನುಕೊಂಡುಕೊಂಡು (Buy), ಪ್ರಜೆಗಳನ್ನು ದೂರವಿಟ್ಟು (Far) ಮತ್ತು ಪ್ರಜೆಗಳನ್ನು ಆಚೆಗೆ ತಳ್ಳಿ (Off) ನಡೆಯುವಂತಹ ಸರ್ಕಾರವೇ ಪ್ರಜಾಪ್ರಭುತ್ವ” ಎಂದು ವಿವರಿಸಿದ್ದರು.

ಈ ವಿವರಣೆಗಳು ಪ್ರಜಾಪ್ರಭುತ್ವ ಸಿದ್ಧಾಂತ ಮತ್ತು ಆಚರಣೆಯಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆ ಬಗೆಗಿನ ಮಧುರ ಆಕರ್ಷಣೆಗಳು ಹಾಗೂ ನಿರಾಶೆಗಳನ್ನು ಎತ್ತಿ ತೋರಿಸುತ್ತಿವೆ. ಹಾಗೆ ನೋಡಿದರೆ ಇವೆರಡೂ ವಿವರಣೆಗಳು ಅರ್ಧ ಸತ್ಯವಾಗಿವೆ.

ಲಿಂಕನ್ನರ ವಿವರಣೆ ಡೆಮಾಸ್ ಅಂದರೆ ಜನಸಮೂಹ ಹಾಗೂ ಕ್ರೆಸಿ ಅಂದರೆ ಅವರ ಆಳ್ವಿಕೆ ಅಕ್ಷರಶಹ ರೀತಿಯಲ್ಲಿ ಪ್ರಜಾ ಪ್ರಭುತ್ವವನ್ನು ವಿವರಿಸುತ್ತದೆ. ಪ್ರಜಾಪ್ರಭುತ್ವದಲ್ಲಿ **ಆಳುವ ಎಲ್ಲಾ ಅಧಿಕಾರವೂ ಪ್ರಜೆಗಳದ್ದೇ** ಎನ್ನುವ ಅಕ್ಷರಶಹ ವಿವರಿಸುತ್ತದೆ. ಅರ್ಥವೂ ಇದರಲ್ಲಿ ಕಾಣುತ್ತದೆ. ಇವೆರಡು ಪರಿಕಲ್ಪನೆಗಳೂ ನೈಜವಲ್ಲದವು. **ವಾಸ್ತವಿಕವಾಗಿ ಎಲ್ಲಾ ಸರ್ಕಾರಗಳೂ ನಡೆಯುವುದೇ ಕೆಲವರಿಂದಲೇ.** ಹಾಗೆಯೇ **ಪ್ರಜಾಪ್ರಭುತ್ವದಲ್ಲಿ ಎಲ್ಲಾ ಅಧಿಕಾರವೂ ಜನರದ್ದೇ** ಎಂಬ ಮಾತೂ ತಪ್ಪು.

ಪ್ರಜಾಪ್ರಭುತ್ವದ ಸಾರ ಅಂದರೆ **ಯಾರಿಗೂ ಎಲ್ಲಾ ಅಧಿಕಾರಗಳು ಇಲ್ಲದಿರುವುದು**. ಪ್ರಜಾಪ್ರಭುತ್ವ ವ್ಯವಸ್ಥೆಯು ಸರ್ಕಾರದ ವಿವಿಧ ಅಂಗಗಳ (ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ) ಹಾಗೂ ವಿವಿಧ (ಕೇಂದ್ರ ಸ್ಥಳೀಯ) ಹಂತಗಳ ಸರ್ಕಾರಗಳ ನಡುವೆ ಆಳುವ **ಅಧಿಕಾರ ವಿಭಜಿಸಿ ಹಂಚುವ ಸಿದ್ಧಾಂತದಲ್ಲಿ** ನಂಬಿಕೆ ಹೊಂದಿರುತ್ತದೆ. ಹೀಗೆ ಅಧಿಕಾರ ಹಂಚುವ ಉದ್ದೇಶ, ಸರ್ಕಾರ ಒಂದು ಹುಚ್ಚು ಹೊಳೆಯಾಗಿ ಹರಿಯದಂತೆ ತಡೆಯುವುದು. ವಿವಿಧ ಅಂಗಗಳು ಪರಸ್ಪರ ಅಡೆ ತಡೆ ಒಡ್ಡಿ ಸಮತೋಲನ ತರುವ ವ್ಯವಸ್ಥೆಯಾಗಿಸುವ ಸದುದ್ದೇಶ ಇಲ್ಲಿದೆ. ಆಳ್ವಿಕೆ ಹುಚ್ಚು ಹೊಳೆಯಾದರೆ ಜನರ ಸ್ವಾತಂತ್ರ್ಯ, ಹಿತ ಹಾಗೂ ನ್ಯಾಯ ಕೊಚ್ಚಿ ಹೋಗುತ್ತವೆ. ಅಡೆ ತಡೆ ಇದ್ದಾಗ ನಿಧಾನವಾಗಿ ಆಲೋಚಿಸಿ, ಚರ್ಚಿಸಿ ಉತ್ತಮ ನೀತಿ ಆಳ್ವಿಕೆಗಳು ಹೊರ ಬರುತ್ತವೆ. ಪ್ರಜಾಪ್ರಭುತ್ವವು ಒಂದು ಸಮತೋಲನ ಹೊಂದಿದ ವ್ಯವಸ್ಥೆಯಾಗುತ್ತದೆ.

ಯಾರಿಗೂ ಎಲ್ಲಾ ಅಧಿಕಾರ ಇಲ್ಲದ ಈ ಪ್ರಜಾಪ್ರಭುತ್ವ ವ್ಯವಸ್ಥೆಗೆ ನೇರವಾಗಿ, ವಿರೋಧವಾಗಿ ಇರುವ ವ್ಯವಸ್ಥೆ ಎಂದರೆ ಒಬ್ಬ ವ್ಯಕ್ತಿಯಲ್ಲೇ ಎಲ್ಲಾ ಅಧಿಕಾರವೂ ಕೇಂದ್ರೀಕೃತವಾಗಿರುವ ನಿರಂಕುಶ ಪ್ರಭುತ್ವ ಅಥವಾ ಸ್ವೇಚ್ಛಾಡಳಿತ ವ್ಯವಸ್ಥೆ ಅಥವಾ ಏಕಾಧಿಕಾರ ವ್ಯವಸ್ಥೆ (Autocracy). ರಾಜಕೀಯ ಒಂದು ಸಾರ್ವಜನಿಕ ವ್ಯವಹಾರ. ಇದರ ಅಧಿಕಾರಗಳನ್ನು ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕರಿಸಲು ಬಿಟ್ಟಾಗ ನಮ್ಮನ್ನು ನಾವೇ ಗುಲಾಮರನ್ನಾಗಿಸುತ್ತೇವೆ.

ಪ್ರಜಾಪ್ರಭುತ್ವವೂ ಇತರ ಎಲ್ಲಾ ಆಳ್ವಿಕೆಗಳಂತೆ ಕೆಲವೇ ವ್ಯಕ್ತಿಗಳ ಆಳ್ವಿಕೆ ಆದರೂ 'ಪ್ರಜಾಪ್ರಭುತ್ವ' ಮತ್ತು 'ಇತರ' ಸರ್ಕಾರಿ ವ್ಯವಸ್ಥೆಗಳ ನಡುವೆ ನಿರ್ದಿಷ್ಟ ವ್ಯತ್ಯಾಸಗಳು ಇರುವುದು ಸ್ಪಷ್ಟ. ಪ್ರಜಾಪ್ರಭುತ್ವವು ನಿರ್ದಿಷ್ಟ 3“ಆರ್”ಗಳ ಸರ್ಕಾರ ಎನ್ನಲಾಗುತ್ತದೆ. ಇವುಗಳೆಂದರೆ

1. Representative (ಜನಪ್ರತಿನಿಧಿಗಳ ಸರ್ಕಾರ)
2. Responsive (ಜನಹಿತ ಮತ್ತು ಮತಕ್ಕೆ ಸ್ಪಂದಿಸುವ ಸರ್ಕಾರ)
3. Responsible (ಆಳ್ವಿಕೆಗೆ ಒಳಪಟ್ಟ ಜನರಿಗೆ ಜವಾಬ್ದಾರಿಯಾಗಿರುವ ಸರ್ಕಾರ)

ಪ್ರಜಾಪ್ರಭುತ್ವದಲ್ಲಿ ಆಳುವವರು ಜನಪ್ರತಿನಿಧಿಗಳಾಗಿರಬೇಕು ಎಂಬುದು ಮೊದಲ ಸೂತ್ರ. ಆಳುವವರು ಆಳಿಸಿಕೊಳ್ಳುವವರ ಹಿತ, ಮತ, ಅಭಿಪ್ರಾಯಗಳಿಗೆ ತಲೆಬಾಗಿಸಿ ಸ್ಪಂದಿಸುವ ಆಗಿರಬೇಕೆಂಬುದು ಎರಡನೇ ಸೂತ್ರ. ಆಳುವವರು ಆಳಿಸಿಕೊಳ್ಳುವವರಿಗೆ ಜವಾಬ್ದಾರಿ ಹೊಂದಿದ ಸಾರ್ವಜನಿಕ ಸೇವಕರಾಗಿರಬೇಕೆಂಬುದು ಮೂರನೆಯ ಸೂತ್ರ.

ಪ್ರಾತಿನಿಧಿಕ ಸರ್ಕಾರ ಅಸ್ತಿತ್ವಕ್ಕೆ ಇಲ್ಲವೆ ಆಚರಣೆಗೆ ತರುವ ಪ್ರಮುಖ ಸಾಧನವೇ **ಚುನಾವಣೆಗಳು**. ಈ ಚುನಾವಣೆಗಳು ಮೂರು ವಿಶಿಷ್ಟ ಗುಣಗಳಿಂದ ನಡೆಯಬೇಕು. ಈ ಗುಣಗಳೆಂದರೆ, 1) **ನಿಯತಕಾಲಿಕವಾಗಿ** ನಡೆಯುವ ಚುನಾವಣೆ 2) **ಮುಕ್ತವಾಗಿ** ನಡೆಯುವುದು 3) **ನ್ಯಾಯಯುತವಾಗಿ** ನಡೆಯುವ ಚುನಾವಣೆ. ಪ್ರಜಾಪ್ರಭುತ್ವವನ್ನು ಜನಸ್ಪಂದನೆಯಾಗಿಸಲು ಪ್ರಜಾಪ್ರಭುತ್ವ ವ್ಯವಸ್ಥೆಯು ಒಂದು **ವಿಚಾರ ಶೀಲ ಹಾಗೂ ಚರ್ಚಾಶೀಲ ಸರ್ಕಾರಿ ವ್ಯವಸ್ಥೆಯಾಗಿರುತ್ತದೆ**. ಇದನ್ನು ಸಾಧ್ಯವಾಗಿಸಲು ಸಂವಿಧಾನವು 1) ಅಂಗೀಕೃತ ಹಾಗೂ ಗೌರವಾನ್ವಿತ ವಿರೋಧ ಪಕ್ಷ ವ್ಯವಸ್ಥೆಯನ್ನೂ 2) ಮಾಧ್ಯಮ ಸ್ವಾತಂತ್ರ್ಯವನ್ನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಾಂವಿಧಾನಿಕ ಹಕ್ಕು ಮತ್ತು ವಿಧಾನಗಳನ್ನಾಗಿಸುತ್ತದೆ. **ಚುನಾವಣೆಗಳೂ** ಹಾಗೂ ಮುಕ್ತ ಚರ್ಚೆಗಳೂ ಸರ್ಕಾರವನ್ನು **ಜವಾಬ್ದಾರಿ ಸರ್ಕಾರವಾಗಿಸುತ್ತವೆ.**

ಪ್ರಜಾಪ್ರಭುತ್ವದ ಬೇಡಿಕೆಗಳು ಅಥವಾ ಅಗತ್ಯ ಗುಣಗಳು ಗಹನವಾದವು. ಮೇಲೆ ಹೇಳಿದ ಎಲ್ಲಾ ಗುಣಲಕ್ಷಣಗಳೂ ಹಾಗೂ ಸಾಧನಗಳು ಬರೀ ಸಂವಿಧಾನದ ಭಾಗವಾಗಿದ್ದರೆ ಸಾಲದು. ಆಳುವವರು ಮತ್ತು ಪ್ರಜೆಗಳು ಇಬ್ಬರೂ **ಪ್ರಜಾಪ್ರಭುತ್ವೀಯ ಸಂಸ್ಕೃತಿಯನ್ನು** ಬೆಳೆಸಿ, ಮೌಲ್ವೀಕರಿಸಿ ಆಚರಿಸಬೇಕು. ಈ ದಿನಗಳಲ್ಲಿ ವಿಶ್ವದಲ್ಲಿನ ಪ್ರಜಾಪ್ರಭುತ್ವಗಳ ನಡವಳಿಕೆಗಳನ್ನು ಗಮನಿಸಿ, ವಿಶಿಷ್ಟ ಅಂಶಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿ ಪ್ರಜಾಪ್ರಭುತ್ವ ದೇಶಗಳನ್ನು ಶ್ರೇಣೀಕರಿಸುವ ಸಂಸ್ಥೆಗಳೂ ಮತ್ತು ಪ್ರಯತ್ನಗಳೂ ಕಾರ್ಯನಿರತ ವಾಗಿವೆ. ಇವುಗಳನ್ನು ಗಮನಿಸದಿರುವುದು ದೇಶದ ಕುಖ್ಯಾತಿಗೆ ಕಾರಣವಾಗುತ್ತದೆ.

ಏನೇ ಆದರೂ ಪ್ರಜಾಪ್ರಭುತ್ವ ವ್ಯವಸ್ಥೆ ಬಹಳ ಸೂಕ್ಷ್ಮವಾದುದು. ಆಚರಣೆಯಲ್ಲಿ ಇದು, ಭಾರತದ ಪ್ರಜಾಪ್ರಭುತ್ವವನ್ನು ಕುರಿತ ವಿಖ್ಯಾತ ಪ್ರಾಧ್ಯಾಪಕ ಗಾಲ್‌ಬ್ರೆತ್ ಅವರ ನುಡಿಯಂತೆ: **“ಒಂದು ಕಾರ್ಯನಿರತ ಅರಾಜಕತೆ”**ಯಂತೆ ಕಾಣುತ್ತದೆ. ಯಾರು ಏನೇ ಹೇಳಿದರೂ **ಪ್ರಜಾಪ್ರಭುತ್ವ ವ್ಯವಸ್ಥೆಯಷ್ಟು ನಾಗರಿಕ ಹಾಗೂ ಸಾಂವಿಧಾನಿಕ ಆಳುವ ವ್ಯವಸ್ಥೆ ಇನ್ನೊಂದಿಲ್ಲ.**

ಈ ವ್ಯವಸ್ಥೆಯ ಆಧಾರಸ್ತಂಭವಾಗಿ ಚುನಾವಣೆಗಳಿವೆ. ಇದರ ಬೇರೆ ಎಲ್ಲಾ ಪ್ರಕ್ರಿಯೆಗಳಿಗಿಂತ ಚುನಾವಣಾ ಪ್ರಕ್ರಿಯೆ ಅತೀ ಪ್ರಮುಖ ಬೃಹತ್ ಗಾತ್ರದ, ಕ್ಲಿಷ್ಟ ಹಾಗೂ ಜನ ಭಾಗವಹಿಸುವ ಪ್ರಕ್ರಿಯೆಯಾಗಿರುತ್ತದೆ. ಇದು ಭ್ರಷ್ಟಾಚಾರಕ್ಕೆ ತೆರೆದ ವ್ಯವಸ್ಥೆಯೂ ಆಗಿರುತ್ತದೆ. ಕಾಲದಿಂದ ಕಾಲಕ್ಕೆ ಚುನಾವಣಾ ವ್ಯವಸ್ಥೆಯನ್ನು ಪರಿಶೀಲಿಸುವ ಅಗತ್ಯವಿದೆ. ಕಾಲದಿಂದ ಕಾಲಕ್ಕೆ ಚುನಾವಣಾ ಸುಧಾರಣೆಗಳೂ ಆಗಿವೆ. ಇವು ಇನ್ನೂ ಸುಧಾರಿಸುವುದರಲ್ಲಿ ಅನುಮಾನವಿಲ್ಲ. ಚುನಾವಣೆಗಳೂ ಮತ್ತು ಚುನಾವಣಾ ಸುಧಾರಣೆಗಳೂ ಸಕಾಲಿಕವಾಗಿ ಇರಲೇಬೇಕು.

### II ಚುನಾವಣೆಗಳು

ಕರ್ನಾಟಕ ರಾಜ್ಯದ ವಿಧಾನಸಭಾ ಚುನಾವಣೆ 2023ರಲ್ಲಿ ಹಾಗೂ ದೇಶದ ಸಂಸತ್ತಿನ ಚುನಾವಣೆ 2024ರಲ್ಲಿ ಬರುತ್ತಿರುವುದರಿಂದ ನಾವು ಒಂದು ಚುನಾವಣಾ ಕಾಲಕ್ಕೆ ಕಾಲಿಡುತ್ತಿದ್ದೇವೆ. ಇಂತಹ ಚುನಾವಣಾ ಕಾಲ ಮತದಾರನಿಗೂ ಒಂದು ವಸಂತಕಾಲ, **ಮತದಾರನ ಪ್ರಾಮುಖ್ಯತೆ, ಹಕ್ಕು ಮತ್ತು ಕರ್ತವ್ಯಗಳು** ಬೆಳಕಿಗೆ ಬರುತ್ತವೆ. ಸಾಮಾನ್ಯವಾಗಿ ಅಲ್ಲಿಂದ ಇಲ್ಲಿಗೆ ತಳ್ಳಾಟಕ್ಕೆ ಒಳಗಾಗುವ ಶ್ರೀಸಾಮಾನ್ಯನು ಈ ಕಾಲದಲ್ಲಿ 'ನಾಗರಿಕನಾಗಿ ಕೇಂದ್ರ ಬಿಂದುವಾಗುತ್ತಾನೆ. ಇನ್ನೂ ಹೆಚ್ಚಾಗಿ ಅವನು ಅಥವಾ ಅವಳು **'ಮತದಾರ ದೇವರಾಗಿ'** ರಾಜಕೀಯ ವರ್ಗದ ಪ್ರಾರ್ಥನೆ, ಪೂಜೆ ಮತ್ತು ಮುಸಲಾವಣೆಗಳಿಗೆ ಭಾಜನರಾಗುತ್ತಾರೆ.

**ಮತದಾನದ ಹಕ್ಕು,** ನಿರ್ದಿಷ್ಟ ಅವಧಿಗೆ ಯಾರು ನಮ್ಮನ್ನು ಹೇಗೆ ಆಳಬೇಕು ಎಂಬುದನ್ನು ತೀರ್ಮಾನಿಸುವ ಗಹನವಾದ ಜವಾಬ್ದಾರಿಯನ್ನು ಶ್ರೀಸಾಮಾನ್ಯನಿಗೆ ನೀಡುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತ್ರ ಇಂತಹ ಗಂಭೀರವಾದ ಸ್ಥಾನ ಮತ್ತು ಪಾತ್ರಗಳು ಶ್ರೀಸಾಮಾನ್ಯನಿಗೆ ಸಿಗುತ್ತದೆ.

**ಮತದಾನದ ಕರ್ತವ್ಯ** ಒಂದು ದೊಡ್ಡ ಜವಾಬ್ದಾರಿ. ರಾಷ್ಟ್ರಕ್ಕೆ ಅದು ಸರ್ಕಾರವನ್ನು ನಿರ್ಧರಿಸುತ್ತದೆ. ಮತದಾರ ವ್ಯಕ್ತಿಗೆ ಅದೊಂದು ಅವನ ವಿವೇಕ, ಘನತೆ, ನಿಷ್ಪಕ್ಷಪಾತತೆ ಹಾಗೂ ತೀರ್ಮಾನಿಸುವ ಗುಣಶಕ್ತಿಗಳನ್ನು ಪರೀಕ್ಷೆಗೊಳಪಡಿಸುವ ಕಾಲವಾಗುತ್ತದೆ.

ತುಂಬಾ ಜಾಗರೂಕತೆ ಮತ್ತು ಜವಾಬ್ದಾರಿಗಳಿಂದ ತನ್ನ ಮತ ಚಲಾಯಿಸುವ ಕರ್ತವ್ಯ ಮತದಾರನದಾಗುತ್ತದೆ. **ಮೊದಲನೆಯದಾಗಿ** ತಪ್ಪದೇ ಮತ ಚಲಾವಣೆ ಮಾಡುವ ಕಾರ್ಯ ಮತದಾರನದಾಗುತ್ತದೆ. ಇದೇ ವಾರದ ಮೊದಲನೇ ಭಾಗದಲ್ಲಿ ನಿಧನರಾದ ಸಂಸದ ಶ್ರೀ ಧ್ರುವನಾರಾಯಣ್ ಅವರು, 2004ರ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರ ಜಿಲ್ಲೆಯ ಸಂತೇಮರಳ್ಳಿ ಕ್ಷೇತ್ರದಲ್ಲಿ ಕೇವಲ ಒಂದು ಹೆಚ್ಚು ಮತ ಪಡೆದು ಗೆದ್ದಿದ್ದರೆಂಬುದನ್ನು ಜ್ಞಾಪಿಸಿಕೊಂಡರೆ, ಪ್ರತೀ ಮತದ ಮೌಲ್ಯ ಎಷ್ಟೆಂಬುದು ನಮಗೆ ಅರಿವಾಗುತ್ತದೆ. **ಎರಡನೆಯದಾಗಿ** ಮತದಾರ ತನ್ನ ಕರ್ತವ್ಯ ನಿಭಾಯಿಸುವಲ್ಲಿ ಚಪಲಗಳಿಂದ ಅಥವಾ ರಾಜಕೀಯ ವರ್ಗ ನೀಡುವ ದುಷ್ಪ್ರೇರಣೆಗಳಿಂದ ದೂರ ಉಳಿಯಬೇಕಾಗುತ್ತದೆ. ಚುನಾವಣೆಗಳಲ್ಲಿ ಭ್ರಷ್ಟಾಚಾರ, ನಂತರ ಬರುವ ಸರ್ಕಾರಗಳ ಎಲ್ಲಾ ಭ್ರಷ್ಟಾ ಚಾರಗಳ ಮಾತೃ ಸ್ವರೂಪದಾಗಿರುತ್ತದೆ ಎಂಬುದನ್ನು ಮತದಾರ ಮರೆಯುವಂತಿಲ್ಲ.

### III ಚುನಾವಣಾ ಸುಧಾರಣೆಗಳು

ಈ ಚುನಾವಣಾ ಕಾಲದಲ್ಲಿ ಚುನಾವಣಾ ವ್ಯವಸ್ಥೆಯು ಭ್ರಷ್ಟಾಚಾರದಿಂದ ತುಂಬಿರುವುದನ್ನು ನಾವು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಈ ಸಂದರ್ಭದಲ್ಲಿ ಪ್ರತೀ ಮತದಾರನೂ ಹಾಗೂ ಇಡೀ ರಾಷ್ಟ್ರದ ಜನರೆಲ್ಲಾ ಅರ್ಥಪೂರ್ಣ ಚುನಾವಣಾ ಸುಧಾರಣೆಗಳಿಗಾಗಿ ಒತ್ತಾಯಿಸಬೇಕಾಗಿದೆ. ಅಗತ್ಯವಾದ ಸುಧಾರಣೆಗಳು ಅನೇಕಷ್ಟಿವೆ. ಇವುಗಳಲ್ಲಿ ಕೆಳಕಂಡ ಕೆಲವು ಸುಧಾರಣೆಗಳು ಅತ್ಯವಶ್ಯಕವಾಗಿವೆ.

**ಮೊದಲನೆಯದಾಗಿ,** ಚುನಾವಣೆಗಳಲ್ಲಿ ಉತ್ತಮ ಅಭ್ಯರ್ಥಿಗಳನ್ನು ಕಾಣಲು ನಾವು “ಪ್ರಾಥಮಿಕ ಚುನಾವಣೆ”ಗಳತ್ತ ಸಾಗಬೇಕಾಗಿದೆ. **ಎರಡನೆಯದಾಗಿ,** ನಿಯಂತ್ರಣ ತಪ್ಪಿ ನಡೆಯುತ್ತಿರುವ ರಾಜಕೀಯ ಪಕ್ಷಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು, ಒಂದು ನಿರ್ದಿಷ್ಟ **“ರಾಜಕೀಯ ಪಕ್ಷಗಳ ಕಾನೂನು”** ಹಾಗೂ ಇದನ್ನು ಜಾರಿಗೆ ತರಲು ಒಂದು **ರಾಜಕೀಯ ಪಕ್ಷಗಳ ಆಯೋಗಗಳ** ಅವಶ್ಯಕತೆ ತುಂಬಾ ಇದೆ. **ಮೂರನೆಯದಾಗಿ** ಚುನಾವಣೆಗಳನ್ನು ಭ್ರಷ್ಟವಾಗಿ ಸಲು ಕಾರಣವಾಗಿರುವ **ವಿಪರೀತವಾಗಿ ರುವ ಹಣದ ಪಾತ್ರ** ದುರ್ಬಲಗೊಳಿಸುವ ಅಗತ್ಯವಿದೆ. ಚುನಾವಣೆಗಳಲ್ಲಿ ಹಣದ ಖರ್ಚನ್ನು ಕಡಿಮೆಗೊಳಿಸಿ ಚುನಾವಣಾ ವೆಚ್ಚವನ್ನು ಸರ್ಕಾರವೇ ಭರಿಸುವ ದಿಕ್ಕಿನಲ್ಲಿ ಚಲಿಸಬೇಕಾಗಿದೆ. **ನಾಲ್ಕನೆಯದಾಗಿ** ರಾಜಕೀಯ ಪಕ್ಷಗಳ ವೆಚ್ಚಗಳನ್ನು ನಿಯಂತ್ರಿಸಿ ಜವಾಬ್ದಾರಿಯುತವನ್ನಾಗಿಸಲು ಈ ವೆಚ್ಚವನ್ನೂ ಸರ್ಕಾರವೇ ಭರಿಸುವ ದಾರಿಯನ್ನು ಹಿಡಿಯಬೇಕಾಗಿದೆ. **ಐದನೆಯದಾಗಿ** ಚುನಾವಣಾ ವ್ಯವಸ್ಥೆಯನ್ನು ದಕ್ಷ ಪರಿಣಾಮಕಾರಿ ಹಾಗೂ ನೀತಿಯುತವಾಗಿಸಲು ಕಾಲದಿಂದ ಕಾಲಕ್ಕೆ ಸರ್ಕಾರಗಳೇ ನೇಮಿಸಿದ ತಾರಕುಂಡೆ ಸಮಿತಿ, ಗೋಸಾಮಿ ಸಮಿತಿ ಮುಂತಾದ ಸಮಿತಿಗಳ ವರದಿಗಳನ್ನೂ ಮತ್ತು ಶಿಫಾರಸ್ಸುಗಳನ್ನೂ ಭದ್ರ ಬೀರುಗಳಿಂದ ಹೊರ ತೆಗೆದು ಕಾನೂನಾಗಿಸಿ ಜಾರಿಗೊಳಿಸಬೇಕಾಗಿದೆ.

ಚುನಾವಣಾ ಸುಧಾರಣೆ ಒಂದು ನಾಣ್ಯದಂತೆ ಎರಡು ಮುಖಗಳನ್ನು ಹೊಂದಿದೆ. ಒಂದು ವ್ಯವಸ್ಥೆಯ ಸುಧಾರಣೆ. ಎರಡು ಚುನಾವಣೆಯಲ್ಲಿ ಭಾಗವಹಿಸುವ ವ್ಯಕ್ತಿಗಳ ಸುಧಾರಣೆ. ಇವೆರಡೂ ಜೊತೆ ಜೊತೆಯಲ್ಲೇ ಆಗಬೇಕು.

### ಉಪಸಂಹಾರ

ಚರಿತ್ರೆಯಲ್ಲಿ ಪ್ರಜಾಪ್ರಭುತ್ವದ ಪ್ರಯಾಣವು ಬಹುದೂರ ಸಾಗಿದ, ನಿಧಾನ ಹಾಗೂ ಹಳ್ಳ ಕೊಳ್ಳಗಳ ಒಂದು ಪಯಣವಾಗಿದೆ. ಅದರಲ್ಲಿ ಪ್ರಜಾಪ್ರಭುತ್ವವು ಕಾಲದಿಂದ ಕಾಲಕ್ಕೆ ಸುಧಾರಿಸುತ್ತಾ ಬಂದಿದೆ. ಇಂಗ್ಲೆಂಡ್ ದೇಶದಲ್ಲಿ, 1832ಕ್ಕಿಂತ ಹಿಂದಿದ್ದ ಅಲ್ಲಿನ **ರಾಟನ್ ಬರೋಸ್** (ಕೊಳಕು ಚುನಾವಣಾ ಕ್ಷೇತ್ರ) ನಡವಳಿಕೆಯಿಂದ ಬಹುದೂರ ಸಾಗಿ ಉತ್ತಮ ದಿಕ್ಕು ಹಿಡಿದಿದೆ. ಆದರೂ ಇನ್ನೂ ಉತ್ತಮವಾಗಲು ಬಹಳ ಅವಕಾಶ ಹಾಗೂ ಅಗತ್ಯ ಗಳೆರಡೂ ಇವೆ.

ಇತ್ತೀಚಿನ ವರ್ಷಗಳಲ್ಲಿ, ಯೂರೋಪ್ ಖಂಡದ **ಸಾಮಾಜಿಕ ಪ್ರಭುತ್ವಗಳು** (ಸೋಷಿಯಲ್ ಡೆಮಾ ಕ್ರೆಸೀಸ್) ವಿಶ್ವದ ಪ್ರಜಾಪ್ರಭುತ್ವದ ಅಳತೆಗೋಲಿನಲ್ಲಿ ಅತ್ಯಂತ ಮೇರು ಸ್ಥಾನ ಪಡೆದಿವೆ. ಅಲ್ಲದೇ ಇದೇ ರಾಷ್ಟ್ರಗಳು ತಮ್ಮ ಪ್ರಜೆಗಳ ಹಿತ, ಆದಾಯ, ಆರೋಗ್ಯ, ವಿದ್ಯಾಭ್ಯಾಸ, ಕ್ಷೇಮ ಹಾಗೂ ಸುಖ (ಹ್ಯಾಪಿನೆಸ್) ಸಾಧಿಸುವ ವಿಶ್ವದ ದೇಶಗಳ ಅಳತೆಗೋಲಿನಲ್ಲೂ ಉನ್ನತ ಸ್ಥಾನದ ರಾಷ್ಟ್ರಗಳಾಗಿವೆ.


ಭಾರತದ ಪ್ರಜಾಪ್ರಭುತ್ವವು ಇವುಗಳನ್ನು ಬೆನ್ನಟ್ಟಿ ಬೆಳೆಯಬೇಕಾದರೆ, ಭಾರತದಲ್ಲಿ ಪ್ರಸ್ತುತ ಇರುವ **ಗಣರಾಜ್ಯದ ಖಾಸಗೀಕರಣ (privelisation)** ಹಾಗೂ **ಲೂಟೀಕರಣ (piratisation)** ಗಳನ್ನು ಹಿಮ್ಮೆಟ್ಟಿಸಬೇಕಾಗಿದೆ. ಇದಕ್ಕಾಗಿ ಚುನಾವಣಾ ಹಾಗೂ ಇನ್ನಿತರ ರಾಜಕೀಯ ಮತ್ತು ಆಡಳಿತ ಸುಧಾರಣೆಗಳ ಗಂಭೀರ ಅವಶ್ಯಕತೆ ಇದೆ. ಭಾರತವು ತನ್ನ ಪ್ರಜಾಪ್ರಭುತ್ವವನ್ನು ಸುಧಾರಿಸಿಕೊಂಡು, ವಿಶ್ವ ಪ್ರಜಾಪ್ರಭುತ್ವ ಅಳತೆಗೋಲಿನಲ್ಲಿನ ತನ್ನ ಕಳಪೆ ಸ್ಥಾನವನ್ನು ಮೀರಿ ಉತ್ತಮಪಡಿಸಿಕೊಳ್ಳುವ ಅರ್ಹತೆ ಮತ್ತು ಶಕ್ತಿಯನ್ನು ಖಂಡಿತಾ ಹೊಂದಿದೆ.

# ಇತಿಹಾಸದ ಪುಟದಲ್ಲಿ ಉರಿಗೌಡ, ನಂಜೇಗೌಡನ ಹೆಸರಿದೆ

## ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಮರ್ಥನೆ

ಬೆಂಗಳೂರು, ಮಾ.17– ಹಿಂದೂಗಳನ್ನೆಲ್ಲ ಕೊಲ್ಲುವುದಕ್ಕೆ ಅಂತ ಟಿಪ್ಪು ಡ್ರಾಪ್ ಮಾಡಿದರು. ಟಿಪ್ಪು ಡ್ರಾಪ್‌ನಲ್ಲಿ ಹಿಂದೂಗಳನ್ನೆಲ್ಲ ಕೊಲ್ಲಲಾಗುತಿತ್ತು. ರಸ್ತೆಗೆ, ಕಟ್ಟಡಕ್ಕೆಲ್ಲ ಗುಲಾಮಿತನದ ಹೆಸರಿಡಲಾಗಿದೆ. ಇತಿಹಾಸದ ಪುಟ ತೆರೆದು ನೋಡಿದರೆ ಉರಿಗೌಡ–ನಂಜೇಗೌಡನ ಹೆಸರಿದೆ ಎಂದು ಹೇಳುವ ಮೂಲಕ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಿನಿಮಾ ಟೈಟಲ್ ಕುರಿತು ಸಮರ್ಥನೆ ಮಾಡಿಕೊಂಡರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾನಾಡಿದರು. ನಂಜೇಗೌಡ–ಉರಿಗೌಡ ಹೆಸರಿನಲ್ಲಿ ಬಿಜೆಪಿ ಟೈಟಲ್ ಕುರಿತು ಮಾಜಿ ಸಿಎಂ ಎಚ್‌ಡಿಕೆ ವಿರೋಧ ವ್ಯಕ್ತಪಡಿಸಿದ್ದು, ಟಿಪ್ಪು ದೇಶದ್ರೋಹಿಯಾದರೂ ಅವರ ಹೆಸರು ಇಟ್ಟಿಲ್ವಾ ಎಂದು ಶೋಭಾ ತಿರುಗೇಟು ನೀಡಿದರು. ಇದು ಖಳನಾಯಕನ ಕೆಲಸ ಅಲ್ಲ. ಟಿಪ್ಪು ದೇಶ ವಿರೋಧಿ, ಹಿಂದೂ ವಿರೋಧಿ, ಕನ್ನಡ ವಿರೋಧಿ ಆಗಿದ್ದ. ನಂದಿ ಬೆಟ್ಟಕ್ಕೆ ಹೋದರೆ ಟಿಪ್ಪು ಡ್ರಾಪ್ ಇದೆ. ಅವರ ವಿರೋಧಿಗಳನ್ನು ಕೊಲ್ಲಲು ಟಿಪ್ಪು ಡ್ರಾಪ್ ಇದೆ, ಹಿಂದೂಗಳನ್ನು ಕೊಲ್ಲುತ್ತಿದ್ದ. ಮೈಸೂರು ಮಹಾರಾಜರ ಅನುಯಾಯಿಗಳಾಗಿ ಕೆಲಸ ಮಾಡಿದವರು ಉರಿಗೌಡ, ನಂಜೇಗೌಡ. ಅವರವರ ನೇರಕ್ಕೆ ಕೆಲವರು ಪುಸ್ತಕ ಬರೆಸಿಕೊಂಡಿದ್ದಾರೆ. ಇತಿಹಾಸ ತೆರೆದು ನೋಡಿದರೆ ಉರಿಗೌಡ, ನಂಜೇಗೌಡ ಹೆಸರಿದೆ ಎಂದರು.



ಟಿಪ್ಪುವನ್ನು ಕೊಲ್ಲುವ ಮೂಲಕ ಈ ಇಬ್ಬರು ಇತಿಹಾಸ ಪುಟ ಸೇರಿದ್ದಾರೆ. ರಸ್ತೆಗೆ, ಕಟ್ಟಡಕ್ಕೆಲ್ಲ ಗುಲಾಮಿತನದ ಹೆಸರಿಡಲಾಗಿದೆ ಎಂದು ಹೇಳಿದರು.

ಮೈಸೂರು–ಬೆಂಗಳೂರು ರಸ್ತೆಗೆ ಉರಿಗೌಡ, ನಂಜೇಗೌಡ ಮಹಾದ್ವಾರವನ್ನು ಹೈವೇ ಉದ್ಘಾಟನೆ ಕಾರ್ಯಕ್ರಮಕ್ಕೆ ಮಾತ್ರ ನಿರ್ಮಾಣ ಮಾಡಲಾಗಿತ್ತು. ಅದು ಶಾಶ್ವತ ದ್ವಾರ ಆಗಿರಲಿಲ್ಲ. ಬಾಲಗಂಗಾಧರನಾಥ ಶ್ರೀಗಳ ಮಹಾದ್ವಾರ ಈಗಲೂ ಇದೆ. ಮುಂದೆಯೂ ಇರುತ್ತೆ ಎಂದು ಇದೇ ವೇಳೆ ಶೋಭಾ ಕರಂದ್ಲಾಜೆ ಸ್ಪಷ್ಟನೆ ನೀಡಿದರು.

## ಲಿಂಗದೇವರ ಕೊಪ್ಪಲಿನಲ್ಲಿ ಇಂದು ಕುಸ್ತಿ ಪಂದ್ಯಾವಳಿ

ಮೈಸೂರು,ಮಾ.17– ಮೈಸೂರು ತಾಲೂಕು ಹುಣಸೂರು ಮುಖ್ಯ ರಸ್ತೆಯ ಲಿಂಗದೇವರಕೊಪ್ಪಲಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ (ಮಾ.18)ಶನಿವಾರ ಸಂಜೆ 4 ಗಂಟೆಗೆ ಶ್ರೀ ಜೋಡಿ ಮಾರಮ್ಮ ದೇವರ ಹಬ್ಬದ ಅಂಗವಾಗಿ ರಾಷ್ಟ್ರಮಟ್ಟದ ಪುರುಷರ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿ ನಡೆಯಲಿದೆ ಎಂದು ಕಾಂಗ್ರೆಸ್ ಮುಖಂಡ ಹಳೆಕಾಮನಕೊಪ್ಪಲು ಕುಳಿಗೌಡ ತಿಳಿಸಿದ್ದಾರೆ. ಮುಖ್ಯ ಅತಿಥಿಯಾಗಿ ಶಾಸಕರಾದ ಜಿ.ಟಿ. ದೇವೇಗೌಡ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

# ವಚನ ಸಾಹಿತ್ಯ, ಸಂಗೀತ ಮಾತ್ರ ಸಾಮಾಜಿಕ ಚಳವಳಿ ರೂಪ ಪಡೆಯಿತು

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ**



ಮೈಸೂರು, ಮಾ.17(ಎಸ್‌ಪಿಎನ್)– ಯಾವ ಸಂಗೀತವೂ ಸಾಮಾಜಿಕ ಚಳವಳಿಯಾಗಿ ರೂಪುಗೊಂಡಿಲ್ಲ. ಆದರೆ, ವಚನ ಸಾಹಿತ್ಯ–ಸಂಗೀತ ಮಾತ್ರ ಸಾಮಾಜಿಕ ಚಳವಳಿಯಾಗಿ ರೂಪುಗೊಂಡಿದ್ದು ಐತಿಹಾಸಿಕ ಘಟನೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಗಾನ ಭಾರತಿ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ವತಿಯಿಂದ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಸ್ಮರಣಾರ್ಥ ನಡೆದ 'ವಚನ ಸಂಗೀತೋತ್ಸವ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು, ಮಾತನಾಡಿದರು.

12ನೇ ಶತಮಾನದಲ್ಲಿ ದುಡಿಮೆಯೇ ದೇವರು ಎಂದು ಭಾವಿಸಿ, ಶರಣರು ತಮ್ಮ ದುಡಿಮೆಯ ಭಾಗವನ್ನು ಸಮಾಜಕ್ಕಾಗಿ ಸ್ವಲ್ಪ ಮೀಸಲಿಡುತ್ತಿದ್ದರು. ಇಂತಹ ಕಾಲಘಟ್ಟವೂ ನಮ್ಮಲ್ಲಿತ್ತು ಎಂಬುದು ನಾವೆಲ್ಲರೂ ಹೆಮ್ಮೆಪಡುವ ವಿಷಯ. ಅದು ಕರ್ನಾಟಕದಲ್ಲಿ ಅಣ್ಣ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ ಸೇರಿದಂತೆ ಅನೇಕ ಶರಣರು, ದುಡಿಮೆಯ ದೇವರು ಎಂದು ನಂಬಿದವರು. ಅದರಂತೆ ನಡೆದವರು. ಅವರು ಬರೆದ ವಚನ ಸಾಹಿತ್ಯ, ಚಳವಳಿಯಾಗಿ ಮಾರ್ಪಟ್ಟಿದ್ದು ಐತಿಹಾಸಿಕ ಘಟನೆ ಎಂದರು.

ನಮ್ಮ ಸಂವಿಧಾನದಲ್ಲಿ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಎಂಬ ಅಂಶದಡಿ ಅನೇಕ ಕಾನೂನುಗಳು ರಚನೆಯಾಗಿವೆ. ಇದರಲ್ಲಿ ಸರ್ವ ಜನರಿಗೂ ಸಮಾನ ಬದುಕಿನ ಹಕ್ಕು ನೀಡಿದೆ. ಆದರೆ, ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಂಡಿರುವ ಆದೆಷ್ಟು ಅಂಶಗಳನ್ನು 12ನೇ ಶತಮಾನದಲ್ಲಿ ವಚನಕಾರರು ಅನುಭವ ಮಂಟಪ ಸ್ಥಾಪಿಸಿ, ಚರ್ಚಿಸಿ ಅನುಷ್ಠಾನಗೊಳಿಸಿದ್ದರು. ಆಗಲೇ ತಮ್ಮ ಸ್ವಂತ ದುಡಿಮೆಯಲ್ಲಿ ಸ್ವಲ್ಪ ಭಾಗದಲ್ಲಿ ಸಮಾಜಕ್ಕೂ ಮೀಸಲಿಡುತ್ತಿದ್ದ ಅಂಶ ಸಾಮಾನ್ಯ ಸಂಗತಿಯಲ್ಲ ಎಂದು ಹೇಳಿದರು.

ಶಸಾಪ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯನವರು ಹಲವು ವರ್ಷಗಳ ಕಾಲ ಕನ್ನಡ ನಾಡು–ನುಡಿಗೆ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಇವರ ಅಧಿಕಾರಾವಧಿಯಲ್ಲಿ ನಾನು ಆಗತಾನೆ ಸೇವೆಗೆ ಸೇರಿದ್ದೆ. ಆಗ ನಮ್ಮನ್ನು ಸರ್ಕಾರಿ ಸೇವೆಗೆ ವಿದ್ಯಾರ್ಥಿಯಂತೆ ಅಣಿಗೊಳಿಸಿದ್ದ ಸಂದರ್ಭವನ್ನು ನೆನೆದರು. ಇಂತಹ ಹಿರಿಯ ಅಧಿಕಾರಿ ಸರ್ಕಾರದ ಎಲ್ಲಾ ಇಲಾಖೆಯಲ್ಲೂ ಇರಬೇಕು ಎಂದು ತಿಳಿಸಿದರು.

ಈ ವೇಳೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ನಿವೃತ್ತ ಮುಖ್ಯ ಶಿಕ್ಷಕಿ ಮಂಗಳಾ ಮುದ್ದುಮಾದಪ್ಪ, ಶಸಾಪ ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ, ಗಾನಭಾರತೀ ಅಧ್ಯಕ್ಷೆ ರಮಾಬೆಣ್ಣೂರು, ಸುಗಮ ಸಂಗೀತ ಕಲಾವಿದ ಪ್ರೊ.ಎಸ್. ಮಲ್ಲಣ್ಣ ಸೇರಿದಂತೆ ಇತರರಿದ್ದರು. ವೇದಿಕೆ ಕಾರ್ಯಕ್ರಮ ನಂತರ ವಚನ ಸಂಗೀತ ಗಾಯನ ಜರುಗಿತು.

## ಮಾಡಾಳ್ ವಿರೂಪಾಕ್ಷಪ್ಪ ಜಾಮೀನು ಭವಿಷ್ಯ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು, ಮಾ.17–ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪಗೆ ನೀಡಿರುವ ನಿರೀಕ್ಷಣಾ ಜಾಮೀನು ರದ್ದು ಮಾಡುವಂತೆ ಹೈಕೋರ್ಟ್‌ಗೆ ಲೋಕಾಯುಕ್ತ ಆಕ್ಷೇಪಣೆ ಸಲ್ಲಿಸಿ ವಾದ ಮಂಡನೆ ಮಾಡಿತು.

ನಿರೀಕ್ಷಣಾ ಜಾಮೀನು ಮಂಜೂರು ಮಾಡಿದರೂ ಕೂಡ ತನಿಖೆಗೆ ಸಹಕಾರವನ್ನು ನೀಡುತ್ತಿಲ್ಲ. ದಿನಾ ವಿಚಾರಣೆಗೆ ಬರುತ್ತಾರೆ, ತನಿಖಾಧಿಕಾರಿಗೆ ಯಾವುದೇ ಹೇಳಿಕೆ ನೀಡುತ್ತಾ ಇಲ್ಲ. ಹೀಗಾಗಿ ನಿರೀಕ್ಷಣಾ ಜಾಮೀನು ರದ್ದು ಮಾಡಿ ಎಂದು ವಾದ ಮಂಡಿಸಿದರು. ಇತ್ತ ವಿರೂಪಾಕ್ಷಪ್ಪ ತನಿಖೆಗೆ ಸಹಕಾರ ನೀಡುತ್ತಾ ಇದ್ದಾರೆ, ಪ್ರತಿದಿನ 6 ಗಂಟೆಗಳ ಕಾಲ ವಿಚಾರಣೆ ಎದುರಿಸುತ್ತಿದ್ದಾರೆ ಎಂದು ವಿರೂಪಾಕ್ಷಪ್ಪ ಪರ ವಾದ ಮಂಡನೆ ಮಾಡಿದರು. ಎರಡೂ ಕಡೆ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ಏಕಸದಸ್ಯ ಪೀಠ ಆದೇಶ ಕಾಯ್ದಿರಿಸಿದೆ.

ದುದ್ದ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಭೆ

# ಕಡೇ ಉಸಿರಿರುವವರೆಗೂ ಜನಸೇವೆಗೆ ಬದ್ಧ

## ನಿಮ್ಮ ಸೇವೆ ಮಾಡಲು ಮತ್ತೊಮ್ಮೆ ಅವಕಾಶ ನೀಡಿ: ಶಾಸಕ ಸಿ.ಎಸ್.ಪುಟ್ಟರಾಜು ಮನವಿ



ದುದ್ದ ಭಾಗದ ಬರಪೀಡಿತ ಪ್ರದೇಶಕ್ಕೆ ಶಾಶ್ವತ ನೀರಾವರಿ ಒದಗಿಸಿದ್ದೇನೆ. ಈ ಬಗ್ಗೆ ಜೆ.ಸಿ.ಮಾಧುಸ್ವಾಮಿ ಪ್ರಶಂಸೆ ವ್ಯಕ್ತಪಡಿಸಿ, ಇನ್ನು 25 ಗ್ರಾಮಗಳಿಗೆ ಶೀಘ್ರ ನೀರಾವರಿ ಸೌಲಭ್ಯ ಒದಗಿಸುವುದಾಗಿ ಹೇಳಿದ್ದಾರೆ. ದುದ್ದ ಭಾಗದ ಸಮಗ್ರ ನೀರಾವರಿ ಯೋಜನೆಗೆ 300 ಕೋಟಿ ವ್ಯಯ ಮಾಡಿದ್ದು, ನನಗೆ ಹೆಸರು ಬರಬಾರದೆಂದು ಕೆಲವರು ಯೋಜನೆಗೆ ಅಡ್ಡಿಪಡಿಸಿದರು. ಆದರೂ ಎದೆಗುಂದದೆ ಯೋಜನೆ ರೂಪಿಸಿದ್ದೇನೆ.

\- ಸಿ.ಎಸ್.ಪುಟ್ಟರಾಜು, ಶಾಸಕ.

ಮಂಡ್ಯ, ಮಾ.17– ಕಡೇ ಉಸಿರು ಇರುವವರೆಗೂ ನಾನು ಮೇಲುಕೋಟೆ ಕ್ಷೇತ್ರದ ಜನರ ಸೇವೆಗೆ ಬದ್ಧ. ಶಾಸಕನಾಗಿ, ಮಂತ್ರಿಯಾಗಿ ನಿಮ್ಮ ಸೇವೆ ಮಾಡಲು ಮತ್ತೊಮ್ಮೆ ಅವಕಾಶ ನೀಡಿ ಎಂದು ಶಾಸಕ ಸಿ.ಎಸ್. ಪುಟ್ಟರಾಜು ಮನವಿ ಮಾಡಿದರು.

ತಾಲೂಕಿನ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆನಗುಪ್ಪೆ ಗ್ರಾಮದ ಆನಗುಪ್ಪಮ್ಮ ದೇಗುಲದ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ದುದ್ದ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಭೆಯಲ್ಲಿ ಮಾತನಾಡಿದ ಅವರು, ವರ್ಷದ 365 ದಿನವೂ ನಾನು ನಿಮ್ಮ ಸೇವೆಗೆ ಸದಾ ಸಿದ್ಧನಿದ್ದೇನೆ. ಕಳೆದ 5 ವರ್ಷದಲ್ಲಿ ದುದ್ದ ಹೋಬಳಿ ಸೇರಿದಂತೆ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಯಾರೋ ಹೇಳುವ ಮಾತಿಗೆ ಮರುಳಾಗಬೇಡಿ. ಅವರಿಂದ ರಾಜಕೀಯ ವ್ಯವಸ್ಥೆ ಹಾಳಾಗುತ್ತಿದೆ ಎಂದು ಪರೋಕ್ಷವಾಗಿ ದರ್ಶನ್ ಪುಟ್ಟಣ್ಣಯ್ಯ ವಿರುದ್ಧ ಹರಿಹಾಯ್ದರು.

ನನ್ನ ಅಭಿವೃದ್ಧಿ ಕಾರ್ಯದ ಬಗ್ಗೆ ಬಿಜೆಪಿ ಸಚಿವ ಜೆ.ಸಿ.ಮಾಧುಸ್ವಾಮಿ ಮಾತನಾಡುತ್ತಾರೆ ಎಂದರೆ ಅಲ್ಲಿಗೆ ನೀವೇ ನನ್ನ ಅಭಿವೃದ್ಧಿ ಕೆಲಸದ ಬಗ್ಗೆ ಒಮ್ಮೆ ಮೆಲುಕು ಹಾಕಿ ನೋಡಿ. ಮುಂದಿನ ಚುನಾವಣೆಯಲ್ಲಿ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವುದು ಖಚಿತ. ಹಾಗೆಯೇ ನಾನು ಸಹ ಗೆದ್ದು ಮಂತ್ರಿಯಾಗಿ ನಿಮ್ಮ ಸೇವೆ ಮಾಡುವೆ ಎಂದರು.

ದುದ್ದ ಹೋಬಳಿ ಜನ ಪ್ರತಿ ಬಾರಿ ನನಗೆ ಕನಿಷ್ಟ 10 ಸಾವಿರ ಲೀಡ್ ನೀಡಿ ಗೆಲ್ಲಿಸುತ್ತಿದ್ದಾರೆ. ನಾನು ಸಂಸದನಾದಾಗಲೂ ಈ ಭಾಗದಲ್ಲಿ ಪ್ರಚಂಡ ಬಹುಮತ ಸಿಕ್ಕಿತ್ತು. 2018ರಲ್ಲಿ ಸಿಂಪತಿ ಇದ್ದರೂ, 11 ಸಾವಿರ ಬಹುಮತ ಪಡೆದಿದ್ದೆ. ಮುಂದಿನ ಚುನಾವಣೆಯಲ್ಲೂ ಭಾರೀ ಬಹುಮತದಿಂದ ನನ್ನನ್ನು ಆಯ್ಕೆ ಮಾಡಿ ಎಂದು ಮನವಿ ಮಾಡಿದರು.

ಮೊನ್ನೆ ಹೊಳಲು ಗ್ರಾಮದಲ್ಲಿ ಬೃಹತ್ ಸಮಾವೇಶ ನಡೆಸಲಾಯಿತು. ಸಾವಿರಾರು ಮಂದಿ ಭಾಗವಹಿಸಿದ್ದರು. ಜೊತೆಗೆ ಪಂಚರತ್ನ ಯಾತ್ರೆಗಾಗಿ ಶಿವಳ್ಳಿಗೆ ಹೆಚ್.ಡಿ. ಕುಮಾರಸ್ವಾಮಿ ಮತ್ತು ನಿಖಿಲ್ ಬಂದಾಗ ಕನಿಷ್ಟ 25 ಸಾವಿರ ಜನ ಸೇರಿದ್ದರು. ಈ ಭಾಗದ ಜನರಿಗಾಗಿ ರಸ್ತೆ, ಕುಡಿಯುವ ನೀರು, ನೀರಾವರಿ ಹೀಗೆ ಅನೇಕ ಸೌಲಭ್ಯ ಒದಗಿಸಿಕೊಟ್ಟಿದ್ದೇನೆ ಎಂದರು. ಈ ಭಾಗದ ಗಾಣದಾಳು, ಶಿವಳ್ಳಿ, ಹೊಳಲು, ಮಾದನಾಯಕನ ಹಳ್ಳಿಯು ಇನ್ನು ಕೆಲ ಗ್ರಾಮಗಳಿಗೆ ಶಾಶ್ವತ ನೀರಾವರಿಗಾಗಿ 300 ಕೋಟಿ ಕೊಟ್ಟಿದ್ದು, ಮಲ್ಲಿಗೆರೆ, ಹಟ್ನ ಗ್ರಾಮಗಳಿಗೆ ವಿದ್ಯುತ್ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಜೊತೆಗೆ ಮಂಡ್ಯ–ಮೇಲುಕೋಟೆ ರಸ್ತೆಯ ಪುನಶ್ಚೇತನ ಕಾಮ ಗಾರಿ ಶೀಘ್ರವೇ ಆರಂಭವಾಗುವುದು ಎಂದು ತಿಳಿಸಿದರು.

ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ಮಾತನಾಡಿ, ಸಿ.ಎಸ್.ಪುಟ್ಟರಾಜು ಕ್ಷೇತ್ರದ ಪ್ರತಿ ಗ್ರಾಮಕ್ಕೂ ಸಮರ್ಪಕವಾಗಿ ಅನುದಾನ ನೀಡಿದ್ದಾರೆ. ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಶಾಸಕರ ಅನುದಾನ ಕೊಡಿಸಿಕೊಟ್ಟಿದ್ದು, ಈ ಭಾಗದ ಎಲ್ಲಾ ಗ್ರಾಮಕ್ಕೆ ನೀರೊದಗಿಸುವ ಮೂಲಕ ಆಧುನಿಕ ಭಗೀರಥ ಎನಿಸಿದ್ದಾರೆ. ಮುಂದೆ ಅವರು ಈ ಕ್ಷೇತ್ರಕ್ಕೆ ಮತ್ತೊಮ್ಮೆ ಶಾಸಕರಾದರೆ ಮತ್ತಷ್ಟು ಅಭಿವೃದ್ಧಿ ಕೆಲಸಗಳಾಗುತ್ತವೆ ಎಂದರು.

ಈ ವೇಳೆ ಸಿ.ಎಸ್.ಪುಟ್ಟರಾಜು ಅವರಿಗೆ ದುದ್ದ ಹೋಬಳಿ ಹಲವು ಗ್ರಾಪಂ ಹಾಗೂ ಗ್ರಾಮಗಳ ವತಿಯಿಂದ ನಾಗರಿಕ ಸನ್ಮಾನ ನೆರವೇರಿಸಲಾಯಿತು. ವೇದಿಕೆಯಲ್ಲಿ ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಜೆಡಿಎಸ್ ಮುಖಂಡರಾದ ಅಶೋಕ್, ಮಾದಪ್ಪ, ಬಾಲಕೃಷ್ಣ, ಸತ್ಯನಾರಾಯಣ್ ಸೇರಿದಂತೆ ಹಲವರಿದ್ದರು.

# ಗೆದ್ದಲು ಕಟ್ಟಿದ ಹುತ್ತಕ್ಕೆ ನಾಗರಹಾವು ಬಂದು ಸೇರಿಕೊಂಡಿದೆ

## ಶಾಸಕ ರವೀಂದ್ರ ಶ್ರೀಕಂಠಯ್ಯ ವಿರುದ್ಧ ತಗ್ಗಹಳ್ಳಿ ವೆಂಕಟೇಶ್ ವಾಗ್ದಾಳಿ




ಮಂಡ್ಯ, ಮಾ.17– ಗೆದ್ದಲು ಕಟ್ಟಿದ ಹುತ್ತಕ್ಕೆ ನಾಗರಹಾವು ಬಂದು ಸೇರಿಕೊಂಡಿದ್ದು, ಈಗ ನಮ್ಮನ್ನೇ ಕುಟುಕಲು ಮುಂದಾಗಿದೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ವಿರುದ್ಧ ಜೆಡಿಎಸ್ ಬಂಡಾಯ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ವಾಗ್ದಾಳಿ ನಡೆಸಿದರು.

ಶ್ರೀರಂಗಪಟ್ಟಣ ಕ್ಷೇತ್ರದ ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತರು ಶಾಸಕ ರವೀಂದ್ರ ಶ್ರೀಕಂಠಯ್ಯ ವರ್ತನೆಯಿಂದ ಬೇಸತ್ತು ರಾಜೀನಾಮೆ ನೀಡುತ್ತಿದ್ದಾರೆ. ಈ ಬಗ್ಗೆ ಮಾತನಾಡಿರುವ ಶಾಸಕರು, ಯಾರೋ ಕಳ್ಳೆತ್ತುಗಳು ಪಕ್ಷ ಬಿಡುತ್ತಿದ್ದಾರೆ. ನಿಷ್ಠಾವಂತರು ಬಿಡುತ್ತಿಲ್ಲ ಎಂದು ಹೇಳಿಕೆ ನೀಡುವ ಮೂಲಕ ಇಡೀ ಜೆಡಿಎಸ್ ಕಾರ್ಯಕರ್ತರಿಗೆ ಅವಮಾನ ಮಾಡಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ನಿಷ್ಠಾವಂತ ಕಾರ್ಯಕರ್ತರು ಕಟ್ಟಿದ ಜೆಡಿಎಸ್ ಪಕ್ಷಕ್ಕೆ ಸೇರಿಕೊಂಡಿರುವ ರವೀಂದ್ರ ಶ್ರೀಕಂಠಯ್ಯ ಅವರು, ಈಗ ಕಾರ್ಯಕರ್ತರ ಬಗ್ಗೆ ಮಾತನಾಡುತ್ತಿದ್ದಾರೆ. ಇವರು ಕಾಂಗ್ರೆಸ್ ಪಕ್ಷದಲ್ಲಿದ್ದಾಗಲೂ ನಿಷ್ಠೆಯಿಂದ ಇರಲಿಲ್ಲ. ಈಗಲೂ ಜೆಡಿಎಸ್ ಪಕ್ಷಕ್ಕೆ ನಿಷ್ಠೆ ತೋರಿಸುತ್ತಿಲ್ಲ. ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಬಿ ಫಾರಂ ಕೊಟ್ಟರೆ ಮಾತ್ರ ಕಾಂಗ್ರೆಸ್. ಇಲ್ಲದಿದ್ದರೆ ಬಂಡಾಯ ನಿಲ್ಲುತ್ತಿದ್ದರು. ಇವರ ತಂದೆ ಶ್ರೀಕಂಠಯ್ಯ ಕೂಡ ಇದೇ ರೀತಿ ಬಂದರು. ಅಂಬರೀಷ್ ಸ್ಪರ್ಧಿಸಿದ್ದಾಗ ಬಂಡಾಯ ನಿಲ್ಲುವ ಮೂಲಕ ಕಾಂಗ್ರೆಸ್ ನಿರ್ನಾಮಕ್ಕೆ ಕಾರಣರಾದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿಷ್ಠಾವಂತ ಕಾರ್ಯಕರ್ತರನ್ನು ಕಳ್ಳೆತ್ತುಗಳು ಎನ್ನುವ ಮೂಲಕ ಜೆಡಿಎಸ್ ಕಾರ್ಯಕರ್ತರಿಗೆ ಅವಮಾನ ಮಾಡಿರುವ ಶಾಸಕ ರವೀಂದ್ರ ಶ್ರೀಕಂಠಯ್ಯ ಕ್ಷಮೆ ಕೇಳಬೇಕು. ಜೆಡಿಎಸ್ ವರಿಷ್ಠರು ಇವರ ಮನೆ ಬಾಗಿಲಿಗೆ ಹೋಗಿ ಟಿಕೆಟ್ ನೀಡಿದ್ದರಿಂದ ನಿಷ್ಠಾವಂತ ಕಾರ್ಯಕರ್ತರಿಂದಲೇ ಶಾಸಕರಾಗಿರುವುದು ಎಂಬುದನ್ನು ಮರೆಯಬಾರದು. ಇಂಥ ನಿಷ್ಠಾವಂತ ಕಾರ್ಯಕರ್ತರನ್ನು ಉಳಿಸಿಕೊಳ್ಳುವ ಯೋಗ್ಯತೆ ಇಲ್ಲದವರು, ಈ ರೀತಿ ಮಾತನಾಡುತ್ತಾರೆ. ಕೂಡಲೇ ಜಿಲ್ಲಾಧ್ಯಕ್ಷ ಡಿ.ರಮೇಶ್ ಅವರು ಶಾಸಕರಿಗೆ ಬುದ್ಧಿ ಹೇಳುವ ಮೂಲಕ ಕ್ರಮ ಕೈಗೊಳ್ಳಬೇಕು. ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಅಲ್ಲದೆ, ನನ್ನ ಬಗ್ಗೆ ಶಾಸಕ, ಮಾಜಿ ಶಾಸಕ ಹಾಗೂ ಬಿಜೆಪಿ ಸಂಭಾವ್ಯ ಅಭ್ಯರ್ಥಿ ಅಪಪ್ರಚಾರ ಮಾಡುತ್ತಿದ್ದು, ಇಂಥ ಅಪಪ್ರಚಾರಗಳಿಗೆ ಕಿವಿಗೊಡಬೇಡಿ. ನಾನು ಚುನಾವಣೆಯಲ್ಲಿ ಸ್ಪರ್ಧಿಸುವುದು ಖಚಿತ ಎಂದರು. ನಾನು ಜೆಡಿಎಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ. ಆದ್ದರಿಂದ ಈಗಾಗಲೇ ಕ್ಷೇತ್ರದ ಎಲ್ಲಾ ಹೋಬಳಿವಾರು ಕಾರ್ಯಕರ್ತರು, ಹಿತೈಷಿಗಳು, ಸ್ನೇಹಿತರು ಸಭೆಗಳನ್ನು ಮಾಡುತ್ತಿದ್ದಾರೆ. ಅದರಂತೆ ಮಾ.19 ರಂದು ಬೆಳಗ್ಗೆ 11ಕ್ಕೆ ಯಲಿಯೂರು ಗ್ರಾಮದ ಹಿರಿಯಮ್ಮದೇವಿ ದೇವಾಲಯದ ಆವರಣದಲ್ಲಿ ಕಾರ್ಯಕರ್ತರ ಸಭೆ ಕರೆಯಲಾಗಿದೆ. ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಕಾರ್ಯಕರ್ತರು, ಹಿತೈಷಿಗಳು, ಸ್ನೇಹಿತರು ಆಗಮಿಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಸಿದ್ದರಾಜು, ಕಾಳೇಗೌಡ, ಕಾಳೇನಹಳ್ಳಿ ಗ್ರಾಪಂ ಸದಸ್ಯ ಲೋಕೇಶ್, ಲೋಕೇಶ್, ಸುರೇಶ್, ಲೋಕೇಶ್ ಇದ್ದರು.

# ನಾಳೆ ಎಸ್.ಡಿ.ಜಯರಾಂ ಸ್ಮರಣಾರ್ಥ ಅಕ್ಷರ ಜಾತ್ರೆ

## ಸಮ್ಮೇಳನಾಧ್ಯಕ್ಷರಾಗಿ ಜೋಗಿಗೌಡ ಆಯ್ಕೆ: ಅಶೋಕ್ ಜಯರಾಂ

ಮಂಡ್ಯ, ಮಾ.17– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ಆಶ್ರಯದಲ್ಲಿ ಎಸ್.ಡಿ.ಜಯರಾಂ ಸ್ಮರಣಾರ್ಥ ದ್ವಿತೀಯ ಕನ್ನಡ ಅಕ್ಷರ ಜಾತ್ರೆ ಮತ್ತು ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾ.19ರಂದು ಬೆಳಗ್ಗೆ 10.30ಕ್ಕೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷ ಅಶೋಕ್ ಜಯರಾಂ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ಷರ ಜಾತ್ರೆ ಸಮ್ಮೇಳಾಧ್ಯಕ್ಷರನ್ನಾಗಿ ಕವಿ ಡಾ.ಕೆ.ಜೋಗಿಗೌಡ ಅವರನ್ನು ಆಯ್ಕೆ ಮಾಡಲಾಗಿದೆ. ಅಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಶಿ.ರಾಮಚಂದ್ರೇಗೌಡ ಸಮಾರಂಭ ಉದ್ಘಾಟಿಸುವರು ಎಂದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ ಅಧ್ಯಕ್ಷತೆ ವಹಿಸುವರು. ಡಾ.ಕೆ.ಜೋಗಿಗೌಡ ಸಮ್ಮೇಳನಾಧ್ಯಕ್ಷರ ನುಡಿ ನುಡಿಯುವರು. ರಾಜ್ಯ ಪತ್ರಿಕಾ ಸಂಪಾದಕರ ಸಂಘದ ಅಧ್ಯಕ್ಷ ಮತ್ತಿಕೆರೆ ಜಯರಾಂ ಅವರಿಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ, ಡಾ.ಹೆಚ್.ಎಸ್.ಮುದ್ದೇಗೌಡರಿಗೆ ಕವಿರತ್ನ ಪ್ರಶಸ್ತಿ, ಡಾ.ಈ.ಸಿ.ನಿಂಗೇಗೌಡರಿಗೆ ಕನ್ನಡ ರತ್ನ ಪ್ರಶಸ್ತಿ, ಡಾ.ಸಿ.ಎಂ.ಪರಮೇಶ್ ಅವರಿಗೆ ಎಸ್.ಡಿ.ಜಯರಾಂ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮಾಜಿ ಶಾಸಕಿ ಪ್ರಭಾವತಿ ಜಯರಾಂ ಉಪಸ್ಥಿತರಿರುವರು. ಕವಿ ಕೃಷ್ಣ ಸ್ವರ್ಣಸಂದ್ರ ಪ್ರಾಸ್ತಾವಿಕ ನುಡಿ ನುಡಿಯುವರು ಎಂದರು.

ಕೆ.ಟಿ.ಶಂಕರೇಗೌಡ, ಚೌಡೇನಹಳ್ಳಿ ಪುಟ್ಟರಾಜು, ಎಸ್.ನಾರಾಯಣ, ಬನ್ನಂಗಾಡಿ ಸಿದ್ದಲಿಂಗಯ್ಯ, ಶಿವಲಿಂಗೇಗೌಡ ಅವರಿಗೆ ಕರ್ನಾಟಕ ಸೇವಾರತ್ನ ಪ್ರಶಸ್ತಿ, ಬಿ.ಆರ್.ಉಮಾ, ಡಾ.ಚಂದ್ರಶೇಖರ್, ಡಾ.ಹೆಚ್.ಸಿ.ಕುಸುಮಾಂಜಲಿ, ರಾಜೇಂದ್ರ ಕೆ ಹೀರೇಹಳ್ಳಿ, ಭವಾನಿ ಲೋಕೇಶ್ ಅವರಿಗೆ ಕವಿರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿ.ಆಂಜನಪ್ಪ, ಮಂಡ್ಯ ಸತ್ಯ, ಸಿ.ಮಧು, ಹೆಚ್.ಎಸ್.ಮಹೇಶ್, ಸಿ.ಸಿದ್ದರಾಜು, ಹೆಚ್.ಆರ್.ನಂದೀಶ್, ಬಿ.ಬೋರಯ್ಯ, ಮಂಗಲ ಲಂಕೇಶ್, ಆಟೋ ರಾಜಣ್ಣ ಹಾಗೂ ಲಕ್ಕಪ್ಪ ಅವರಿಗೆ ಎಸ್.ಡಿ.ಜಯರಾಂ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

# ದಾಖಲೆ ಇಲ್ಲದ 5.92 ಲಕ್ಷ ರೂ. ವಶ

ಶ್ರೀರಂಗಪಟ್ಟಣ, ಮಾ.17– ಯಾವುದೇ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 5.92 ಲಕ್ಷ ರೂ.ಗಳನ್ನು ತಾಲೂಕಿನ ಶಾಂತಿಕೊಪ್ಪಲು ಬಳಿಯ ಚೆಕ್‌ಪೋಸ್ಟ್‌ನಲ್ಲಿ ಅರಕೆರೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.



ಶಾಂತಿಕೊಪ್ಪಲು ಬಳಿ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಮೈಸೂರಿನಿಂದ ಪಾಂಡವಪುರ ಕಡೆಗೆ ತೆರಳುತ್ತಿದ್ದ ಸ್ವಿಫ್ಟ್ ಕಾರಿ (ಕೆಎ–02, ಎಂಕ್ಯೂ–6279)ನಲ್ಲಿ ಯಾವುದೇ ದಾಖಲೆ ಇಲ್ಲದ 5.92 ಲಕ್ಷ ರೂ. ಸಾಗಿಸಲಾಗುತ್ತಿತ್ತು. ತಕ್ಷಣ ಪೊಲೀಸರು ಹಣದ ಬಗ್ಗೆ ವಿಚಾರಣೆ ನಡೆಸಿದ್ದು, ಈ ಬಗ್ಗೆ ಸರಿಯಾದ ಮಾಹಿತಿ ನೀಡದ ಹಿನ್ನೆಲೆಯಲ್ಲಿ ಹಣ, ಕಾರು ಮತ್ತು ಹಣ ಸಾಗಿಸುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದರು. ಬಳಿಕ ಮತ್ತೊಮ್ಮೆ ಆತನನ್ನು ವಿಚಾರಣೆಗೊಳಪಡಿಸಿ, ಸೂಕ್ತ ದಾಖಲಾತಿ ನೀಡಿ ಹಣ ಬಿಡಿಸಿಕೊಂಡು ಹೋಗುವಂತೆ ಠಾಣಾ ಜಾಮೀನಿನ ಮೇಲೆ ಆತನನ್ನು ಬಿಡುಗಡೆ ಮಾಡಲಾಗಿದೆ. ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಈ ಸಂಬಂಧ ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾಜಿ ಶಾಸಕ ನರೇಂದ್ರಸ್ವಾಮಿ ವಿರುದ್ಧ ಪ್ರತಿಭಟನೆ



ಭಾರತೀನಗರ, ಮಾ.17– ಜೆಡಿಎಸ್ ಅನ್ನು ಪುಟ್ಗೋಸಿ ಪಕ್ಷ ಎಂದಿರುವ ಮಾಜಿ ಸಚಿವ ಪಿ. ನರೇಂದ್ರಸ್ವಾಮಿ ವಿರುದ್ಧ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ಮದ್ದೂರು–ಮಳವಳ್ಳಿ ಹೆದ್ದಾರಿಯ ಹಲಗೂರು ವೃತ್ತದಲ್ಲಿ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು, ನರೇಂದ್ರಸ್ವಾಮಿ ಅವರನ್ನು ನಾಯಿ ಸ್ವಾಮಿ ಎಂದು ಧಿಕ್ಕಾರ ಕೂಗಿ ಪ್ರತಿಭಟಿಸಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಚಿಕ್ಕತಿಮ್ಮೇಗೌಡ ಮಾತನಾಡಿ, ಮಳವಳ್ಳಿಯಲ್ಲಿ ನಡೆದ ಸಭೆಯಲ್ಲಿ ನಮ್ಮದು ರಾಷ್ಟ್ರೀಯ ಪಕ್ಷ. ಪುಟ್ಗೋಸಿ ಪಕ್ಷದ ಶಾಸಕರ ಮಾತನ್ನು ಕೇಳುತ್ತಿದ್ದೀರಿ ಎಂದು ಮಾತನಾಡಿರುವ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇಂತಹ ಮಾತು ಆಡಲು ನರೇಂದ್ರಸ್ವಾಮಿಗೆ ನಾಚಿಕೆಯಾಗುವುದಿಲ್ಲವೇ ಎಂದು ಹರಿಹಾಯ್ದರು. ಪುಟ್ಗೋಸಿ ಎಂದಿರುವ ನರೇಂದ್ರಸ್ವಾಮಿ ಆ ಪಕ್ಷದಿಂದ ಸೋತಿರುವುದನ್ನು ಮರೆಯಬಾರದು. ಕಳೆದ ಚುನಾವಣೆಯಲ್ಲಿ ಸೋತು ಪುಟ್ಗೋಸಿಯಾಗಿದ್ದಾರೆ. ಮತ್ತೆ ಸೋಲುವುದರಲ್ಲಿ ಯಾವುದೇ ಸಂಶಯವಿಲ್ಲ. ಜೆಡಿಎಸ್ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆಯಿಂದ ಮಾತನಾಡಬೇಕು. ಕೂಡಲೇ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಬಳಿ ಹೋಗಿ ಕ್ಷಮೆ ಯಾಚಿಸಬೇಕೆಂದು ಆಗ್ರಹಿಸಿದರು. ಜೆಡಿಎಸ್ ತಾಲೂಕು ಯುವ ಘಟಕದ ಮಾಜಿ ಅಧ್ಯಕ್ಷ ನವೀನ್ ಮಾತನಾಡಿದರು.

ಜೆಡಿಎಸ್ ಜಿಲ್ಲಾ ಗೌರವಾಧ್ಯಕ್ಷ ಎಚ್.ಎಂ. ಮರಿಮಾದೇಗೌಡ ಮಾತನಾಡಿದರು. ಜಿಪಂ ಮಾಜಿ ಸದಸ್ಯ ಎ.ಟಿ.ಬಲ್ಲೇಗೌಡ, ತಾಪಂ ಮಾಜಿ ಸದಸ್ಯ ಎನ್.ಸಿ.ಪುಟ್ಟಸ್ವಾಮಿಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಚನ್ನೇಗೌಡ, ಉಪಾಧ್ಯಕ್ಷ ಸಿದ್ದೇಗೌಡ, ವಿಜಯ, ಮುಖಂಡರಾದ ಸಿದ್ದರಾಮು, ಎ.ಟಿ. ಶಂಕರ್, ಯೋಗೇಂದ್ರ, ಚನ್ನಶೆಟ್ಟಿ, ವಿನುಕುಮಾರ್, ಕೆ.ಟಿ.ಸುರೇಶ್, ಜಗದೀಶ, ರಘುವೆಂಕಟೇಗೌಡ, ಕಾಂತರಾಜು, ರಾಘವೇಂದ್ರ ಇತರರಿದ್ದರು.



ನಾಗವಾಲದಿಂದ ಹುಣಸೂರಿಗೆ ತೆರಳುವ ಮುಖ್ಯ ರಸ್ತೆಯ ಕಾಮಗಾರಿಗೆ ಶಾಸಕ ಜಿ.ಟಿ. ದೇವೇಗೌಡ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ಸದಸ್ಯರಾದ ಬಸವನಾಯಕ, ಸೀಗಳ್ಳಿ ಕುಮಾರ್, ಸೀಗಳ್ಳಿ ಸೋಮಣ್ಣ, ಜವರನಾಯಕ, ಹುಯಿಲಾಳು ಮಹಾದೇವು, ಕೆಂಪೇಗೌಡ, ಸೋಮಶೇಖರ್, ಸಿದ್ದನಾಯ್ಕ, ನಾಗವಾಲ ಮಂಜು, ಡೈರಿ ಕಾರ್ಯದರ್ಶಿ ಎಂ.ಪಿ. ಕುಮಾರ್, ವಿಷಕಂಠ ನಾಯಕ,ಬಿ.ಕೆ ಈಶ್ವರ್, ಹುಯಿಲಾಳು ರಾಮಸ್ವಾಮಿ, ಪಿ.ಮಹಾದೇವ, ಗೌರಮ್ಮ ಮಾಲೇಗೌಡ, ಶ್ರೀಧರ, ನಾಗವಾಲ ಮಹೇಶ್,ಅಂಗಡಿ ಸದಾಶಿವ,ಪುಟ್ಟಯ್ಯ, ಪಿಡಿಒ ಡಾಕ್ಟರ್ ಶೋಭರಾಣಿ, ಕಾರ್ಯದರ್ಶಿ ಯಶ್ವಂತ್ ಮುಂತಾದವರು ಇದ್ದರು.



ವರುಣ ಕ್ಷೇತ್ರದ ಬಿಜೆಪಿ ಮುಖಂಡ ಶರತ್ ಪುಟ್ಟಬುದ್ಧಿ ಅವರು ಕಿರಗಸೂರು ಗ್ರಾಮದಲ್ಲಿ ನಡೆದ ಮಾರಮ್ಮನ ಹಬ್ಬಕ್ಕೆ ಆಗಮಿಸಿದ ವೇಳೆ ಅವರನ್ನು ಗ್ರಾಮದ ಮುಖಂಡರು ಸನ್ಮಾನಿಸಿದರು. ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ನಾಡಗೌಡರಾದ ಮಹದೇವಪ್ಪ, ಮುಖಂಡರಾದ ಪ್ರಭುಸ್ವಾಮಿ, ನಂಜುಂಡಪ್ಪ, ರವಿ, ಮಹೇಶ್, ಮಂಜು, ಶಿವಣ್ಣ, ಸುಂದರ ಉಪಸ್ಥಿತರಿದ್ದರು.



ಜಯಪುರ ಹೋಬಳಿ ಡಿ.ಸಾಲುಂಡಿ ಗ್ರಾಮದ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬವನ್ನು ಆಚರಿಸಲಾಯಿತು. ನವಚೇತನ ಟ್ರಸ್ಟ್ ಅಧ್ಯಕ್ಷ ಮರಿಗೌಡ, ಸಮಾಜ ಸೇವಕ ಎಸ್.ಶ್ರೀಕಾಂತ್, ಸುರೇಶ್, ಶಿವು, ಮಹದೇವು, ಸತೀಶ್, ಸೋಮಶೇಖರ್, ಪುಟ್ಟಸ್ವಾಮಿಗೌಡ ಇದ್ದರು.

## ವ್ಯಕ್ತಿ ನಾಪತ್ತೆ

ಮೈಸೂರು, ಮಾ.17– ಗುಂಡ್ಲುಪೇಟೆ ತಾಲೂಕಿನ ಯಲಚಟ್ಟಿ ಗ್ರಾಮದ ಮಹೇಶ್ ಎಂ ಬಿನ್ ಮಲ್ಲಪ್ಪ ಎಂಬ 46 ವರ್ಷದ ವ್ಯಕ್ತಿ ಫೆ.27 ರಂದು ಕಾಣೆಯಾಗಿದ್ದಾರೆ.

ವ್ಯಕ್ತಿಯ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಜಿಲ್ಲೆಯ ಎಸ್.ಪಿ. ಕಚೇರಿ ದೂ.ಸಂ: 0821–2520040, ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ:0821–2444800, ನಂಜನಗೂಡು ಪಟ್ಟಣ ಠಾಣೆ ದೂ.ಸಂ:0821–228383 ಸಂಪರ್ಕಿಸಬಹುದು ಅಥವಾ nanjangudtownmys @ksp.gov.in ವೆಬ್‌ಸೈಟ್‌ನ್ನು ಸಂಪರ್ಕಿಸಲು ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರಲ್ಲಿ ಪುನೀತ್ ಹುಟ್ಟುಹಬ್ಬ ಆಚರಣೆ

## ಕೇಕ್ ಕತ್ತರಿಸಿ, ಅನ್ನ ಸಂತರ್ಪಣೆ ಮೂಲಕ ಚೇತನಕ್ಕೆ ಚಿರಶಾಂತಿ ಸಂದೇಶ



ಮೈಸೂರಿನ ಬೆಳ್ಳಿಕಟ್ಟೆ ಯುವಕರ ಬಳಗದಿಂದ ಪುನೀತ್ ಹುಟ್ಟುಹಬ್ಬ ಆಚರಣೆ.



ಪುನೀತ್ ಅಭಿಮಾನಿ ಬಳಗದಿಂದ ಅಪ್ಪು ಜನ್ಮ ದಿನಾಚರಣೆ.

ಮೈಸೂರು,ಮಾ.17(ಎಸ್‌ಬಿಡಿ)– ಮೈಸೂರಿನೆಲ್ಲೆಡೆ ದಿವಂಗತ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಿದರು.

ಬಹುತೇಕ ಎಲ್ಲಾ ಬಡಾವಣೆಗಳ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರ, ಬೃಹತ್ ಕಟೌಟ್ ಅಳವಡಿಸಿ, ಪೂಜೆ ಸಲ್ಲಿಸಿದ್ದಲ್ಲದೆ ಅನ್ನದಾನ, ಮಜ್ಜಿಗೆ, ಪಾನಕ, ಸಿಹಿ ವಿತರಿಸಿ ಸಂಭ್ರಮಿಸಿದರು. ಸ್ಪೀಕರ್ ಮೂಲಕ ಪ್ರೀತಿಯ 'ಅಪ್ಪು' ಅಭಿನಯ ಹಾಗೂ ಹಿನ್ನೆಲೆ ಗಾಯನದ ಹಾಡುಗಳನ್ನು ಪ್ರಸಾರ ಮಾಡಿದರು. 'ಅಪ್ಪು' ಹುಟ್ಟುಹಬ್ಬದ ಪ್ರಯುಕ್ತ ಕ್ರೀಡಾಸ್ಪರ್ಧೆ, ರಕ್ತದಾನ ಶಿಬಿರ, ಆರೋಗ್ಯ ತಪಾಸಣೆ, ವೃದ್ಧಾಶ್ರಮ ನಿವಾಸಿಗಳಿಗೆ ಸಿಹಿ ವಿತರಣೆ, ಹೀಗೆ ಹತ್ತಾರು ಸಾರ್ಥಕ ಸೇವಾ ಕಾರ್ಯಗಳನ್ನೂ ನಡೆಸಿದರು.

**50 ಅಡಿ ಕಟೌಟ್:** ಬೆಳ್ಳಿಕಟ್ಟೆ ಯುವಕರ ಬಳಗದ ವತಿಯಿಂದ ಡಿ.ದೇವರಾಜ ಅರಸು ರಸ್ತೆಯಲ್ಲಿ ಪುನೀತ್ ರಾಜಕುಮಾರ್ ಅವರ 50 ಅಡಿ ಬೃಹತ್ ಕಟೌಟ್ ಅಳವಡಿಸಿ, ಪುಷ್ಪ ನಮನ ಸಲ್ಲಿಸಲಾಯಿತು. ಇದೇ ವೇಳೆ ಎರಡು ಕ್ವಿಂಟಾಲ್ ವೆಜಿಟೇಬಲ್ ಪಲಾವ್,



ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಹಾಗೂ ಅಪ್ಪು ಅಭಿಮಾನಿಗಳಿಂದ ರಕ್ತದಾನ ಶಿಬಿರ.



25 ಕೆಜಿ ಕೇಕ್ ಹಾಗೂ ಮೈಸೂರು ಪಾಕ್ ಅನ್ನು ಸಾರ್ವಜನಿಕರಿಗೆ ವಿತರಿಸಲಾಯಿತು. ಹಾಗೆಯೇ ಅಪ್ಪು ಅಭಿಮಾನಿಗಳ ಬಳಗದ ವತಿಯಿಂದ ಚಂದ್ರ ಮೌಳೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಇದೇ ವೇಳೆ ಎಲ್‌ಇಡಿ ಪರದೆಯಲ್ಲಿ ಪುನೀತ್ ರಾಜ್‌ಕುಮಾರ್ ಅವರ ಹಾಡುಗಳು ಹಾಗೂ ಡೌಲಗ್‌ಗಳನ್ನು ಪ್ರಸಾರ ಮಾಡ ಲಾಯಿತು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ನಗರ ಪಾಲಿಕೆ ಸದಸ್ಯೆ ಶ್ರೀಮತಿ ಪ್ರಮೀಳಾ ಭರತ್ ಅವರು ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡಿದರು.

ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಮೊಹಲ್ಲಾ ಮುಖಂಡರಾದ ರಾಜಣ್ಣ, ಮಹೇಶ್, ಭರತ್, ರಾಜಶೇಖರ್, ಚಂದ್ರಕುಮಾರ್, ಗೋಪಾಲಕೃಷ್ಣ, ಸ್ವಾಮಿನಾಥ್, ಸಚಿನ್, ರವಿ, ಪ್ರಶಾಂತ್, ಲೋಹಿತ್, ಪ್ರವೀಣ್, ವೆಂಕಟೇಶ್, ಭೂಷಿತ್, ಪ್ರಶಾಂತ್, ಹರ್ಷ, ರಮೇಶ, ಕುಮಾರ್, ಉಮೇಶ್, ವಿಜಯ್, ಸತೀಶ್, ಲೋಕೇಶ್, ಧನುಷ್, ಅಭಿಷೇಕ್, ಲೋಕೇಶ್, ಕಿರಣ್, ರಘು, ಕುಮಾರ, ಯೋಗೇಶ್, ನಿಶಾಂತ್, ಅರವಿಂದ್, ಚೇತನ್, ಶ್ರೀನಿವಾಸ್, ನರೇಂದ್ರ ಮಂಜ, ಸಂತೋಷ್, ಪ್ರೀತಮ್, ಕೆಂಪರಾಜು, ಮೊಹಲ್ಲಾದ ಮುಖಂಡರು, ಸಾರ್ವಜನಿಕರು ಹಾಗೂ ಸಾವಿರಾರು ಅಭಿಮಾನಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ಮೇಟಗಳ್ಳಿ, ಬಿಎಂಶ್ರೀ ನಗರ, ಬೃಂದಾವನ ಬಡಾವಣೆ, ಗೋಕುಲಂ, ಕುಂಬಾರಕೊಪ್ಪಲು, ಹೆಬ್ಬಾಳು, ವಿಜಯನಗರ, ಕೆ.ಜಿ.ಕೊಪ್ಪಲು, ಗಾಂಧಿನಗರ, ಅಗ್ರಹಾರ, ಚಾಮುಂಡಿಪುರಂ, ಜೆ.ಪಿ.ನಗರ, ಕುವೆಂಪುನಗರ ಸೇರಿದಂತೆ ಬಹುತೇಕ ಎಲ್ಲಾ ಬಡಾವಣೆಗಳಲ್ಲೂ ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.



ಮಂಡ್ಯಕ್ಕೆ ತೆರಳುವ ಮಾರ್ಗ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಟಿ.ರವಿ ಸ್ವಾಗತಿಸಿದರು. ಈ ವೇಳೆ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಈರಪ್ಪ ಇದ್ದರು.


## ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.17– ವಿ.ವಿ. ಮೊಹಲ್ಲಾ ವಿಭಾಗ ವ್ಯಾಪ್ತಿಯ 4ನೇ ತ್ರೈಮಾಸಿಕ ನಿರ್ವಹಣ ಕೆಲಸದ ನಿಮಿತ್ತ ಮಾ.19ರ ಭಾನುವಾರದಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸರಸ್ವತಿಪುರಂ 1 ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ ಕೆ.ಜಿ. ಕೊಪ್ಪಲು ಮುಖ್ಯರಸ್ತೆ, ಯುನಿವರ್ಸಿಟಿ ಕ್ವಾರ್ಟ್ರಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿರಸ್ತೆ, ಮುರಗನ್ ಮೆಡಿಕಲ್‌ನಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5 ರಿಂದ 16ನೇ ಮೇನ್, ಪಡುವಾರಹಳ್ಳಿ, ಡಿ.ಸಿ ರೆಸಿಡೆನ್ಸಿ, ರಿಜನಲ್ ಕಮಿಷನರ್ ಆಫೀಸ್, ಸಿ.ಎಫ್.ಟಿ.ಆರ್.ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾಟ್ರಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯರಸ್ತೆ, ವಾಗ್ದೇವಿನಗರ, ಜೆ.ಸಿ.ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಪಂ ಕಚೇರಿ, ಕೋರ್ಟ್, ಅರಸುರಸ್ತೆ, ಡಿಸಿ ಕಛೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತಮುತ್ತ, ಶಿವರಾಂಪೇಟೆ, ದಿವಾನ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ.ಗ್ರೌಂಡ್ ಸುತ್ತಮುತ್ತಲಿನ ಪ್ರದೇಶ, ಮೆಟ್ರೋಪೋಲ್ ಸುತ್ತಮುತ್ತ, ಜೆ.ಎಲ್.ಬಿ ರಸ್ತೆ, ಜಯಲಕ್ಷ್ಮಿ ವಿಲಾಸ್, ಜಿಪಂ ಕಚೇರಿ, ನ್ಯಾಯಾಲಯದ ಆವರಣ, ಏರ್‌ಲೈನ್ಸ್ ಹೋಟೇಲ್ ರಸ್ತೆ, ಮಹಾರಾಜ ಹಾಸ್ಟೆಲ್ ಏರಿಯಾ, ಗೀತಾ ರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಕೂರ್ಗಳ್ಳಿ ಕೈಗಾರಿಕ ಪ್ರದೇಶ, ಎಕ್ಸೆಲ್ ಪಬ್ಲಿಕ್ ಶಾಲೆ, ವಿನ್ಯಾಸ್, ಕೂರ್ಗಳ್ಳಿ ಕೆರೆ ಸುತ್ತಮುತ್ತ, ಗೋಪಾಲನ್ ಕಾಂಪೌಂಡ್, ವಿಪ್ರೋ, ಮೆರಿಟಾರ್, ಪಟ್ಟಾಬಿ ಎಂಟರ್ ಪ್ರೈಸೆಸ್, ಮಿಲೇನಿಯಮ್, ಎಲ್& ಟಿ, ಮಾರ್ಕ್ ಬ್ಯಾಟರಿಸ್ ರಸ್ತೆ, ಚಾಮುಂಡಿ ಸಿಲ್ಕ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಮತ್ತು M/s, BEML, M/s, Automotive Axles, M/s, Infosys ನ ಇಹೆಚ್‌ಟಿ ಬಳಕೆದಾರರಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

## ನಾಳೆ ಮಲ್ಲಾಡಿ ಸಹೋದರರ ಶಾಸ್ತ್ರೀಯ ಸಂಗೀತ

ಮೈಸೂರು, ಮಾ.17– ರಾಗ ವೈಭವ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಾ.19ರಂದು ಸಂಜೆ 6ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಆಯೋಜಿಸಿದ್ದು, ವಿದ್ವಾನ್ ಮಲ್ಲಾಡಿ ಸಹೋದರರು ಗಾಯನ ಸುಧೆ ಹರಿಸಲಿದ್ದಾರೆ. ಇವರೊಂದಿಗೆ ವಯೋಲಿನ್‌ನಲ್ಲಿ ಡಾ.ನಿಶಾಂತ್ ಚಂದ್ರನ್, ಮೃಂದಂಗದಲ್ಲಿ ವಿದ್ವಾನ್ ತುಮಕೂರು ಬಿ.ರವಿಶಂಕರ್ ಹಾಗೂ ಘಟದಲ್ಲಿ ಪ್ರೊ.ಜಿ.ಎಸ್.ರಾಮಾನುಜನ್ ವಾದ್ಯ ಸಹಕಾರ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವಿಭಾಗದ ಅಧ್ಯಕ್ಷರನ್ನಾಗಿ ಎನ್.ಆರ್. ನಾಗೇಶ್ ಅವರನ್ನು ನೇಮಕ ಮಾಡಿ ಕೆಪಿಸಿಸಿ ಹಿಂದುಳಿರ ವರ್ಗಗಳ ವಿಭಾಗದ ಅಧ್ಯಕ್ಷ ಮಧು ಬಂಗಾರಪ್ಪ ಆದೇಶ ಪತ್ರ ನೀಡಿದರು.



## ಕೋಟಿಗೂ ಅಧಿಕ ವೆಚ್ಚದ ನಾನಾ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ



ಮೈಸೂರು,ಮಾ.17(ಎಸ್‌ಬಿಡಿ)– ಮೈಸೂರಿನ ಚಾಮರಾಜ ಕ್ಷೇತ್ರದ ವಿವಿಧೆಡೆ ಕೋಟಿ ರೂ.ಗೂ ಹೆಚ್ಚು ಅಂದಾಜು ವೆಚ್ಚದ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಶುಕ್ರವಾರ ಚಾಲನೆ ನೀಡಿದರು. ಕುಂಬಾರಕೊಪ್ಪಲು ಬಸ್ ರೂಟ್ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಎಸ್‌ಎಫ್‌ಸಿ ವಿಶೇಷ ಅನುದಾನ 1 ಕೋಟಿ ರೂ.ಗಳಲ್ಲಿ ಕೈಗೆತ್ತಿಕೊಂಡಿದ್ದು, ಇದಕ್ಕೆ ಗುಂಡಪ್ಪಗೌಡರ ಮನೆ ಪಕ್ಕದ ರಾಮಮಂದಿರದ ಬಳಿ ಗುದ್ದಲಿಪೂಜೆ ನೆರವೇರಿಸಿದರು. ಇದಕ್ಕೂ ಮುನ್ನ ಮುಜರಾಯಿ ಇಲಾಖೆಯ 10 ಲಕ್ಷ ರೂ. ವಿಶೇಷ ಅನುದಾನದಲ್ಲಿ ಕುಕ್ಕರಹಳ್ಳಿಕೆರೆ ಬಳಿ ಬೋಗಾದಿ ರಸ್ತೆಯ ಮಡಿವಾಳ ಮಾಚಿದೇವರ ದೇವಾಲಯದ ಅಭಿವೃದ್ಧಿಗೆ ಚಾಲನೆ ನೀಡಿದರು. ಇದೇ ವೇಳೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ 15 ಲಕ್ಷ ರೂ. ವೆಚ್ಚದಲ್ಲಿ ಪಡುವಾರಹಳ್ಳಿ(ವಿನಾಯಕನಗರ)ಯಲ್ಲಿ ನಿರ್ಮಿಸಲಾದ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘ ನಿರ್ವಹಣೆಯ ಶ್ರೀರಾಮ ಮಂದಿರ ಕಟ್ಟಡವನ್ನು ಉದ್ಘಾಟಿಸಿದರು.


ಮೇಯರ್ ಶಿವಕುಮಾರ್, ನಗರ ಪಾಲಿಕೆ ಸದಸ್ಯರಾದ ವೇದಾವತಿ, ನಮ್ರತಾ ರಮೇಶ್ ಹಾಗೂ ಉಷಾ ಕುಮಾರ್ ಸಾಥ್ ನೀಡಿದರು. ಬಿಜೆಪಿ ಚಾಮರಾಜ ಕ್ಷೇತ್ರದ ಉಪಾಧ್ಯಕ್ಷರಾದ ಕುಮಾರ್ ಗೌಡ, ಶಿವಕುಮಾರ್, ಪಾಲಿಕೆ ಸದಸ್ಯ ಚಿಕ್ಕವೆಂಕಟು, ಮುಖಂಡರಾದ ನರಸಿಂಹ, ಯುವ ಮೋರ್ಚಾ ಪ್ರಮೋದ್, ಅಭಿ, ಚೌಡಪ್ಪ, ಮಹಾದೇವ, ವೆಂಕಟೇಶ್, ಮಡಿವಾಳರ ಸಂಘದ ಆನಂದ್, ಚೌಡಯ್ಯ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ಅದಾಲತ್

ಮೈಸೂರು,ಮಾ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್) ವತಿಯಿಂದ ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮಾ.18ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆವರೆಗೆ ವಿದ್ಯುತ್ ಅದಾಲತ್ ಹಮ್ಮಿಕೊಳ್ಳಲಾಗಿದೆ. ನಂಜನಗೂಡು ಉಪವಿಭಾಗ(1ಮತ್ತು2)ದ ಸಿಂಧುವಳ್ಳಿಪುರ ಶಾಖೆ ವ್ಯಾಪ್ತಿಯ ನವಿಲೂರು, ಸುತ್ತೂರು ಶಾಖೆ ವ್ಯಾಪ್ತಿಯ ಸರಗೂರು, ಹುರಾ ಶಾಖೆಯ ಹಾದನೂರು–ಒಡೆಯನಪುರ, ತಿ.ನರಸೀಪುರ ಉಪವಿಭಾಗದ ಮೂಗೂರು ಶಾಖೆ ವ್ಯಾಪ್ತಿಯ ಹೊಸಹಳ್ಳಿ, ಬನ್ನೂರು ಪಟ್ಟಣ ಶಾಖೆ ವ್ಯಾಪ್ತಿಯ ಮಾಕನಹಳ್ಳಿ ಗ್ರಾಮದಲ್ಲಿ ಅದಾಲತ್ ನಡೆಯಲಿದೆ

### 'ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ'ನಲ್ಲಿ ದುಬಾರಿ ಟೋಲ್ ಸಂಗ್ರಹ ಎಂದು ಆರೋಪಿಸಿ

# ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ನೇತೃತ್ವದಲ್ಲಿ ಪ್ರತಿಭಟನೆ




ಮೈಸೂರು,ಮಾ.17(ಪಿಎಂ)– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅವೈಜ್ಞಾನಿಕವಾಗಿ ದುಬಾರಿ ಟೋಲ್ ಸಂಗ್ರಹಿಸಲಾಗುತ್ತಿದೆ ಎಂದು ಆರೋಪಿಸಿ ಬಿಜೆಪಿ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ಬಳಿಯ ನಾಡಪ್ರಭು ಕೆಂಪೇಗೌಡ ವೃತ್ತದ ಸಮೀಪ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಬದಿಯಲ್ಲಿ ಕನ್ನಡಪರ ಸಂಘಟನೆ, ರೈತ ಸಂಘಟನೆ, ವಿದ್ಯಾರ್ಥಿ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ವಿಶ್ವನಾಥ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎಹೆಚ್. ವಿಶ್ವನಾಥ್, ಈ ಹೆದ್ದಾರಿ ನಿರ್ಮಾಣ ಪೂರ್ಣವಾಗಿಲ್ಲ. ಅಲ್ಲದೆ ಪ್ರಯಾಣಿಕರಿಗೆ ವಿಧಿಸಿರುವ ಟೋಲ್ ಶುಲ್ಕ ದುಬಾರಿ ಯಾಗಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದ್ದು, ಇದನ್ನು ಸರ್ಕಾರಕ್ಕೆ ತಿಳಿಸಲು ಈ ಶಾಂತಿಯುತ, ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ ಅವೈಜ್ಞಾನಿಕವಾಗಿದೆ. ಇದರಿಂದ ಪ್ರಯಾಣಿಕರಿಗೆ ತೀವ್ರ ತೊಂದರೆ ಯಾಗಿದೆ. ಬೆಂಗಳೂರು–ಮೈಸೂರು ರಸ್ತೆ ಬ್ರಿಟಿಷರ ಕಾಲದಲ್ಲೇ ಆಗಿತ್ತು. ಆ ಬಳಿಕ ನಮ್ಮ ಮಹಾರಾಜರು ಬೆಂಗಳೂರಿನಿಂದ ಊಟಿವರೆಗೆ ಕಾಂಕ್ರೀಟ್ ರಸ್ತೆ ನಿರ್ಮಿಸಿದರು. ಇದೀಗ ಎಕ್ಸ್‌ಪ್ರೆಸ್ ವೇ ನಿರ್ಮಾಣ ಆಗಿದೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಈ ಹೆದ್ದಾರಿಯನ್ನು 4 ಪಥದ ರಸ್ತೆಯಾಗಿ ಅಭಿವೃದ್ಧಿಪಡಿಸಲಾಯಿತು. ಇದರಲ್ಲಿ ಯಾವ ತೊಂದರೆ ಇಲ್ಲದೇ ಸಾರ್ವಜನಿಕರು ಪ್ರಯಾಣ ಮಾಡುತ್ತಿದ್ದರು. ಇದೀಗ ನಿರ್ಮಿಸಿರುವ ಹೆದ್ದಾರಿ ಬೇಕೆಂದು ಇವರನ್ನು ಕೇಳಿದವರ್‍ಯಾರು ಎಂದು ಪ್ರಶ್ನಿಸಿದರು.

ಎಕ್ಸ್‌ಪ್ರೆಸ್ ವೇ ನಿರ್ಮಾಣದ ಬಳಿಕ ಇಲ್ಲಿ ಮಾರ್ಗದುದ್ದಕ್ಕೂ ಯಾವುದೇ ಹೋಟೆಲ್, ಪೆಟ್ರೋಲ್ ಬಂಕ್, ಟ್ರಾಮಾ ಕೇರ್ ಸೆಂಟರ್, ಆಸ್ಪತ್ರೆ ಇಲ್ಲ. ಸಮರ್ಪಕ ಮೂಲಭೂತ ಸೌಲಭ್ಯ ಕಲ್ಪಿಸಿಲ್ಲ. ಅವೈಜ್ಞಾನಿಕ ಕಾಮಗಾರಿಯಿಂದ ಈವರೆಗೆ 93 ಮಂದಿ ಸಾವನ್ನಪ್ಪಿದ್ದಾರೆ. ಮೊನ್ನೆ ದರೋಡೆ ನಡೆದಿದೆ. ಅನುಕೂಲಕರವಾಗಿಲ್ಲದ ಈ ಹೆದ್ದಾರಿಯಲ್ಲಿ ಪ್ರಯಾಣಿಸಲು ದುಬಾರಿ ಟೋಲ್ ಶುಲ್ಕ ಸಂಗ್ರಹಿಸಲಾಗುತ್ತಿದೆ. ಕೂಡಲೇ ಜನಸಾಮಾನ್ಯರು, ಜನಪ್ರತಿನಿಧಿಗಳು ಹಾಗೂ ಸಂಬಂಧಿಸಿದ ತಜ್ಞರ ಸಭೆ ನಡೆಸಿ, ಜನತೆಗೆ ಹೊರೆಯಾಗದಂತೆ ಟೋಲ್ ಶುಲ್ಕ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಇದೀಗ ಕೆಎಸ್‌ಆರ್‌ಟಿಸಿ ವತಿಯಿಂದ ಬಸ್ ಪ್ರಯಾಣದ ದರವೂ ಏರಿಕೆಯಾಗಿದೆ. ಈ ದಶಪಥ ಹೆದ್ದಾರಿ ಹೆಸರಿನಲ್ಲಿ ಜನರನ್ನು ಲೂಟಿ ಮಾಡಲಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಚರ್ಚೆ ನಂತರ ನಿರ್ಧಾರ ಆಗಬೇಕು. ಆದರೆ ಹೆದ್ದಾರಿ ಟೋಲ್ ವಿಚಾರದಲ್ಲಿ ಚರ್ಚೆಯೇ ಆಗಿಲ್ಲ. ಹೆದ್ದಾರಿಗಾಗಿ 2,600 ಎಕರೆ ಫಲವತ್ತಾದ ಕೃಷಿ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಜನವಿರೋಧಿಯಾಗಿ ನಿಗದಿಪಡಿಸಿರುವ ಟೋಲ್ ಪರಿಷ್ಕರಿಸಲೇಬೇಕು ಎಂದು ಒತ್ತಾಯಿಸಿದರು.

**ರಸ್ತೆ ತಡೆ ಯತ್ನ:** ಪ್ರತಿಭಟನೆ ವೇಳೆ ಪ್ರತಿಭಟನಾಕಾರರು ರಸ್ತೆ ತಡೆ ನಡೆಸಲು ಯತ್ನಿಸಿದರು. ಆದರೆ ಸ್ಥಳದಲ್ಲಿದ್ದ ಪೊಲೀಸರು ಬ್ಯಾರಿಕೇಡ್‌ಗಳ ಮೂಲಕ ನಿರ್ಬಂಧಿಸಿ ರಸ್ತೆ ತಡೆ ಮಾಡದಂತೆ ತಡೆಯುವಲ್ಲಿ ಯಶಸ್ವಿಯಾದರು. ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಮಾಜಿ ಮೇಯರ್‌ಗಳಾದ ಪುರುಷೋತ್ತಮ್, ಬಿ.ಕೆ.ಪ್ರಕಾಶ್, ಪಾಲಿಕೆ ಮಾಜಿ ಸದಸ್ಯ ಆರ್.ಸೋಮಸುಂದರ್, ಪ್ರಶಾಂತ್ ಗೌಡ, ಆಮ್ ಆದ್ಮಿ ಪಾರ್ಟಿ ಮುಖಂಡರಾದ ಮಾಲವಿಕ ಗುಬ್ಬಿವಾಣಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಖಂಡರಾದ ನಂಜರಾಜ್ ಅರಸ್, ಅರವಿಂದ ಶರ್ಮ, ಶಿವಶಂಕರ್, ಮರಂಕಯ್ಯ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### ಸಂಸದರು, ಎನ್‌ಹೆಚ್ ಅಧಿಕಾರಿ ವಿರುದ್ಧ ವಿಶ್ವನಾಥ್ ವಾಗ್ದಾಳಿ

ಮೈಸೂರು,ಮಾ.17(ಪಿಎಂ)– ಸಂಸದ ಪ್ರತಾಪ್ ಸಿಂಹ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್ ವಿರುದ್ಧ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು. ಅವನ್ಯಾರೋ ಶ್ರೀಧರ್, ಅಧಿಕಾರಿಶಾಹಿ ದರ್ಬಾರ್ ಇದು. ಏ ಮೋದಿಯವರೇ ನಿಮ್ಮ ಸರ್ಕಾರದಲ್ಲಿ ಅಧಿಕಾರಿಶಾಹಿಗಳ ದರ್ಬಾರ್ ಏನ್ರಿ ಇದು. ಸರ್ವೀಸ್ ರಸ್ತೆ ಮಾಡಬೇಕೆಂದೇನೂ ಇಲ್ಲ ಎಂದು ಹೇಳಿದ್ದಾನೆ ಎಂದು ಅಧಿಕಾರಿ ಶ್ರೀಧರ್ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ಪ್ರಾಧಿಕಾರದ (ಎನ್‌ಹೆಚ್) ಪುಸ್ತಕ ತೆಗೆದು ನೋಡಪ್ಪ ಅಧಿಕಾರಿ. ಶೇ.75ರಷ್ಟು ಕಾಮಗಾರಿ ಪೂರ್ಣ ಆಗದಿದ್ದರೆ, ಸರ್ವೀಸ್ ರಸ್ತೆ ಮಾಡದಿದ್ದರೆ ಪ್ರಯಾಣಿಕರಿಗೆ ಮೂಲಭೂತ ಸೌಲಭ್ಯ ಕಲ್ಪಿಸದೇ ಇದ್ದರೆ ಹೆದ್ದಾರಿ ಉದ್ಘಾಟನೆ ಮಾಡುವಂತಿಲ್ಲ. ಡೆಲ್ಲಿ–ಯಮುನಾ ಎಕ್ಸ್‌ಪ್ರೆಸ್ ವೇ, ಡೆಲ್ಲಿ–ಆಗ್ರಾ ಎಕ್ಸ್‌ಪ್ರೆಸ್ ವೇ ಹೆದ್ದಾರಿಗಳಲ್ಲಿ ಪ್ರಯಾಣಿಕರಿಗೆ ಉತ್ತಮವಾಗಿ ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲಿ ಹೋಗಿ ನೋಡಿಕೊಂಡು ಬಾಪ್ಪಾ ಶ್ರೀಧರ್. ಇಲ್ಲಿ ಕೂತು ಮಾತನಾಡುವುದಲ್ಲ. ಏನ್ ಧಮ್ಕಿ ಹಾಕ್ತೀರೇನ್ರಿ ನೀವು ಅಧಿಕಾರಿಗಳು. ಅಧಿಕಾರಿಗಳಿಂದ ಈ ಸರ್ಕಾರ ನಡೆಯುತ್ತಿದೆಯೇ ಹೊರತು ಜನಪ್ರತಿನಿಧಿಗಳಿಂದ ಅಲ್ಲ. ಅದಕ್ಕೊಂದು ನಿದರ್ಶನ ಇದು ಎಂದು ಕಿಡಿಕಾರಿದರು.

## ಲಯನ್ಸ್ ಕ್ಲಬ್ ಮೈಸೂರು ಪ್ಯಾಲೇಸ್ ಸಿಟಿಯಿಂದ ಸಿಂಹ ದತ್ತು



ಮೈಸೂರು,ಮಾ.17– ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲೆ 317ಎ, ಲಯನ್ಸ್ ಕ್ಲಬ್ ಮೈಸೂರು ಪ್ಯಾಲೇಸ್ ಸಿಟಿ ವತಿಯಿಂದ ಜಯಚಾಮ ರಾಜೇಂದ್ರ ಮೃಗಾಲಯದಲ್ಲಿ ಸತತ ನಾಲ್ಕನೇ ಬಾರಿಗೆ ಸಿಂಹವನ್ನು ದತ್ತು ಸ್ವೀಕರಿಸಲಾಯಿತು.

ಜಿಲ್ಲೆ 317ಎ ಇದ'ರ ಜಿಲ್ಲಾ ರಾಜ್ಯಪಾಲ ಲಯನ್ ಡಾ.ಶ್ರೀವಿದ್ಯಾ ಸಮ್ಮುಖದಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಅವರಿಗೆ 1 ಲಕ್ಷ ರೂ. ದೇಣಿಗೆ ಚೆಕ್ ಅನ್ನು ಹಸ್ತಾಂತರಿಸಿ, ಒಂದು ವರ್ಷ ಅವಧಿಗೆ ಸಿಂಹವನ್ನು ದತ್ತು ಸ್ವೀಕರಿಸಲಾಯಿತು. ಈ ವೇಳೆ ಶಿವಕುಮಾರ್, ಹಲವಾರು ಸೇವಾ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವ ಲಯನ್ಸ್ ಸೇವಾ ಸಂಸ್ಥೆ, ಸತತ 4 ವರ್ಷದಿಂದ ಪ್ರಾಣಿ ದತ್ತು ಸ್ವೀಕರಿಸಿರುವುದು ಪ್ರಶಂಸನಾರ್ಹ ಎಂದು ಧನ್ಯವಾದ ತಿಳಿಸಿದರು.

ಈ ವೇಳೆ ಸಂಸ್ಥೆಯ ಅಧ್ಯಕ್ಷ ಲಯನ್ ಡಿ.ಪಿ.ಪ್ರಕಾಶ್, ಕಾರ್ಯದರ್ಶಿ ಪ್ರಭಾಕರ್, ಖಜಾಂಚಿ ನಟರಾಜ್, ಜಿಲ್ಲಾ ಖಜಾಂಚಿ ಗಂಗಾಧರಪ್ಪ, ಲಯನ್ ಜೈಕುಮಾರ್, ಲಯನ್ ನಾಗೇಶ್ ಮೂರ್ತಿ, ಸಂದೀಪ್, ಶಂಕರ್, ಜಿ.ಶಿವಕುಮಾರ್, ಕೆ.ಎಸ್.ಪ್ರಕಾಶ್, ವೈ.ಎಸ್.ಶಿವಕುಮಾರ್, ಪುಟ್ಟಸ್ವಾಮಿ ಗೌಡ, ಕವಿತಾ ಪ್ರಕಾಶ್, ವೃಷಭ ಪ್ರಕಾಶ್, ಸಿರಿ ಬಾಲು ಹಾಗೂ ಮೃಗಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.




ಗುರುವಾರ ತಮ್ಮ ಬಡಾವಣೆಯಲ್ಲಿ ನಡೆದ ಸರಗಳವು ಪ್ರಕರಣವನ್ನು ಕೇವಲ ಆರು ಗಂಟೆಯಲ್ಲಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದ ಮೈಸೂರಿನ ವಿವಿ ಪುರಂ ಪೊಲೀಸ್ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ನೇತೃತ್ವದ ಸಿಬ್ಬಂದಿಯನ್ನು ಯಾದವಗಿರಿ ನಿವಾಸಿಗಳ ಸಂಘದ ಸದಸ್ಯರು, ಸಂಘದ ಅಧ್ಯಕ್ಷ ಎಸ್.ಕೆ. ದಿನೇಶ್, ಬಡಾವಣೆಯ ಕಾರ್ಪೊರೇಟರ್ ರವೀಂದ್ರ ನೇತೃತ್ವದಲ್ಲಿ ಶುಕ್ರವಾರ ಅಭಿನಂದಿಸಿದರು.

## ನಾಳೆ 'ನಮ್ಮ ಪ್ರೈಡ್ ಮತ್ತು ಕ್ವೀರ್ ಹಬ್ಬ' ಆಚರಣೆ

ಮೈಸೂರು, ಮಾ.17(ಎಂಟಿವೈ)– ಮೈಸೂರಿನ ಸರ್ಕಾರಿ ಅತಿಥಿ ಗೃಹದ ಆವರಣದಿಂದ ಜಗನ್ಮೋಹನ ಅರಮನೆವರೆಗೆ ಮಾ.19ರಂದು ಮಧ್ಯಾಹ್ನ 2.30ಕ್ಕೆ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ಪ್ರತಿ ವರ್ಷ ಆಚರಿಸುವ 'ನಮ್ಮ ಪ್ರೈಡ್ ಮತ್ತು ಕ್ವೀರ್ ಹಬ್ಬದ ಮೆರವಣಿಗೆ ಆಯೋಜಿಸಲಾಗಿದೆ ಎಂದು 7 ರೈನ್ಬೋಸ್‌ನ ಪ್ರೀತಿ ಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರವು 2018ರ ನವತೇಜ್ ಸಿಂಗ್ ಜೋಹರ್ ಸರ್ವೋಚ್ಚ ನ್ಯಾಯಾಲಯದ ತೀರ್ಪು ಜಾರಿಗೊಳಿಸಿ, ಎಲ್ಲಾ ಸಾರ್ವಜನಿಕ ಸೇವೆಗಳಾದ ಪೊಲೀಸ್, ಆಸ್ಪತ್ರೆ ಸರ್ಕಾರಿ ಕಚೇರಿ, ಶಾಲಾ– ಕಾಲೇಜು, ಬ್ಯಾಂಕ್ ಮುಂತಾದ ಲಿಂಗ ಮತ್ತು ಲೈಂಗಿಕತೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಆರಂಭಿಸುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಈ ಹಬ್ಬ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಕಾಯ್ದೆ 2019ರ ನಿರ್ದೇಶನದಂತೆ ಉದ್ಯೋಗ ಮತ್ತು ತಾರತಮ್ಯ– ವಿರೋಧಿ ಕಾನೂನು ಶೂನ್ಯ– ಸಹಿಷ್ಣುತೆ ಮತ್ತು ದೃಢವಾದ ಪರಿಹಾರ ವ್ಯವಸ್ಥೆಯೊಂದಿಗೆ ಜಾರಿಗೊಳಿಸಬೇಕು, ಕಡ್ಡಾಯವಾಗಿ ಲೈಂಗಿಕ ಗುರುತಿನ ಶಿಕ್ಷಣ– ರಾಜ್ಯದ ಎಲ್ಲಾ ಹಂತಗಳಲ್ಲಿ ಅಳವಡಿಸಲು ಒತ್ತಾಯಿಸಿ ಈ ಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ಅವರು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಟಿ. ಶಿವರಾಮ್ ಹಾಗೂ ಇನ್ನಿತರು ಇದ್ದರು.

## ಮಕ್ಕಳ ಒಳ್ಳೆಯ ನಾಗರಿಕರನ್ನಾಗಿ ಮಾಡಿ




ಮೈಸೂರು, ಮಾ. 17, ಪೋಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಮೂಲಕ ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡಬೇಕೆಂದು ಎಂಎಲ್‌ಸಿ ಸಿ.ಎನ್. ಮಂಜೇಗೌಡ ಕರೆ ನೀಡಿದರು. ಮೈಸೂರಿನ ಶ್ರೀರಾಂಪುರದಲ್ಲಿರುವ ಸೆಂಟ್ ಮರಿಯಾದಿ ಮಥಾಯಸ್ ಕಿಡ್ಸ್ ವರ್ಡ್ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಮತ್ತು ಗ್ರಾಜ್ಯುಯೇಷನ್ ಡೇ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ವಿದ್ಯಾರ್ಥಿಗಳಿಗೂ ಸರ್ಕಾರವೇ ಶಿಕ್ಷಣ ನೀಡಲು ಸಾಧ್ಯವಿಲ್ಲ ಆದ್ದರಿಂದ ಕ್ರಿಶ್ಚಿಯನ್ ಶಿಕ್ಷಣ ಸಮಸ್ಯೆಗಳು, ಮಠ ಮಾನ್ಯಗಳು, ಸಂಘ ಸಂಸ್ಥೆಗಳ ಪಾತ್ರ ಶಿಕ್ಷಣ ನೀಡುವಲ್ಲಿ ಮಹತ್ವದ್ದಾಗಿದೆ. ಮಕ್ಕಳ ಬೆಳವಣಿಗೆಯಲ್ಲಿ, ಶಿಕ್ಷಣದಲ್ಲಿ ತಾಯಿಯ ಪಾತ್ರ ಅಪಾರವಾಗಿದೆ. ನನ್ನ ಈ ಬೆಳವಣಿಗೆಗೆ ನನ್ನ ತಾಯಿಯೇ ಕಾರಣವಾಗಿದ್ದಾರೆ. ಯಾರು ಚೆನ್ನಾಗಿ ಓದುತ್ತಾರೋ ಅವರು ನಾಯಕರಾಗಿ ಬೆಳೆಯುತ್ತಾರೆ ಆದ್ದರಿಂದ ವಿದ್ಯಾರ್ಥಿಗಳು ಗುರಿಯಿಟ್ಟುಕೊಂಡು ಬದ್ಧತೆಯಿಂದ ಚೆನ್ನಾಗಿ ಓದಿ ಉನ್ನತ ಹುದ್ದೆಗಳನ್ನು ಅಲಂಕರಿಸಿ. ನನ್ನ ಬಳಿಗೆ ವಿದ್ಯಾರ್ಥಿಗಳು ಶಾಲೆಗೆ ಸೀಟ್ ಕೊಡಿಸಿ ಎಂದು ಬರುತ್ತಾರೆ. ಮಕ್ಕಳು ಶಿಕ್ಷಣ ದಿಂದ ವಂಚಿತ ರಾಗಬಾರದೆಂದು ಸೀಟ್ ಕೊಡಿಸುತ್ತೇನೆ ಈ ಶಾಲೆಗೆ ಸೋಲಾರ್ ಹಾಕಿಸಿ ಕೊಡುವುದಾಗಿ ಭರವಸೆ ನೀಡಿದರು. ಫಾದರ್ ವಿನ್ಸೆಂಟ್, ಸಿಸ್ಟರ್ ಮಿನಿ, ಮೇರಿ, ಸಿಲಿನ್, ಜೀಜಿ, ದಿನೇಶ್ ಗೌಡ, ಮಂಜೇಗೌಡರ ಆಪ್ತ ಸಹಾಯಕ ಹೆಚ್.ಎ. ಸುರೇಂದ್ರ ಅನಿಲ್ ಉಪಸ್ಥಿತರಿದ್ದರು.

## ಕೆ.ಆರ್.ಕ್ಷೇತ್ರದ 9200 ಗರ್ಭಿಣಿಯರಿಗೆ 'ಮಡಿಲು

### ಕ್ಷೇತ್ರದ ಜನರ ಆರೋಗ್ಯಕ್ಕೆ ಆದ್ಯತೆ



ಮೈಸೂರು,ಮಾ.17(ಎಸ್‌ಬಿಡಿ)– ಸರ್ಕಾರದ ಸೌಲಭ್ಯ ಹಾಗೂ ಸವಲತ್ತುಗಳನ್ನು ಫಲಾನುಭವಿಗಳಿಗೆ ತಲುಪಿಸುವಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಮಾದರಿ ನಡೆ ಅನುಸರಿಸಿದ್ದು, 9,200 ಗರ್ಭಿಣಿಯರಿಗೆ 'ಮಡಿಲು ಯೋಜನೆ' ತಲುಪಿಸಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

'ಯೋಗಕ್ಷೇಮ ಯಾತ್ರೆ' ಪ್ರಯುಕ್ತ ಕ್ಷೇತ್ರದ 64ನೇ ವಾರ್ಡ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ವಿವೇಕಾನಂದನಗರದ ಗಣಪತಿ ದೇವಸ್ಥಾನ ಆವರಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಗರ್ಭಿಣಿ ತಾಯಂದಿರಿಗೆ ಸಹೋದರನಾಗಿ ಸೇವೆ ಮಾಡುವ ಸದವಕಾಶ ದೊರೆತಿದೆ. ಈವರೆಗೆ ಕ್ಷೇತ್ರದ 8,800 ಗರ್ಭಿಣಿಯರಿಗೆ ಮಡಿಲು ತುಂಬಲಾಗಿದೆ. ನಾಳೆ(ಮಾ.18) ಇನ್ನೂ 400 ಗರ್ಭಿಣಿ ತಾಯಂದಿರಿಗೆ ಮಡಿಲು ತುಂಬುವ ಕಾರ್ಯಕ್ರಮ ನಡೆಯಲಿದೆ. 6 ತಿಂಗಳಿಗೊಮ್ಮೆ ಈ ಕಾರ್ಯಕ್ರಮ ನಡೆಸಿಕೊಂಡು ಬರಲಾಗಿದೆ ಎಂದರು.

ಕೃಷ್ಣರಾಜ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಕಾರ್ಯಗಳನ್ನು ಜನ ಗಮನಿಸಿದ್ದಾರೆ. ಹಲವು ಮಾದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿಗಳೂ ಮೆಚ್ಚುಗೆ ಮಾತುಗಳನ್ನಾಡಿ, ಪ್ರೋತ್ಸಾಹಿಸಿದ್ದಾರೆ. ತುಳಸೀದಾಸ್ ದಾಸಪ್ಪ ಆಸ್ಪತ್ರೆ ಹಾಗೂ ಜಯನಗರ ಆಸ್ಪತ್ರೆಗಳು ಸುಸಜ್ಜಿತ ಖಾಸಗಿ ಆಸ್ಪತ್ರೆಗಳಂತೆ ನಿರ್ಮಾಣಗೊಂಡಿವೆ. ಉತ್ತಮ ಸೇವೆ ಹಾಗೂ ನಿರ್ವಹಣೆಗಾಗಿ ಜಯನಗರ ಆಸ್ಪತ್ರೆಗೆ ಕೇಂದ್ರ ಸರ್ಕಾರದಿಂದ 36 ಲಕ್ಷ ರೂ. ಬಹುಮಾನ ಬಂದಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಸಾರ್ವಜನಿಕ ಸೇವೆಯ ಜೊತೆಗೆ ಬೀದಿ ಶ್ವಾನ ಹಾಗೂ ವಾನರಗಳ ಬದುಕಿಗೂ ಆಶ್ರಯ ಕಲ್ಪಿಸುವ ಉದ್ದೇಶದಿಂದ ಪ್ರತ್ಯೇಕ ಸುಸಜ್ಜಿತ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದ್ದು, ಮಾ.25ರಂದು ಶ್ವಾನಗಳ ಕೇಂದ್ರ ಉದ್ಘಾಟನೆಯಾಗಲಿದೆ. ಇಡೀ ಕ್ಷೇತ್ರವನ್ನು ಬೋರ್‌ವೆಲ್ ಮುಕ್ತ ಮಾಡಲಾಗಿದೆ. 482 ಕಿ.ಮೀ. ರಸ್ತೆಗೆ ಡಾಂಬರೀಕರಣವಾಗಿದೆ. ರಾಜಕಾಲುವೆ, ಯುಜಿಡಿ, ಮಳೆ ನೀರಿನ ಚರಂಡಿ ವ್ಯವಸ್ಥೆ ಸೇರಿದಂತೆ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲಾಗಿದೆ. ಸಂಕಲ್ಪದಂತೆ ಕಳೆದ ಐದು ವರ್ಷಗಳಲ್ಲಿ ಗರಿಷ್ಠ ಪ್ರಮಾಣದ ಕಾರ್ಯಯೋಜನೆ ರೂಪಿಸಿ ಅನುಷ್ಠಾನಕ್ಕೆ ತರುವ ಮೂಲಕ ರಾಜ್ಯದಲ್ಲೇ ನಂಬರ್ ಒನ್ ಕ್ಷೇತ್ರ ಹೆಗ್ಗಳಿಕೆಗೆ ಕೃಷ್ಣರಾಜ ಕ್ಷೇತ್ರ ಪಾತ್ರವಾಗಿದೆ. ನಿಮ್ಮೆಲ್ಲರ ವಿಶ್ವಾಸ, ಪ್ರೀತಿ, ಸಹಕಾರವೇ ಇದಕ್ಕೆಲ್ಲಾ ಕಾರಣವಾಗಿದೆ ಎಂದರು.



ಇತ್ತೀಚೆಗೆ ನಿಧನರಾದ ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಅವರನ್ನು ಭೇಟಿಯಾಗಿ ಉದ್ಯಮಿ ಹಾಗೂ ಚಿತ್ರ ನಿರ್ಮಾಪಕ ಎನ್.ಸಂದೇಶ್ ಸಾಂತ್ವನ ಹೇಳಿದರು.

ಮೈಸೂರು ಮಿತ್ರ

ಶನಿವಾರ 18 ಮಾರ್ಚ್ 2023

# ಕೊಡವ ಕುಟುಂಬಗಳ ಹಾಕಿ ಉತ್ಸವಕ್ಕೆ ನಾಪೋಕ್ಲು ಸಜ್ಜು







ಶನಿವಾರ (ಮಾ.18)ದಿಂದ ಆರಂಭವಾಗಲಿರುವ ಕೊಡವ ಕುಟುಂಬಗಳ ಪ್ರತಿಷ್ಠಿತ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವ' (2023)ಕ್ಕೆ ನಾಪೋಕ್ಲು ಬೇತು ಗ್ರಾಮದ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಸಕಲ ಸಿದ್ಧತೆ ನಡೆದಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಲಿದ್ದಾರೆ. ಪ್ರೇಕ್ಷಕರು ಮತ್ತು ಗಣ್ಯರು ಕುಳಿತು ಉದ್ಘಾಟನಾ ಪಂದ್ಯ ವೀಕ್ಷಿಸಲು ಗ್ಯಾಲರಿ ನಿರ್ಮಿಸಲಾಗಿದೆ. ಎಲ್ಲೆಡೆ ಹಾಕಿ ಉತ್ಸವ ಮೇಳೈಸಿದ್ದು, ಪಟ್ಟಣದಲ್ಲಿ ಹಬ್ಬದ ವಾತಾವರಣ ಕಂಡುಬಂದಿದೆ.

23rd KODAVA HOCKEY CUP 2023 NAPOKLU APPACHETTOLANDA

ಹಾಕಿ ಉತ್ಸವದ ವಿವರಗಳಿಗಾಗಿ https://appachettolanda.com/

## ಡ್ರಾಪ್ ಕೊಡುವ ನೆಪದಲ್ಲಿ ಮಹಿಳೆ ಮೇಲೆ ಅತ್ಯಾಚಾರ: ಕಾಮುಕನ ಸೆರೆ

ಮಡಿಕೇರಿ, ಮಾ.17– ಮಹಿಳೆಯೊಬ್ಬರ ಮೇಲೆ ಅತ್ಯಾಚಾರವೆಸಗಿ ನಾಪತ್ತೆಯಾಗಿದ್ದ ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಕೊಡಗು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.



ಪೊನ್ನಂಪೇಟೆ ಆಟೋ ಚಾಲಕ ಮಣಿಕಂಠ ಬಂಧಿತ ಆರೋಪಿ.

ಪೊನ್ನಂಪೇಟೆಯ ಬಾರ್‌ವೊಂದರಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಮಹಿಳೆಯೋರ್ವರು ಮಾ.12 ರಂದು ಸಂಜೆ 5.30 ವೇಳೆಗೆ ಕೆಲಸ ಮುಗಿಸಿ ಮನೆಗೆ ತೆರಳಲು ವಾಹನಕ್ಕಾಗಿ ಕಾಯುತ್ತಿದ್ದರು. ಈ ವೇಳೆ ಅಪರಿಚಿತ ವ್ಯಕ್ತಿಯೋರ್ವ ಮಾರುತಿ ಓಮಿನಿ ಕಾರಿನಲ್ಲಿ ಬಂದು ನಾನು ಕುಂದ ಕಡೆ ಹೋಗುತ್ತಿದ್ದು, ಬನ್ನಿ ಎಂದು ಡ್ರಾಪ್ ಕೊಡುವ ನೆಪದಲ್ಲಿ ಮಹಿಳೆಯನ್ನು ಕಾರಿನಲ್ಲಿ ಕರೆದೊಯ್ದಿದ್ದಾನೆ. ಸ್ವಲ್ಪ ದೂರ ತೆರಳಿದ ನಂತರ ಕಾರು ನಿಲ್ಲಿಸಿದ ಆರೋಪಿ ಅತ್ಯಾಚಾರ ಎಸಗಿದ್ದಲ್ಲದೇ, ಯಾರಿಗಾದರೂ ತಿಳಿಸಿದಲ್ಲಿ ಕೊಲೆ ಮಾಡುವುದಾಗಿ ಬೆದರಿಸಿ, ಸಂತ್ರಸ್ತೆಯನ್ನು ರಸ್ತೆಯಲ್ಲಿ ಬಿಟ್ಟು ಪರಾರಿಯಾಗಿದ್ದ. ಈ ಕುರಿತು ಸಂತ್ರಸ್ತೆ ಮಹಿಳೆ ಮಾ.16 ರಂದು ಗೋಣಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ, ಆರೋಪಿ ಪೊನ್ನಂಪೇಟೆಯಲ್ಲಿ ಆಟೋ ಚಾಲಕನಾಗಿರುವ ಮಾಹಿತಿ ತಿಳಿದು ಮಣಿಕಂಠ ಎಂಬಾತನನ್ನು ಬಂಧಿಸಿದ್ದಾರೆ. ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ವಸಂತ.ಕೆ.ಎಂ, ಠಾಣಾಧಿಕಾರಿ ಸಿದ್ದರಾಜು ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

## ಬಿಜೆಪಿ ಬಗ್ಗೆ ಭ್ರಮನಿರಸನ: ಜಿಲ್ಲೆಯಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ

### ಸರ್ಕಾರ, ಸ್ಥಳೀಯ ಶಾಸಕರು, ಸಂಸದರ ವಿರುದ್ಧ ಸಂಕೇತ್‌ಪೂವಯ್ಯ ವಾಗ್ದಾಳಿ



ಮಡಿಕೇರಿ, ಮಾ.17– ಕೊಡಗಿನ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸದೆ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ನಡೆಸಿದ್ದು, ಈ ಸರ್ಕಾರದ ಬಗ್ಗೆ ಜನತೆ ಭ್ರಮನಿರಸನಗೊಂಡಿರುವುದರಿಂದ ಈ ಬಾರಿ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಗೆಲುವು ನಿಶ್ಚಿತ ಎಂದು ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯ್ತಿಯಿಂದ ಹಿಡಿದು ಕೇಂದ್ರದವರೆಗೆ ಬಿಜೆಪಿ ಅಧಿಕಾರದಲ್ಲಿರುವುದಲ್ಲದೆ, ಜಿಲ್ಲೆಯ ಎರಡು ಕ್ಷೇತ್ರಗಳಲ್ಲೂ ಬಿಜೆಪಿ ಶಾಸಕರಿದ್ದಾರೆ. ಹೀಗಿದ್ದೂ ಜಿಲ್ಲೆಯ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಇದರಿಂದ ಹತಾಶರಾಗಿರುವ ಜನತೆ ಈ ಬಾರಿಯ ಚುನಾವಣೆಯಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆಂದು ಅಭಿಪ್ರಾಯಿಸಿದರು. ಕೊಡಗಿನ ಪ್ರಮುಖ ಕೃಷಿಯಾಗಿರುವ ಕಾಫಿ ವಾಣಿಜ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ಈ ಕೃಷಿಗೆ ಸಂಬಂಧ ಪಟ್ಟಂತೆ ಸೂಕ್ತ ಆಮದು ನೀತಿಯನ್ನು ರೂಪಿಸುವುದು ಸೇರಿದಂತೆ ಯಾವುದೇ ಗಂಭೀರ ವಿಚಾರಗಳ ಬಗ್ಗೆ ಬಿಜೆಪಿ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸೋತಿದೆ ಎಂದು ಆರೋಪಿಸಿದರು. ಜಿಲ್ಲೆಯಲ್ಲಿ ದಿನೇ ದಿನೇ ಮಾನವ ಮತ್ತು ವನ್ಯ ಜೀವಿಗಳ ಸಂಘರ್ಷ ಹೆಚ್ಚುತ್ತಿದೆಯಾದರೂ ಇದಕ್ಕೆ ವೈಜ್ಞಾನಿಕವಾದ ಶಾಶ್ವತ ಪರಿಹಾರ ರೂಪಿಸುವಲ್ಲಿ ಬಿಜೆಪಿ ವಿಫಲವಾಗಿದೆ ಎಂದು ಹೇಳಿದರು. ವನ್ಯ ಜೀವಿಗಳ ಹಾವಳಿ ಸೇರಿದಂತೆ ಅರಣ್ಯಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳು ಜಿಲ್ಲೆಯಲ್ಲಿವೆ. ಆದರೆ, ಬಿಜೆಪಿ ಸರ್ಕಾರದಲ್ಲಿ ಅರಣ್ಯ ಸಚಿವರೇ ಇಲ್ಲ ವೆಂದು ವ್ಯಂಗ್ಯವಾಡಿದ ಸಂಕೇತ್ ಪೂವಯ್ಯ, ಹುಲಿ ದಾಳಿಯಿಂದ ಇತ್ತೀಚೆಗೆ ಇಬ್ಬರು ಬಲಿಯಾಗಿದ್ದಾರೆ. ಕನಿಷ್ಟ ಸಂತ್ರಸ್ತ ಕುಟುಂಬಗಳನ್ನು ಭೇಟಿ ಯಾಗುವ ಕಾಳಜಿಯನ್ನೂ ಜಿಲ್ಲೆಯ ಉಸ್ತುವಾರಿ ಸಚಿವರಾಗಲಿ, ಸಂಸದರಾಗಲಿ ತೋರಿಲ್ಲವೆಂದು ಟೀಕಿಸಿದರು. ವನ್ಯಜೀವಿಗಳ ಹಾವಳಿಗೆ ತುತ್ತಾಗಿ ಅಂಗವೈಕಲ್ಯತೆಯನ್ನು ಹೊಂದಿದವರಿಗೆ ಸೂಕ್ತ ಪರಿಹಾರವನ್ನು ಈ ಸರ್ಕಾರ ಒದಗಿಸಿಲ್ಲವೆಂದು ಟೀಕಾ ಪ್ರಹಾರ ಮಾಡಿದರು.

**ಸೋಲುವ ಕ್ಷೇತ್ರಕ್ಕೆ ಬರಲ್ಲ:** ಬಿಜೆಪಿಯಿಂದ ನಡೆದ ವಿಜಯ ಸಂಕಲ್ಪ ಯಾತ್ರೆಗೆ ಆ ಪಕ್ಷದ ಪ್ರಮುಖರಾದ ಬಿ.ಎಸ್. ಯಡಿಯೂರಪ್ಪ ಅವರು ಬಂದಿಲ್ಲ. ಸೋಲುವ ಕ್ಷೇತ್ರಕ್ಕೆ ಅವರು ಬರುವುದಿಲ್ಲವೆಂದು ವ್ಯಂಗ್ಯವಾಡಿದ ಸಂಕೇತ್ ಪೂವಯ್ಯ, ಸಂಸದರಾಗಲಿ, ಉಸ್ತುವಾರಿ ಸಚಿವರಾಗಲಿ ಇದರಲ್ಲಿ ಕಾಣಿಸಿಕೊಳ್ಳದಿರುವುದಕ್ಕೆ ಕಾರಣವೆಂದರೆ, ಇಲ್ಲಿನ ಸಮಸ್ಯೆ ನಿವಾರಣೆ ಬಗ್ಗೆ ಏನನ್ನೂ ಮಾಡದ ಅವರು, ಜನರ ಮುಂದೆ ಬರುವುದಾದರು ಹೇಗೆಂದು ಕುಟುಕಿದರು.

**ಚಕ್ರಗಳು ಪಂಚರ್ ಆಗಿದೆ:** ರಾಜ್ಯ ಸರ್ಕಾರವನ್ನು 'ಡಬಲ್ ಇಂಜಿನ್' ಸರ್ಕಾರವೆಂದು ಬಿಜೆಪಿ ಕರೆದುಕೊಳ್ಳುತ್ತಿದೆ. 'ಡಬಲ್' ಹೋಗಲಿ 'ಸಿಂಗಲ್ ಇಂಜಿನ್' ಸಹ ಈ ಸರ್ಕಾರಕ್ಕೆ ಇಲ್ಲ. ಮಾತ್ರವಲ್ಲದೇ ಇಂಜಿನ್‌ನಲ್ಲಿ ಡೀಸಲ್ಲೂ ಇಲ್ಲ, ಇದರ ನಾಲ್ಕು ಟಯರ್‌ಗಳು ಕೂಡ ಪಂಚರ್ ಆಗಿದೆಯೆಂದು ಲೇವಡಿ ಮಾಡಿದರು. ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುರಯ್ಯ ಅಬ್ರಾರ್ ಮಾತನಾಡಿ, ಬಿಜೆಪಿ ಸುಳ್ಳನ್ನೆ ನಿಜವೆಂದು ಕಾಂಗ್ರೆಸ್ ವಿರುದ್ಧ ಅಪಪ್ರಚಾರಗಳನ್ನು ಮಾಡುತ್ತಾ ಸಾಗುತ್ತಿದೆಯೆಂದು ಟೀಕಿಸಿದರು. ಕಾಂಗ್ರೆಸ್ ಅವಧಿಯಲ್ಲಿ ಜಿಲ್ಲೆಯ ಮಹಿಳೆಯರಿಗೆ ಪಕ್ಷ ಅಗತ್ಯ ಸ್ಥಾನಮಾನಗಳನ್ನು ನೀಡಿದೆ. ಆದರೆ ಈ ಬಿಜೆಪಿ ಸರ್ಕಾರದಲ್ಲಿ ಮಹಿಳೆಯರಿಗೆ ಯಾವುದೇ ಅವಕಾಶವನ್ನು ನೀಡಿಲ್ಲ. ಇದನ್ನು ಜಿಲ್ಲೆಯ ಮಹಿಳಾ ಮತದಾರರು ಅರಿತುಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ವಕ್ತಾರ ಟಾಟು ಮೊಣ್ಣಪ್ಪ ಮಾತನಾಡಿ, ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದ ಸಂದರ್ಭ ಪಕ್ಷದ ಪ್ರಣಾಳಿಕೆಯಲ್ಲಿದ್ದ ಆಶ್ವಾಸನೆಗಳನ್ನು ಈಡೇರಿಸಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೊಡಗಿಗೆ ಸಂಬಂಧಿಸಿದಂತೆ ಅವರು ಬಿಡುಗಡೆ ಮಾಡಿದ್ದ ಪ್ರಣಾಳಿಕೆಯಲ್ಲಿ ಏನನ್ನು ಪೂರೈಸಿದ್ದಾರೆಂದು ಪ್ರಶ್ನಿಸಿದರು. ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಜಯೇಂದ್ರ ಬಿ.ಇ. ಅವರು ಮಾತನಾಡಿ, ಗೋಣಿಕೊಪ್ಪಲಿನಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಅಂಬೇಡ್ಕರ್ ಭಾವಚಿತ್ರದ ಮೇಲೆ ಅನುಚಿತವಾಗಿ ಮುಖ್ಯಮಂತ್ರಿಗಳ ಬಿತ್ತಿ ಪತ್ರ ಅಂಟಿಸಿ ಅವಮಾನಿಸಲಾಗಿದೆ. ಈ ಬಗ್ಗೆ ಮಾ. 19ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಗುತ್ತದೆಂದು ತಿಳಿಸಿದರಲ್ಲದೆ, ದುಷ್ಕೃತ್ಯವೆಸಗಿದವರನ್ನು ಪತ್ತೆ ಹಚ್ಚಿ ಗಡಿಪಾರು ಮಾಡುವಂತೆ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೊಲ್ಯದ ಗಿರೀಶ್, ನಗರ ಕಾಂಗ್ರೆಸ್ ಅಧ್ಯಕ್ಷ ಬಿ.ವೈ. ರಾಜೇಶ್ ಉಪಸ್ಥಿತರಿದ್ದರು.

## ಮಾಜಿ ಸಚಿವ ಈಶ್ವರಪ್ಪ ವಿರುದ್ಧ ಮುಸ್ಲಿಂ ಸಂಘಟನೆಗಳ ಪ್ರತಿಭಟನೆ





ಕುಶಾಲನಗರ, ಮಾ.17– ಮಾಜಿ ಸಚಿವ ಈಶ್ವರಪ್ಪನವರು ಅಲ್ಲಾ ಹಾಗೂ ಅಝಾನ್ ನ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿ, ಮುಸ್ಲಿಂ ಸಮುದಾಯವನ್ನು ಅಪಮಾನಿಸಿದ್ದಾರೆ ಎಂದು ಆರೋಪಿಸಿ, ಕುಶಾಲನಗರದಲ್ಲಿ ತಾಲೂಕು ಮುಸ್ಲಿಂ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಶೇ.40ರಷ್ಟು ಕಮಿಷನ್ ದಂಧೆಯ ಮಾಸ್ಟರ್, ಸಮುದಾಯದ ನಡುವೆ ಒಡಕನ್ನು ತರುವ ಈಶ್ವರಪ್ಪ ಎಂಬ ಹೇಳಿಕೆಯ ಪೋಸ್ಟರ್‌ಗಳನ್ನು ಹಿಡಿದು, ಈಶ್ವರಪ್ಪನವರ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಈಶ್ವರಪ್ಪನವರನ್ನು ಬಂಧಿಸಿ ಕಾನೂನು ಕ್ರಮಕೈಗೊಳ್ಳಲು, ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಇದೇ ವೇಳೆ ತಾಲೂಕು ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಅಬ್ದುಲ್ ಕರೀಂ, ತಾಲೂಕು ಮುಸ್ಲಿಂ ಒಕ್ಕೂಟದ ಉಪಾಧ್ಯಕ್ಷ ಜಕ್ರಿಯಾ ಮಾತನಾಡಿದರು.

ಈಶ್ವರಪ್ಪನವರನ್ನು ಬಂಧಿಸುವಂತೆ ಆಗ್ರಹಿಸಿ, ಕುಶಾಲನಗರ ತಾಲೂಕು ತಹಸೀಲ್ದಾರ್ ಮೂಲಕ ಸರಕಾರಕ್ಕೆ ತಾಲೂಕು ಮುಸ್ಲಿಂ ಒಕ್ಕೂಟದ ವತಿಯಿಂದ ಮನವಿ ಪತ್ರವನ್ನು ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಕುಶಾಲನಗರ ತಾಲೂಕು ಮುಸ್ಲಿಂ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜವೀರ್, ಖಜಾಂಜಿ ಇರ್ಫಾನ್ ಹಾಗೂ ಸ್ಥಳೀಯ ಮುಸ್ಲಿಂ ಸಮುದಾಯದ ಮುಖಂಡರುಗಳು, ಎಲ್ಲಾ ಮಸೀದಿ ಕಮಿಟಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಇದ್ದರು.

## ಇಂದು ಕೊಡಗಿಗೆ ಸಿಎಂ ಬೊಮ್ಮಾಯಿ



ಮಡಿಕೇರಿ, ಮಾ.17– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾ.18 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಕೈಗೊಂಡಿದ್ದಾರೆ.

ಮಾ.18 ರಂದು ಮಧ್ಯಾಹ್ನ 12 ಗಂಟೆಗೆ ಕೆ.ಬಾಡಗ ಗ್ರಾಮದ ಗಾಲ್ ಮೈದಾನದ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ. ನಂತರ ಮಧ್ಯಾಹ್ನ 12.15 ಗಂಟೆಗೆ ನಗರದ ಗಾಂಧಿ ಮೈದಾನದಲ್ಲಿ ನಡೆಯುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮಾವೇಶ ಹಾಗೂ ಮಡಿಕೇರಿ ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಮಧ್ಯಾಹ್ನ 3.10 ಗಂಟೆಗೆ ನಾಪೋಕ್ಲು ಬೇತು ಗ್ರಾಮದ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ (ಚೆರಿಯಪರಂಬು) 23 ನೇ ವರ್ಷದ ಅಪ್ಪಚೆಟ್ಟೋಳಂಡ ಕುಟುಂಬಸ್ಥರ ಪ್ರಾಯೋಜಕತ್ವದಲ್ಲಿ ನಡೆಯುವ 2022–23 ನೇ ಸಾಲಿನ 'ಕೊಡವ ಹಾಕಿ ಉತ್ಸವ'ಕ್ಕೆ ಚಾಲನೆ ನೀಡಲಿದ್ದಾರೆ.

## ಇಂದು ಮಹದೇಶ್ವರ ಬೆಟ್ಟದಲ್ಲಿ ಮಲೆ ಮಹದೇಶ್ವರಸ್ವಾಮಿ ಪ್ರತಿಮೆ, ಬೆಳ್ಳಿರಥ, ವಿವಿಧ ಕಾಮಗಾರಿಗಳ ಉದ್ಘಾಟನೆ



ಚಾಮರಾಜನಗರ, ಮಾ.17– ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಶ್ರೀ ಮಲೆ ಮಹದೇಶ್ವರಸ್ವಾಮಿಯವರ 108 ಅಡಿ ಎತ್ತರದ ಪ್ರತಿಮೆ, ಬೆಳ್ಳಿರಥ ಮತ್ತು ವಿವಿಧ ಕಾಮಗಾರಿಗಳ ಉದ್ಘಾಟನಾ ಸಮಾರಂಭವನ್ನು ಮಾ.18ರಂದು ಬೆಳಗ್ಗೆ 10.30 ಗಂಟೆಗೆ ಮಹದೇಶ್ವರಬೆಟ್ಟದ ದೀಪದ ಗಿರಿ ಒಡ್ಡುವಿನಲ್ಲಿ ಆಯೋಜಿಸಲಾಗಿದೆ.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸುವರು. ಮಹದೇಶ್ವರಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಹಿರಿಯ ಶ್ರೀಗಳಾದ ಶ್ರೀ ಗುರುಸ್ವಾಮಿಗಳು, ಸಾಲೂರು ಬೃಹನ್ಮಠದ ಪೀಠಾಧಿಪತಿಗಳಾದ ಶಾಂತಮಲ್ಲಿಕಾರ್ಜುನಸ್ವಾಮಿಗಳು ದಿವ್ಯ ಸಮ್ಮುಖ ವಹಿಸುವರು.

ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಮಗಾರಿ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ವಿ. ಸೋಮಣ್ಣ ಉಪಸ್ಥಿತರಿರುವರು. ಕಂದಾಯ ಸಚಿವ ಆರ್. ಅಶೋಕ್, ಲೋಕೋಪ ಯೋಗಿ ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಸಚಿವ ಸಿ.ಸಿ. ಪಾಟೀಲ್, ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು ಹಾಗೂ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾದ ಶಶಿಕಲಾ ಅ ಜೊಲ್ಲೆ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು.

ಶಾಸಕ ಆರ್. ನರೇಂದ್ರ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎನ್. ಮಹೇಶ್, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್. ನಿರಂಜನ ಕುಮಾರ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು, ಮಹದೇಶ್ವರಬೆಟ್ಟ ಗ್ರಾಪಂ ಅಧ್ಯಕ್ಷ ಕುಮಾರ್ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ರಿಯಾಯಿತಿ ದರದಲ್ಲಿ ರೈತರಿಗೆ ಟ್ರಾಕ್ಟರ್ ವಿತರಿಸಿದ ರುದ್ರೇಶ್




“ವಿ.ಸೋಮಣ್ಣ ಸರ್ಕಾರದಲ್ಲಿ ಉಸ್ತುವಾರಿಯಾಗಿದ್ದಾರೆ. ನಾನು ಪಕ್ಷದ ಸಂಘಟನೆ ಮಾಡುವುದಕ್ಕೆ ಬಂದಿದ್ದೇನೆ. ಪಕ್ಷದ ಸೂಚನೆಯ ಮೇರೆಗೆ ಕೆಲಸ ಮಾಡುತ್ತಿದ್ದೇನೆ. ನಾನು ಎಲ್ಲಿಯೂ ಕೂಡ ಆಕಾಂಕ್ಷಿ ಅಥವಾ ಅಭ್ಯರ್ಥಿ ಎಂದು ಹೇಳಿಕೊಂಡಿಲ್ಲ. ಪಕ್ಷದ ಸಂಘಟನೆಯಷ್ಟೇ ನನ್ನ ಉದ್ದೇಶ. ಪಕ್ಷದ ತೀರ್ಮಾನಕ್ಕೆ ನಾನು ಸದಾ ಬದ್ಧ.

-ಎಂ. ರುದ್ರೇಶ್, ಅಧ್ಯಕ್ಷರು, ಕೆಆರ್‌ಐಡಿಎಲ್.

ಚಾಮರಾಜನಗರ, ಮಾ.17– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ 80ನೇ ವರ್ಷದ ಹುಟ್ಟುಹಬ್ಬ ಅಂಗವಾಗಿ ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಅವರ ವೈಯಕ್ತಿಕವಾಗಿ ಎರಡು ಲಕ್ಷ ರೂ. ಆರಂಭಿಕ ಶುಲ್ಕ ಮೊದಲ ಇಎಂಐ ಭರಿಸಿ, 14 ಮಂದಿ ರೈತರಿಗೆ ರಿಯಾಯಿತಿ ದರದಲ್ಲಿ ಟ್ರಾಕ್ಟರ್ ವಿತರಿಸಿದರು.

ನಗರದ ಪಚ್ಚಪ್ಪ ಲೇಔಟ್‌ನಲ್ಲಿರುವ ತಮ್ಮ ನಿವಾಸದ ಆವರಣದಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳ 14 ಮಂದಿ ರೈತರಿಗೆ ಟ್ರಾಕ್ಟರ್ ವಿತರಿಸಿ ಮಾತನಾಡಿ, ಫೆ.27ರಂದು ನಮ್ಮ ನಾಯಕ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ 80ನೇ ವರ್ಷದ ಹುಟ್ಟುಹಬ್ಬ ನೆನಪಿಗಾಗಿ ಯಾವುದೇ ಡೌನ್ ಪೇಮೆಂಟ್ ಇಲ್ಲದೆ 80 ಟ್ರಾಕ್ಟರ್‌ಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡಲು ತೀರ್ಮಾನ ಮಾಡಲಾಗಿದ್ದು, ಅದರಂತೆ ಈಗಾಗಲೇ 65 ಟ್ರಾಕ್ಟರ್ ವಿತರಿಸಲಾಗಿದೆ ಎಂದರು. ಮೈಸೂರು, ದಾವಣಗೆರೆ ಜಿಲ್ಲೆಯಲ್ಲಿ ತಲಾ 20 ಟ್ರಾಕ್ಟರ್ ವಿತರಿಸಲಾಗಿದೆ. ಈಗ ಚಾಮರಾಜನಗರದಲ್ಲಿ ಮೊದಲ ಪಟ್ಟಿಯಲ್ಲಿ 15 ಮಂದಿ ಸಾಲ ಮಂಜೂರಾಗಿದ್ದು, ಅವರಿಗೆ ಟ್ರಾಕ್ಟರ್ ವಿತರಿಸಲಾಗಿದೆ. ಇನ್ನೂ 20 ಮಂದಿಗೆ 15 ದಿನಗಳೊಳಗೆ ವಿತರಿಸಲಾಗುವುದು ಎಂದರು. ಇಡೀ ರಾಜ್ಯದಲ್ಲಿ 80 ರೈತರಿಗೆ ಟ್ರಾಕ್ಟರ್ ಕೊಡಬೇಕೆಂದು ಯೋಜನೆ ರೂಪಿಸಲಾಗಿತ್ತು. ಆದರೆ. ಯಡಿಯೂರಪ್ಪ ಅಭಿಮಾನಿಗಳು ಬಳ್ಳಾರಿ, ಹುಬ್ಬಳಿಯಲ್ಲೂ ಬೇಡಿಕೆ ಬರುತ್ತಿದೆ. ಹೀಗಾಗಿ ಈಗ 65 ಟ್ರಾಕ್ಟರ್ ವಿತರಿಸಲಾಗಿದೆ. ನನ್ನ ಅಂದಾಜು ಪ್ರಕಾರ ಇಡೀ ರಾಜ್ಯದಲ್ಲಿ 100 ಟ್ರಾಕ್ಟರ್ ವಿತರಿಸಲಾಗುವುದು ಎಂದರು.

**100 ಟ್ರಾಕ್ಟರ್ ಕೊಡಲು ಸಿದ್ಧ:** ಚಾಮರಾಜನಗರ ಕ್ಷೇತ್ರದಲ್ಲಿ 40 ಟ್ರಾಕ್ಟರ್‌ಗೆ ಆರ್ಥಿಕ ಅನುಮೋದನೆಯಾಗಿದೆ. ಈಗ ಮೊದಲ ಪಟ್ಟಿಯಲ್ಲಿ 14 ಮಂದಿಗೆ ಟ್ರಾಕ್ಟರ್ ವಿತರಿಸಲಾಗಿದ್ದು, ಇನ್ನೂ 25 ಟ್ರಾಕ್ಟರ್ ವಿತರಿಸಲಾಗುವುದು. ಇನ್ನೂ ಬೇಡಿಕೆ ಬರುತ್ತಿದೆ ಚಾಮರಾಜನಗರದಲ್ಲಿ 100 ಟ್ರಾಕ್ಟರ್ ಕೊಡಲು ಸಿದ್ಧವಿದ್ದೇವೆ ಎಂದರು.

ಟ್ರಾಕ್ಟರ್ ಕಂಪನಿಯವರು ರಿಯಾಯಿತಿ ಕೊಟ್ಟಿದ್ದಾರೆ, ಡೀಲರ್, ಮಾರಾಟಗಾರು ಮೂವರು ಸೇರಿ ಒಟ್ಟು ಎರಡು ಲಕ್ಷ ರೂ. ಕಡಿಮೆ ಮಾಡಿ ರಿಯಾಯಿತಿ ದರದಲ್ಲಿ ರೈತರಿಗೆ ಟ್ರಾಕ್ಟರ್ ವಿತರಿಸಲಾಗಿದೆ. ಇಲ್ಲಿ ಆಯ್ಕೆ ಏನು ಇಲ್ಲ ರೈತರ ಮನವಿ ಮೇರೆಗೆ ಟ್ರಾಕ್ಟರ್ ವಿತರಿಸಲಾಗಿದೆ ಎಂದರು. ಏಸ್ ಟ್ರಾಕ್ಟರ್ ಕಂಪನಿ ಜಿ.ಎಂ. ಅರವಿಂದ್ ಚತುರ್ವೇದಿ, ಉಡಿಗಾಲ ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಚಂದ್ರಶೇಖರ್, ಮೂಡ್ಲುಪುರ ನಂದೀಶ್ ಹಾಗೂ ರೈತರು ಹಾಜರಿದ್ದರು.

## ಯಳಂದೂರು ನೂತನ ತಹಶೀಲ್ದಾರ್ ಶ್ರೀಶೈಲ ಯ ತಳವಾರ

ಯಳಂದೂರು, ಮಾ.17– ತಾಲೂಕಿನ ನೂತನ ತಹಸೀಲ್ದಾರ್ ಆಗಿ ಶ್ರೀಶೈಲ ಯ ತಳವಾರ ಅಧಿಕಾರ ಸ್ವೀಕರಿದರು ಪ್ರಭಾರ ತಹ ಶೀಲ್ದಾರ್ ಶಿವ' ರಾ ಜ್ ಅಧಿಕಾರ ಹಸ್ತಾಂತರಿಸಿದರು.



ಅಧಿಕಾರ ವಹಿಸಿಕೊಂಡ ನಂತರ ನೂತನ ತಹಶೀಲ್ದಾರ್ ಶ್ರೀಶೈಲ ಯ ತಳವಾರ ಅವರು ಮಾತನಾಡಿ, ರಾಜ್ಯದಲ್ಲಿಯೇ ಯಳಂದೂರು ತುಂಬಾ ಚಿಕ್ಕ ತಾಲೂಕು ಆಗಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ನಾವು ಮತ್ತು ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತೇವೆ. ಯಾವುದೇ ಕೆಲಸವಾದರೂ ಮಧ್ಯವರ್ತಿಗಳನ್ನು ದೂರವಿಟ್ಟು ನೇರವಾಗಿ ಸಂಪರ್ಕಿಸಿ ಎಂದು ತಿಳಿಸಿದರು. ನಂತರ ಪ್ರಸ್ತುತ ಯಳಂದೂರಿನಲ್ಲಿ ಅಧಿಕಾರ ವಹಿಸಿಕೊಂಡಿದ್ದೇನೆ ತಾಲೂಕಿನ ಅಭಿವೃದ್ಧಿ ಮಾಡಲು ಸಾರ್ವಜನಿಕರು, ಸಂಘ–ಸಂಸ್ಥೆಗಳು, ಜನಪ್ರತಿನಿಧಿಗಳು ಹಾಗೂ ಮಾಧ್ಯಮದವರ ಸಹಕಾರ ಅಗತ್ಯ ಎಂದು ತಿಳಿಸಿದರು.

## ಗುಂಡ್ಲುಪೇಟೆ ಪುರಸಭೆಯಲ್ಲಿ 50.72 ಲಕ್ಷ ರೂ. ಉಳಿತಾಯ ಬಜೆಟ್ ಮಂಡನೆ



ಗುಂಡ್ಲುಪೇಟೆ, ಮಾ.17– ಇಲ್ಲಿನ ಪುರಸಭೆಯ ಪ್ರಸ್ತುತ ಸಾಲಿನ 50.72 ಲಕ್ಷ ರೂ. ಉಳಿತಾಯ ಬಜೆಟ್‌ನ್ನು ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಮಂಡಿಸಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ನಡೆದ 2023–24ನೇ ಸಾಲಿನ ಬಜೆಟ್ ಮಂಡಿಸಿದ ಅವರು, ಪಟ್ಟಣವನ್ನು ಮಾದರಿಯನ್ನಾಗಿಸಲು ಗುರಿ ಹೊಂದಲಾಗಿದೆ. ಈಗಾಗಲೇ ಹತ್ತು ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದರು.

ಪುರಸಭೆಯ ಅಯ–ವ್ಯಯದಲ್ಲಿ ಆರಂಭ ಶಿಲ್ಕು 1.12 ಕೋಟಿ ಇದ್ದು, ರಾಜಸ್ವ ಸ್ವೀಕೃತಿ 14.39 ಲಕ್ಷ, ರಾಜಸ್ವ ಪಾವತಿಗಳು 13.59 ಲಕ್ಷ ಮತ್ತು ಬಂಡವಾಳ ಸ್ವೀಕೃತಿಗಳು 18.82 ಲಕ್ಷ ಮತ್ತು ಬಂಡವಾಳ ಪಾವತಿಗಳು 20.03 ಲಕ್ಷ ಇದೆ. ಅಂತಿಮವಾಗಿ ಪುರಸಭೆಗೆ 2023–24ನೇ ಸಾಲಿಗೆ 50.72 ಲಕ್ಷ ರೂಪಾಯಿಗಳ ಉಳಿತಾಯವಾಗಲಿದೆ ಎಂದರು. ಈಗಾಗಲೇ ಪಟ್ಟಣದಲ್ಲಿ ಸೂರಿಲ್ಲದವರನ್ನು ಗುರ್ತಿಸಿ ಈಗಾಗಲೇ 670 ನಿವೇಶನ ಹಕ್ಕುಪತ್ರ ವಿತರಣೆ ಮಾಡಲಾಗಿದ್ದು, ಇನ್ನೂ 378 ಜನರಿಗೆ ವಿತರಣೆ ಹಂತದಲ್ಲಿದೆ. ವಸತಿ ಸಚಿವ ವಿ.ಸೋಮಣ್ಣ, ಶಾಸಕ ಸಿ.ಎಸ್. ನಿರಂಜನಕುಮಾರ್ ಸಹಕಾರದಲ್ಲಿ 3ನೇ ಹಂತದಲ್ಲಿ ಒಟ್ಟು 1446 ನಿವೇಶನ ನೀಡಲು ಉದ್ದೇಶಿಸಿದ್ದು ಇದಕ್ಕೆ 10 ಎಕರೆ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ. ಒಟ್ಟು 75 ಕೋಟಿ ವೆಚ್ಚದ ನಿವೇಶನಗಳನ್ನು ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ. ಇದೊಂದು ಪಟ್ಟಣದ ಇತಿಹಾಸ ಎಂದರು.

ಪಟ್ಟಣವನ್ನು ಮಾದರಿಯನ್ನಾಗಿಸಲು ಪ್ರವೇಶದಲ್ಲಿಯೇ 15 ಲಕ್ಷ ವೆಚ್ಚದಲ್ಲಿ ಶಿವಾನಂದ ವೃತ್ತವನ್ನು ನಿರ್ಮಿಸಲಾಗಿದೆ. ಕಿತ್ತೂರುರಾಣಿ ಚೆನ್ನಮ್ಮ ರಸ್ತೆ, ಬಸ್ ನಿಲ್ದಾಣದ ಎದುರು ರಸ್ತೆಯನ್ನು ರಾಜಪಥವನ್ನಾಗಿಸಲಾಗುತ್ತಿದೆ. ಉದಯರವಿ ಪಾರ್ಕ್‌ನಲ್ಲಿ ಓಪನ್ ಜಿಮ್ ಆರಂಭಿಸಲು ಉಪಕರಣಗಳನ್ನು ಅಳವಡಿಸಲಾಗಿದೆ. ಸುಡುವ ಸ್ಮಶಾನವನ್ನು ಹೂಳುವ ಸ್ಮಶಾಸನಕ್ಕೆ ಸ್ಥಳಾಂತರ, 10 ಲಕ್ಷ ವೆಚ್ಚದಲ್ಲಿ ರಸ್ತೆ ಗುಡಿಸುವ 5 ಯಂತ್ರಗಳ ಖರೀದಿ, ಪೌರ ಕಾರ್ಮಿಕರ ವಿಶ್ರಾಂತಿಗೃಹ ನಿರ್ಮಾಣ, ಹಳೇ ಬಸ್ ನಿಲ್ದಾಣ ಹೈಟೆಕ್ ಮಾಡುವುದು, ಅಪರಾಧ ಪತ್ತೆಗೆ ಸಿಸಿ ಕ್ಯಾಮೆರಾ ಅಳವಡಿಸಲು ಪೊಲೀಸ್ ಠಾಣೆಗೆ 10 ಲಕ್ಷ ಅನುದಾನ ನೀಡಲಾಗಿದೆ. ಬಯಲು ರಂಗಮಂದಿರ ಉನ್ನತೀಕರಣ, ಮಲ್ಲಯ್ಯನ ಪುರ ರಸ್ತೆಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ 12.5 ಎಕರೆ ಭೂಮಿ ಖರೀದಿಸಲಾಗಿದೆ. 5 ಕೋಟಿ ವೆಚ್ಚದಲ್ಲಿ ನೂತನ ಪುರಸಭೆ ಕಟ್ಟಡ ನಿರ್ಮಾಣಕ್ಕೆ 2 ಕೋಟಿ ಅನುದಾನ ಬಿಡುಗಡೆಯಾಗಿದ್ದು ಸದ್ಯದಲ್ಲಿಯೇ ಕಾಮಗಾರಿ ಆರಂಭಿಸಲಾಗುವುದು ಎಂದು ಹೇಳಿದರು. ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ವಸಂತಕುಮಾರಿ, ಉಪಾಧ್ಯಕ್ಷೆ ದೀಪಿಕಾ ಅಶ್ವಿನ್ ಮತ್ತು ಪುರಸಭೆ ಸದಸ್ಯರು ಮತ್ತು ಸಿಬ್ಬಂದಿವರ್ಗದವರು ಹಾಜರಿದ್ದರು.

## ದಿ.ಪುನೀತ್ ರಾಜ್‌ಕುಮಾರ್ ಜನ್ಮದಿನಾಚರಣೆ



ಚಾಮರಾಜನಗರ, ಮಾ.17– ನಗರದ ತ್ಯಾಗರಾಜ ವೃತ್ತದಲ್ಲಿರುವ ಶನೀಶ್ವರಸ್ವಾಮಿ ಭಕ್ತ ಮಂಡಳಿ ಮತ್ತು ಅಪ್ಪು ಅಭಿಮಾನಿಗಳ ವತಿಯಿಂದ ಚಿತ್ರನಟ ದಿ. ಪುನೀತ್ ರಾಜ್‌ಕುಮಾರ್ ಅವರ 49ನೇ ಜನ್ಮದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಿ ಜನರಿಗೆ ಅನ್ನ ಸಂತರ್ಪಣೆ ಮತ್ತು ಕೇಕ್ ವಿತರಿಸಲಾಯಿತು.

ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರವಿಟ್ಟು ಪುಷ್ಪಾರ್ಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಬರಹಗಾರ ಎಸ್. ಲಕ್ಷ್ಮೀನರಸಿಂಹ ಮಾತನಾಡಿ, ನಮ್ಮ ಜಿಲ್ಲೆಯ ಹೆಮ್ಮೆಯ ಕುಮಾರನಾಗಿದ್ದ ಪುನೀತ್ ಸಮಾಜ ತಿದ್ದುವ ಚಲನಚಿತ್ರಗಳಲ್ಲಿ ನಟಿಸಿದರಲ್ಲದೆ, ಸಮಾಜಮುಖಿ ಕೆಲಸಗಳನ್ನು ಮಾಡಿ ಅನೇಕ ಸೇವಾ ಕಾರ್ಯಗಳನ್ನು ಮಾಡಿ ಹಲವರ ಬಾಳಿಗೆ ಬೆಳಕಾಗಿದ್ದರು ಎಂದರು. ಜಿಲ್ಲೆಯ ಅರಣ್ಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅಪ್ಪು, ಗಂಧದಗುಡಿ ಚಿತ್ರದಲ್ಲಿ ನಮ್ಮ ಕಾಡು ಹಾಗೂ ಪರಿಸರದ ಬಗ್ಗೆ ತಿಳಿಸಿದ್ದಾರೆ. ಅವರು ಇನ್ನಷ್ಟು ಕಾಲ ಬದುಕಬೇಕಾಗಿತ್ತು ಎಂದರು. ಈ ಸಂದರ್ಭದಲ್ಲಿ ಮಂಟೇಸ್ವಾಮಿ, ಕೃಷ್ಣ ಶಶಿ, ಮಂಜು, ಗಿರಿ, ಕುಮಾರ್, ತರಕಾರಿ ರಾಜಪ್ಪ ಕಾವೇರಿ ಬೇಕರಿಯ ಸಿಬ್ಬಂದಿವರ್ಗ ಇದ್ದರು.

## ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾ.19ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಪಣ್ಯದಹುಂಡಿ ವ್ಯಾಪ್ತಿಯ ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಕೆಐಡಿಬಿ 10 ಮತ್ತು 11, ಮುತ್ತಿಗೆ, ಹೆಗ್ಗೊಠಾರ ಹಾಗೂ ಬದನಗುಪ್ಪೆ ವ್ಯಾಪ್ತಿಯ ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ ಮರಿಯಾಲ, ಬೇಡರಪುರ, ಕೆಲ್ಲಂಬಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



## 18 ಅಡಿ ಉದ್ದದ ಸರಳು ಬಾಯಿಗೆ ಚುಚ್ಚಿಕೊಂಡು ಭಕ್ತಿ

ಹನೂರು, ಮಾ.17– ರಾಜ್ಯದಲ್ಲಿ ಈಗ ಜಾತ್ರೆಗಳ ಸಮಯ. ಹಲವು ಭಕ್ತರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಯಾ ಗ್ರಾಮದ ದೇವತೆ ಗಳಲ್ಲಿ ಹರಕೆ ಹೊತ್ತಿರುತ್ತಾರೆ. ಅದನ್ನು ಜಾತ್ರೆಯ ವೇಳೆ ಭಕ್ತಿಯ ಪರಾಕಾಷ್ಠೆ ಮೆರೆಯುವ ಮೂಲಕ ತೀರಿಸುವ ವಾಡಿಕೆ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದೇ ರೀತಿ ಒಂದಲ್ಲ ಎರಡಲ್ಲ ಬರೋಬ್ಬರಿ 18–20 ಅಡಿ ಉದ್ದದ ಕಬ್ಬಿಣದ ಸರಳುಗಳ ಮೂಲಕ ಬಾಯಿಗೆ ಬೀಗ ಹಾಕಿಕೊಂಡು ಭಕ್ತಿ ಮೆರೆದಿರುವ ಘಟನೆ ಹನೂರಿನಲ್ಲಿ ನಡೆದಿದೆ.

ಬೆಟ್ಟಳ್ಳಿ ಮಾರಮ್ಮ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ 87 ಮಂದಿ ಬಾಯಿಗೆ ಉದ್ದುದ್ದ ಸರಳುಗಳನ್ನು ಚುಚ್ಚಿಕೊಂಡು ಕಿ.ಮೀಗಟ್ಟಲೇ ಮೆರವಣಿಗೆ ನಡೆಸಿ ಮಾರಮ್ಮನಿಗೆ ಭಕ್ತಿ ಸಮರ್ಪಿಸಿದ್ದಾರೆ.

# ಕನ್ನಡಿಗ ರಾಹುಲ್ ದಿಟ್ಟ ಆಟ: ಭಾರತಕ್ಕೆ ಗೆಲುವು



**ವಾಂಖೆಡೆ:** ಕನ್ನಡಿಗ ಕೆ.ಎಲ್. ರಾಹುಲ್ ಸಮಯೋಚಿತ ಅರ್ಧಶತಕದ (75*) ನೆರವಿನಿಂದ ಭಾರತ ತಂಡವು ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧ ಇಲ್ಲಿನ ವಾಂಖೆಡೆ ಮೈದಾನದಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಐದು ವಿಕೆಟ್ ಅಂತರದ ಗೆಲುವು ದಾಖಲಿಸಿದೆ. ಈ ಮೂಲಕ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದ ಮುನ್ನಡೆ ಕಾಯ್ದುಕೊಂಡಿದೆ. ಗೆಲುವಿಗಾಗಿ 189 ರನ್‌ಗಳ ಸುಲಭ ಗುರಿ ಬೆನ್ನಟ್ಟಿದ ಭಾರತ ಒಂದು ಹಂತದಲ್ಲಿ 19.2 ಓವರ್‌ಗಳಲ್ಲಿ 83 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ಮುರಿಯದ ಆರನೇ ವಿಕೆಟ್‌ಗೆ ರವೀಂದ್ರ ಜಡೇಜ(45*) ಅವರೊಂದಿಗೆ ಶತಕದ (108*) ಜೊತೆಯಾಟ ಕಟ್ಟಿದ ರಾಹುಲ್ ತಂಡವನ್ನು ಗೆಲುವಿನ ದಡ ಸೇರಿಸಿದರು. ಮಿಚೆಲ್ ಸ್ಟಾರ್ಕ್ (49ಕ್ಕೆ 3 ವಿಕೆಟ್) ಹಾಗೂ ಮಾರ್ಕಸ್ ಸ್ಟೋಯಿನಿಸ್ (27ಕ್ಕೆ 2 ವಿಕೆಟ್) ಭಾರತವನ್ನು ಮಾರಕವಾಗಿ ಕಾಡಿದರು. ಇಶಾನ್ ಕಿಶನ್ (3), ವಿರಾಟ್ ಕೊಹ್ಲಿ (4), ಸೂರ್ಯ ಕುಮಾರ್ ಯಾದವ್ (0), ಶುಭಮನ್ ಗಿಲ್ (20) ಹಾಗೂ ನಾಯಕ ಹಾರ್ದಿಕ್ ಪಾಂಡ್ಯ (25) ನಿರಾಸೆ ಮೂಡಿಸಿದರು.

ಇನ್ನೊಂದೆಡೆ ದಿಟ್ಟ ಹೋರಾಟ ನೀಡಿದ ರಾಹುಲ್ ತಂಡಕ್ಕೆ ಆಸರೆಯಾದರು. 91 ಎಸೆತಗಳನ್ನು ಎದುರಿಸಿದ ರಾಹುಲ್ ಏಳು ಬೌಂಡರಿ ಹಾಗೂ ಒಂದು ಸಿಕ್ಸರ್ ನೆರವಿನಿಂದ 75 ರನ್ ಗಳಿಸಿ ಔಟಾಗದೆ ಉಳಿದರು.

ಈ ಮೂಲಕ ಟೆಸ್ಟ್ ಸರಣಿಯಲ್ಲಿನ ಕಳಪೆ ಫಾರ್ಮ್‌ಗೆ ತಮ್ಮ ಬ್ಯಾಟ್ ಮೂಲಕವೇ ಉತ್ತರಿಸಿದರು. ರಾಹುಲ್‌ಗೆ ತಕ್ಕ ಸಾಥ್ ನೀಡಿದ ಜಡೇಜ 45 ರನ್ ಗಳಿಸಿ (69 ಎಸೆತ, 5 ಬೌಂಡರಿ)ಔಟಾಗದೆ ಉಳಿದರು. ಪರಿಣಾಮ ಭಾರತ 39.5 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

**ಶಮಿ–ಸಿರಾಜ್ ದಾಳಿಗೆ ತತ್ತರಿಸಿದ ಆಸ್ಟ್ರೇಲಿಯಾ 188ಕ್ಕೆ ಆಲೌಟ್:** ಈ ಮೊದಲು ಮೊಹಮ್ಮದ್ ಶಮಿ (17ಕ್ಕೆ 3) ಹಾಗೂ ಮೊಹಮ್ಮದ್ ಸಿರಾಜ್ (29ಕ್ಕೆ 3) ಸೇರಿದಂತೆ ಭಾರತೀಯ ಬೌಲರ್‌ಗಳ ಸಾಂಘಿಕ ದಾಳಿಗೆ ತತ್ತರಿಸಿದ ಆಸ್ಟ್ರೇಲಿಯಾ 35.4 ಓವರ್‌ಗಳಲ್ಲಿ 188 ರನ್‌ಗಳಿಗೆ ಆಲೌಟ್ ಆಯಿತು. ಇದೇ ಮೊದಲ ಬಾರಿಗೆ ಏಕದಿನದಲ್ಲೂ ನಾಯಕತ್ವ ವಹಿಸಿರುವ ಹಾರ್ದಿಕ್ ಪಾಂಡ್ಯ, ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ದು ಕೊಂಡರು. ಆರಂಭದಲ್ಲೇ ಅಪಾಯಕಾರಿ ಟ್ರಾವಿಸ್ ಹೆಡ್ (5) ಕ್ಲೀನ್ ಬೌಲ್ಡ್ ಮಾಡಿದ ಮೊಹಮ್ಮದ್ ಸಿರಾಜ್ ಗಮನ ಸೆಳೆದರು.

ದ್ವಿತೀಯ ವಿಕೆಟ್‌ಗೆ ಮಿಚೆಲ್ ಮಾರ್ಷ್ ಹಾಗೂ ನಾಯಕ ಸ್ಟೀವ್ ಸ್ಮಿತ್ 72 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾದರು. ಈ ಜೋಡಿಯನ್ನು ಹಾರ್ದಿಕ್ ಪಾಂಡ್ಯ ಬೇರ್ಪಡಿಸಿದರು. ಪರಿಣಾಮ 22 ರನ್ ಗಳಿಸಿದ ಆಸ್ಟ್ರೇಲಿಯಾ ಕಪ್ತಾನ ಸ್ಮಿತ್ ವಿಕೆಟ್ ನಾಯಕ ಹಾರ್ದಿಕ್ ಪಾಲಾಯಿತು.

# ಕುಲಶಾಸ್ತ್ರ ಅಧ್ಯಯನದಲ್ಲಿ ಕೊಡವರ ವಂಚಿಸುವ ಯತ್ನ

■ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೊಡವ ನ್ಯಾಷನಲ್ ಕೌನ್ಸಿಲ್ ಪತ್ರ ■ ಕೊಡವೇತರರ ಅಧ್ಯಯನದ ಮೂಲಕ ಕೊಡವರ ಮೂಲ ಬೇಡಿಕೆ ಕಡೆಗಣಿಸಿ ಹುನ್ನಾರ ■ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪ: 'ಕೊಡಗರು' ಪದ ಮಾರ್ಪಾಡಿಗೆ ಆಗ್ರಹ



ಮೈಸೂರು, ಮಾ.17(ಎಂಟಿವೈ)– ಕೊಡವರಿಗೆ ಯಾವುದೇ ಉಪ ಜಾತಿಯಿಲ್ಲ. ಕುಲಶಾಸ್ತ್ರ ಅಧ್ಯಯನದ ಹೆಸರಲ್ಲಿ ಕೊಡವರ ವಂಚಿಸುವಂತಹ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆಯಲಾಗಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ (ಸಿಎನ್‌ಸಿ) ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗಿನಲ್ಲಿ ಕೊಡವರ ಬೇಡಿಕೆ ಈಡೇರಿಸುವಂತೆ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಕೊಡವರನ್ನು ಬುಡಕಟ್ಟು ಪಟ್ಟಿಗೆ ಸೇರಿಸಲು ಮನವಿ ಮಾಡಲಾಗಿದೆ. ಸಿಎನ್‌ಸಿ ಮನವಿ ಮೇರೆಗೆ ಹೈಕೋರ್ಟ್ ಕೊಡವರ ಕುಲಶಾಸ್ತ್ರ ಅಧ್ಯಯನಕ್ಕೆ ಆದೇಶಿಸಿತ್ತು. ಶಾಸ್ತ್ರೀಯ ಪದದ ಕಾಗುಣಿತದ ದೋಷದಿಂದಾಗಿ 'ಕೊಡಗರು' ಎಂದಾಗಿದೆ ಅದನ್ನು ಕೊಡವರು ಎಂದು ಸರಿಪಡಿಸುವಂತೆ ಮನವಿ ಸಲ್ಲಿಸಲಾಗಿದೆ. ಕೂಡಲೇ ಸರಿ ಮಾಡಿಕೊಡವರು ಎಂದು ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಕೊಡಗಿನಲ್ಲಿರುವ ಕೊಡವರಿಗೆ ಬೇರೆ ಯಾವುದೇ ಉಪಜಾತಿಯಿಲ್ಲ. ಆದರೆ, ಕೊಡಗಿನ ಓರ್ವ ಶಾಸಕ ಹಾಗೂ ಹಂಪಿ ವಿವಿಯ ಹಂಗಾಮಿ ಕುಲಪತಿಯೊಬ್ಬರು ಕೊಡವೇತರರಾಗಿದ್ದು, ಮೂಲ ಕೊಡವರನ್ನು ಕಡೆಗಣಿಸಿ, ಕುಲಶಾಸ್ತ್ರ ಅಧ್ಯಯನದಲ್ಲಿ ಅರೆಭಾಷೆಗರೂ ಸೇರಿದಂತೆ ಇನ್ನಿತರರನ್ನು ಕೊಡವರೆಂದು ಪ್ರತಿಪಾದಿಸಲು ಮುಂದಾಗಿದ್ದಾರೆ. ಅದಕ್ಕೆ ಪೂರಕವಾಗಿ ಫೆ.19ರಂದು ವಿರಾಜಪೇಟೆಯ ಬಿಟ್ಟಂಗಾಲದಲ್ಲಿ ಸಮಾವೇಶವನ್ನು ಆಯೋಜಿಸಿ ಸಮಾಜ ಕಲ್ಯಾಣ ಸಚಿವರನ್ನು ಆಹ್ವಾನಿಸಿ ತಪ್ಪು ಮಾಹಿತಿ ನೀಡಿದ್ದಾರೆ. ಈ ಸಂಚಿನ ಹಿಂದೆ ಮೂಲ ಕೊಡವರಿಗೆ ಅನ್ಯಾಯ ಮಾಡುವ ಉದ್ದೇಶ ವಿದೆ. ಕೊಡಗು ಜಿಲ್ಲೆಯಲ್ಲಿರುವ ಜನರನ್ನು ಅವರ ಸಮುದಾಯಕ್ಕೆ ಅನುಗುಣವಾಗಿ ಪ್ರತ್ಯೇಕ ಅಧ್ಯಯನ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಕೊಡವರ ವಿಚಾರ ಬಂದಾಗ ಅನ್ಯ ಸಮುದಾಯವನ್ನು ಕೊಡವರು ಎಂದು ಪ್ರತಿಪಾದಿಸಲು ಬಿಡುವುದಿಲ್ಲ. ಶಾಸಕರ ಸಂಚಿನಿಂದಾಗಿ ಇಂದು ಕೊಡವರಿಗೆ ಈ ದುಸ್ಥಿತಿ ಬಂದಿದೆ ಎಂದು ಆರೋಪಿಸಿದರು. ಕೊಡವರು ಕೊಡಗಿಗೆ ಸೀಮಿತವಾದ ಆದಿಮ ಸಂಜಾತ ಬುಡಕಟ್ಟು ಸಮುದಾಯವಾಗಿದೆ. ಕೊಡಗನ್ನು ಹೊರತುಪಡಿಸಿದರೆ, ಹೊರ ಜಿಲ್ಲೆಗಳಲ್ಲಿ ಕೊಡಗಿನವರಿಗೆ ತಾಯಿ ಬೇರು ಇಲ್ಲ. ನಮಗೆ ಚಾತುರ್ವರ್ಣ ಜಾತಿ ಪದ್ಧತಿಯಿಲ್ಲ. ಉಪಜಾತಿಯೂ ಇಲ್ಲ. ಗೋತ್ರಗಳೂ ನಮಗೆ ಅನ್ವಯವಾಗುವುದಿಲ್ಲ. 1881ರಿಂದ 1931ರವರೆಗೆ ನಡೆದ ಜನಗಣತಿಯಲ್ಲಿ ಕೊಡವರನ್ನು ಪ್ರತ್ಯೇಕ ಜನಾಂಗವೆಂದು(ರೇಸ್) ಗುರುತಿಸಲ್ಪಡಲಾಗಿದೆ ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೊಡಗು ಜಿಲ್ಲೆಯ ಅರೆಭಾಷೆ ಗೌಡ ಸಮುದಾಯಕ್ಕೆ ಸೇರಿದ ಶಾಸಕರ ಮಾತನ್ನು ಕೇಳಬಾರದು. 2022ರ ಆಗಸ್ಟ್‌ನಲ್ಲಿ ಮುಖ್ಯಮಂತ್ರಿಗಳ ಕಚೇರಿಗೆ ಸಲ್ಲಿಕೆಯಾಗಿರುವ 'ಕೊಡವರ ಕುಲ ಶಾಸ್ತ್ರ' ಅಧ್ಯಯನಕ್ಕೆ ಮರು ಚಾಲನೆ ನೀಡಬೇಕು ಎಂದು ಒತ್ತಾಯಿಸಿದರು.

**ಓಟ್ ಬ್ಯಾಂಕ್ ರಾಜಕಾರಣ:** ಸಂಸದ ಪ್ರತಾಪ ಸಿಂಹ ಸೇರಿದಂತೆ ಎಲ್ಲಾ ರಾಜಕಾರಣಿಗಳು ಓಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ. ಚುನಾವಣೆ ವೇಳೆ ಕೊಡವರನ್ನು ಕೊಂಡಾಡಿ ಅಟ್ಟಕ್ಕೇರಿಸಿ, ಬೆಂಬಲಗಿಟ್ಟಿಸಿಕೊಳ್ಳುತ್ತಿದ್ದಾರೆ. ಆದರೆ, ನಿಜವಾಗಿಯೂ ಕೊಡವರ ಹಿತ ಕಾಯುತ್ತಿಲ್ಲ. ಸಂಸದ ಪ್ರತಾಪ ಸಿಂಹ ತಳವಾರ, ಪರಿವಾರ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ತೋರಿಸಿದ ಆಸಕ್ತಿಯನ್ನು ಕೊಡವರ ಮೇಲೆ ತೋರಿಸುತ್ತಿಲ್ಲ. ಬಾಯಿ ಮಾತಿಗಷ್ಟೇ ಕೊಡವರ ಬಗ್ಗೆ ಅನುಕಂಪದ ಮಾತಾಡುತ್ತಿದ್ದಾರೆ. ಸಭೆಯೊಂದರಲ್ಲಿ ಕೊಡವರು ಬುಡಕಟ್ಟು ಸಮುದಾಯಕ್ಕೆ ಸೇರಿದವರಲ್ಲ ಎಂದು ಹೇಳಿದ್ದಾರೆ. ಅವರೇನು ಕುಲಶಾಸ್ತ್ರ ಅಧ್ಯಯನ ಮಾಡಿದ್ದಾರೆಯೇ? ಕೊಡವರ ಬುಡಕಟ್ಟು ಸಮುದಾಯವಲ್ಲ ಎಂದು ಹೇಳಲು ಅವರು ಯಾರು? ಎಂದು ಪ್ರಶ್ನಿಸಿದ ಅವರು, ಪ್ರತಾಪ ಸಿಂಹ ಅವರನ್ನು ಎರಡು ಬಾರಿ ಗೆಲ್ಲಿಸಿದ್ದಕ್ಕೆ ಅವರು ಕೊಡಗು ಜಿಲ್ಲೆಗೆ ಕೊಟ್ಟ ಕೊಡುಗೆ ಶೂನ್ಯ ಎಂದು ಕಿಡಿಕಾರಿದರು.

**ನಾಲ್ಕು ಪಥದ ರಸ್ತೆ ಅನಾವಶ್ಯಕ:** ಮೈಸೂರು–ಕೊಡಗು ನಡುವೆ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ನಾಲ್ಕು ಪಥದ ರಸ್ತೆ ಅನಾವಶ್ಯಕ. ಕೊಡಗಿನ ಭೌಗೋಳಿಕ ಲಕ್ಷಣ ಹಾಳು ಮಾಡುವುದಕ್ಕೆ ಈ ರಸ್ತೆ ಕಾರಣವಾಗಲಿದೆ. ಈಗ ಇರುವ ರಸ್ತೆಗಳೇ ಸಾಕಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೊಡವ ನ್ಯಾಷನಲ್ ಕೌನಿಲ್ ಸದಸ್ಯರಾದ ಬೀಪಡಿಯಂಡ ಬಿದ್ದಪ್ಪ ಕಲಿಯಂಡ ಪ್ರಕಾಶ್, ಚಂಬಂಡ ಜನತ್ ಕುಮಾರ್, ಅಪ್ಪಾರಂಡ ಪೂವಣ್ಣ, ಅರೆಯಡ ಗಿರೀಶ್ ಇದ್ದರು.

# ರೈತ ಕುಟುಂಬಗಳ ಇನ್ಸೂರೆನ್ಸ್‌ಗೆ 180 ಕೋಟಿ ಮೀಸಲು



ದಾವಣಗೆರೆ, ಮಾ.17– ಪ್ರತಿ ರೈತ ಕುಟುಂಬಕ್ಕೆ ಇನ್ಸೂರೆನ್ಸ್ ಮಾಡಿಸಲು ನಮ್ಮ ಸರ್ಕಾರ 180 ಕೋಟಿ ರೂ. ಹಣ ಕಾಯ್ದಿರಿಸಿದೆ. ಸಹಜ ಮರಣ ಹೊಂದಿದರೂ, 2 ಲಕ್ಷ ರೂ. ಇನ್ಸೂರೆನ್ಸ್ ಹಣ ಸಿಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಹೊನ್ನಾಳಿ ನಗರದಲ್ಲಿ ಶುಕ್ರವಾರ ಹೊನ್ನಾಳಿ–ನ್ಯಾಮತಿ ಅವಳಿ ತಾಲೂಕುಗಳಲ್ಲಿ ಕೈಗೊಂಡಿರುವ 1933 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಸೌಲಭ್ಯ ವಿತರಿಸಿ ಮಾತನಾಡಿದ ಅವರು, ಎಲ್ಲ ರಂಗಗಳಲ್ಲಿ ಅಭಿವೃದ್ಧಿಯಾಗಬೇಕು ಎಂಬ ಉದ್ದೇಶದಿಂದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್, ರೈತ ವಿದ್ಯಾನಿಧಿ, ರೈತ ಶಕ್ತಿ ಯೋಜನೆ ಡಿಸೈಲ್ ಸಬ್ಸಿಡಿ ಯೋಜನೆ ಜಾರಿಗೆ ತರಲಾಗಿದೆ. ಯಶಸ್ವಿನಿ ಯೋಜನೆಯನ್ನು ಪುನಃ ಆರಂಭಿಸಲಾಗಿದೆ ಎಂದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ನನ್ನ ಹಾಗೂ ಬೊಮ್ಮಾಯಿ ಅವರ ಅವಧಿಯಲ್ಲಿ ಎಂ.ಪಿ. ರೇಣುಕಾಚಾರ್ಯ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯಾಗಿದ್ದು, ಸಾವಿರಾರು ಕೋಟಿ ತಂದು ಅಭಿವೃದ್ಧಿ ಮಾಡಿದ್ದಾರೆ. ಈ ಕ್ಷೇತ್ರದ ಜನತೆ ರೇಣುಕಾಚಾರ್ಯರನ್ನು 25 ಸಾವಿರ ಮತಗಳ ಅಂತರದಲ್ಲಿ ಗೆಲ್ಲಿಸಬೇಕು ಎಂದು ಹೇಳಿದರು. ಇದೇ ವೇಳೆ ರೇಣುಕಾಚಾರ್ಯ ಮಾತನಾಡಿದರು.

# ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಮತ್ತೊಂದು ಅಪಘಾತ

ರಾಮನಗರ, ಮಾ. 17– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ದಿನಂಪ್ರತಿ



ಅಪಘಾತಗಳು ಸಂಭವಿಸುತ್ತಿದ್ದು, ಶುಕ್ರವಾರವೂ ಕೂಡ ಟಿಪ್ಪರ್ ಮತ್ತು ಕಾರು ಡಿಕ್ಕಿ ಹೊಡೆದಿದ್ದು, ಅದೃಷ್ಟವಶಾತ್ ಯಾವುದೇ ರೀತಿಯ ಪ್ರಾಣಾಪಾಯವಾಗಿಲ್ಲ. ರಾಮನಗರ ಬೈಪಾಸ್‌ನ ಸಂಘ ಬಸವನದೊಡ್ಡಿ ಮೇಲ್ಸೇತುವೆಯಲ್ಲಿ ಚಲಿಸುತ್ತಿದ್ದ ಕಾರಿಗೆ ಟಿಪ್ಪರ್ ಡಿಕ್ಕಿ ಹೊಡೆದು ಸೇತುವೆಯ ಗೋಡೆಗೆ ಒರಗಿ ನಿಂತಿದೆ. ಕಾರಿನಲ್ಲಿ ದ್ದವರು ಪ್ರಾಣಾಪಾಯವಿಲ್ಲದೆ ಪಾರಾಗಿದ್ದಾರೆ. ಒಂದು ವೇಳೆ ಟಿಪ್ಪರ್ ಸೇತುವೆಯ ಗೋಡೆಗೆ ಒರಗಿ ನಿಲ್ಲದೆ ಕೆಳಗೆ ಬಿದ್ದಿದ್ದರೆ, ಸೇತುವೆ ಕೆಳಭಾಗದ ರಸ್ತೆಯಲ್ಲಿ ಚಲಿಸುತ್ತಿದ್ದ ವಾಹನಗಳ ಮೇಲೆ ಬಿದ್ದು ದೊಡ್ಡ ಅನಾಹುತವಾಗುತ್ತಿತ್ತು.

ಒಂದನೇ ಪುಟದಿಂದ

## 140 ಅಭ್ಯರ್ಥಿಗಳ ಪಟ್ಟಿ ಪ್ರಕಟ

ವರುಣಾ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಾರೆ ಎಂಬ ಮಾತು ಕೇಳಿ ಬಂದಿದೆ. ಉಳಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್, ಕಾರ್ಯಾಧ್ಯಕ್ಷರುಗಳಾದ ರಾಮಲಿಂಗಾ ರೆಡ್ಡಿ, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ಹಿರಿಯರಾದ ಆರ್.ವಿ. ದೇಶಪಾಂಡೆ, ಕೆ.ಜೆ. ಜಾರ್ಜ್, ಎಂ.ಕೃಷ್ಣಪ್ಪ, ರಮೇಶ್‌ಕುಮಾರ್, ಹೆಚ್.ಕೆ. ಪಾಟೀಲ್, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ಸೇರಿದಂತೆ ಹಲವು ಪ್ರಮುಖರು ಮೊದಲ ಪಟ್ಟಿಯಲ್ಲೇ ಅವಕಾಶ ಗಳಿಸಿದ್ದಾರೆ. 75 ರಿಂದ 84 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಪಕ್ಷಕ್ಕೆ ಕಠಿಣವಾಗಿದೆ. ಇಲ್ಲಿನ ಕೆಲವು ಕ್ಷೇತ್ರಗಳಿಗೆ ಸಮರ್ಥ ಅಭ್ಯರ್ಥಿಗಳೇ ಇಲ್ಲ. ಇಂತಹ ಕ್ಷೇತ್ರಗಳಿಗೆ ಬಿಜೆಪಿ ಮತ್ತು ಜೆಡಿಎಸ್‌ನಿಂದ ಕೆಲವು ಪ್ರಭಾವಿಗಳನ್ನು ಕರೆ ತಂದು, ಟಿಕೆಟ್ ನೀಡುವ ಬಗ್ಗೆಯು ಇಂದಿನ ಸಭೆಯಲ್ಲಿ ಚರ್ಚೆಯಾಗಿದೆ.

ಕಳೆದ ಮೂರು ತಿಂಗಳಿನಿಂದ ಕೆಪಿಸಿಸಿಯ ವಿವಿಧ ಘಟಕಗಳು ಹಾಗೂ ಎಐಸಿಸಿ ಸ್ಕ್ರೀನಿಂಗ್ ಕಮಿಟಿ 140 ಕ್ಷೇತ್ರಗಳಿಗೆ ಒಬ್ಬ ಅಭ್ಯರ್ಥಿಯನ್ನು ಆಯ್ಕೆ ಮಾಡಿ, ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸ್ಸು ಮಾಡಿತ್ತು. ಉಳಿದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮೂರರಿಂದ ನಾಲ್ಕು ಮಂದಿ ಹೆಸರುಗಳನ್ನು ಶಿಫಾರಸ್ಸು ಮಾಡಲಾಗಿತ್ತು. ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೇಂದ್ರೀಯ ಚುನಾವಣಾ ಸಮಿತಿ ನಾಳೆ ಮತ್ತೆ ಸಭೆ ಸೇರಿ ಚರ್ಚೆ ಮಾಡಲಿದೆ. ವಿವಾದವಲ್ಲದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ನಾಳೆ ಸಂಜೆ ಮೇಲೆ ಯಾವುದೇ ಕ್ಷಣದಲ್ಲಿ ಎಐಸಿಸಿ ಬಿಡುಗಡೆ ಮಾಡಲಿದೆ ಎಂದು ಇದೇ ಮೂಲಗಳು ತಿಳಿಸಿವೆ. ರಾಜ್ಯದವರೇ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಆಪ್ತರಿಗೆ ಕೆಲವು ಕ್ಷೇತ್ರಗಳನ್ನು ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಲಾಗಿದೆ. ಕೆಪಿಸಿಸಿ ಶಿಫಾರಸ್ಸು ಮಾಡಿದ ಪಟ್ಟಿಯಲ್ಲಿ ಹೆಸರಿಲ್ಲದಿದ್ದರೂ, ಖರ್ಗೆಯವರು ಮಧ್ಯಸ್ಥಿಕೆ ವಹಿಸಿ, ಚಾಮರಾಜನಗರದಿಂದ ಹಿಡಿದು, ಬೀದರ್‌ವರೆಗೂ ಕೆಲವು ಕ್ಷೇತ್ರಗಳಲ್ಲಿ ತಮ್ಮ ಬೆಂಬಲಿಗರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎನ್ನಲಾಗಿದೆ.

ರಾಜ್ಯ ಘಟಕಕ್ಕೆ ಅಸಮಾಧಾನವಿದ್ದರೂ, ದೆಹಲಿ ನಾಯಕರ ಮಾತಿಗೆ ಚಕಾರವೆತ್ತಿಲ್ಲ. ಚುನಾವಣಾ ಸಮಿತಿ ಸಭೆಯಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಡಾ. ಜಿ. ಪರಮೇಶ್ವರ್, ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪಮೊಯಿಲಿ ಉಪಸ್ಥಿತರಿದ್ದರು. ಚುನಾವಣಾ ಸಮಿತಿ ಸಭೆ ನಡೆದ ನಂತರ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಸಂಬಂಧ ಅಂತಿಮ ಸುತ್ತಿನ ಸಭೆ ಶುಕ್ರವಾರ ಸಂಜೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆಯಿತು.

## ಇಂದು ಜಾಗೃತಿ ಕಾರ್ಯಕ್ರಮ

ಅಧ್ಯಕ್ಷತೆ ವಹಿಸಲಿದ್ದು, ಪ್ರಥಮ್ ಮೈಸೂರು ಸಂಸ್ಥಾಪಕ ಟ್ರಸ್ಟಿ ಅಶ್ವಿನಿ ರಂಜನ್ ಆಶಯ ಭಾಷಣ ಮಾಡಲಿದ್ದಾರೆ. 'ಹಣ ಮತ್ತು ತೋಳ್ಬಲ' ಕುರಿತು ಕ್ಯಾಬಿನೆಟ್ ಕಾರ್ಯಾಲಯದ ಮಾಜಿ ಅಧಿಕಾರಿ ರವಿ ಜೋಶಿ, 'ಸುಧಾರಣೆಗಳ ಅಗತ್ಯತೆ' ಕುರಿತು ವೇದಿಕೆ ಸಂಚಾಲಕ ಪ್ರೊ.ಎಂ.ಉಮಾಪತಿ ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 94498–19536 ಅನ್ನು ಸಂಪರ್ಕಿಸಬಹುದು.

# ಮಾ.20ಕ್ಕೆ ಜೆಎಸ್‌ಎಸ್ ವಿಜ್ಞಾನ, ತಂತ್ರಜ್ಞಾನ ವಿಶ್ವವಿದ್ಯಾನಿಲಯದ 5ನೇ ಘಟಿಕೋತ್ಸವ

ವಿವಿ ಕುಲಪತಿ ಡಾ. ಎಂ.ಎನ್.ಸಂತೋಷ್ ಕುಮಾರ್ ಮಾಹಿತಿ



ಮೈಸೂರು,ಮಾ.17(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ 5ನೇ ಘಟಿಕೋತ್ಸವ ಮಾ.20ರಂದು ಸಂಜೆ 4 ಗಂಟೆಗೆ ವಿವಿಯ ರಾಜೇಂದ್ರ ಸಭಾಂಗಣದಲ್ಲಿ ನಡೆಯಲಿದೆ ಎಂದು ಜೆಎಸ್‌ಎಸ್ ವಿವಿ ಕುಲಪತಿ ಡಾ.ಎಂ.ಎನ್. ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಮೈಸೂರಲ್ಲಿ ಶುಕ್ರವಾರ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಬನ್ನಿಮಂಟಪದ ಶಿವರಾತ್ರೀಶ್ವರ ನಗರದಲ್ಲಿ ನಡೆಯುವ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ರಾಜೇಂದ್ರ ಸಭಾಂಗಣದಲ್ಲಿ ನಡೆಯುವ ಘಟಿಕೋತ್ಸವದ ಸಾನ್ನಿಧ್ಯವನ್ನು ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆಗಿರುವ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ವಹಿಸಿ, ವಿದ್ಯಾರ್ಥಿಗಳಿಗೆ ಪದವಿ ಹಾಗೂ ಪದಕಗಳನ್ನು ಪ್ರದಾನ ಮಾಡಲಿದ್ದಾರೆ. ಘಟಿಕೋತ್ಸವದಲ್ಲಿ ಇಶಾ ಫೌಂಡೇಷನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ ಎಂದರು.

ಘಟಿಕೋತ್ಸವದಲ್ಲಿ 986 ಬಿಇ, 54 ಬಿಸಿಎ, 176 ಎಂಟೆಕ್, 103 ಎಂಸಿಎ, 47 ಎಂಎಸ್ಸಿ 227 ಎಂಬಿಎ ಮತ್ತು 11 ಸಂಶೋಧನಾ ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ. 56 ವಿದ್ಯಾರ್ಥಿಗಳಿಗೆ ಪದಕಗಳನ್ನು ವಿತರಿಸಲಾಗುತ್ತಿದ್ದು, ಇದರಲ್ಲಿ 34 ಪದಕಗಳನ್ನು ಆಯಾ ವಿಭಾಗಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, 22 ದತ್ತಿ ಪದಕಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದಲ್ಲಿ 11 ಪದವಿ, 31 ಸ್ನಾತಕೋತ್ತರ ಹಾಗೂ ಎಲ್ಲಾ ವಿಭಾಗಗಳಲ್ಲೂ ಡಾಕ್ಟರಲ್ ಪದವಿಯ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. 6 ಸಾವಿರ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ನಮ್ಮ ಸಂಸ್ಥೆಯಲ್ಲಿ ಶಿಕ್ಷಣ ಪಡೆಯುವ ಶೇ. 90 ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆತಿದೆ. ದೇಶ, ವಿದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದಿದ್ದಾರೆ. ಜತೆಗೆ ಆನ್‌ಲೈನ್ ಶಿಕ್ಷಣಕ್ಕೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಶೈಕ್ಷಣಿಕ ವರ್ಷದಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ರೂಪಿಸಲು ಉದ್ದೇಶಿಸಲಾಗಿದೆ. ಸೈಬರ್ ಸೆಕ್ಯುರಿಟಿ ಶ್ರೇಷ್ಠತಾ ಕೇಂದ್ರ ಆರಂಭಿಸಲಿದ್ದೇವೆ. ಜಾಗತಿಕವಾಗಿ ಆರ್ಥಿಕ ಹಿಂಜರಿತದ ನಡುವೆಯೂ ಶೇ. 90ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆತ್ತಿದೆ. ಉದ್ಯೋಗ ಲಭಿಸಿದ ಅಭ್ಯರ್ಥಿಗಳಿಗೆ ವಾರ್ಷಿಕ 12 ಲಕ್ಷದಿಂದ 24 ಲಕ್ಷದವರೆಗೆ ವೇತನ ಪ್ಯಾಕೇಜ್ ಪಡೆಯುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ವಿವಿ ಕುಲಸಚಿವ ಪ್ರೊ.ಎಸ್.ಎ.ಧನರಾಜ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಪಿ. ನಂಜುಂಡಸ್ವಾಮಿ, ಎಸ್ ಜೆಸಿಇ ಪ್ರಾಂಶುಪಾಲ ಡಾ.ಎಸ್.ಬಿ.ಕಿವಾಡೆ ಇದ್ದರು.

# ಕನ್ನಡ ಚಿತ್ರರಂಗಕ್ಕೆ ಪವರ್ ನೀಡಿದ ಅಪ್ಪು

ಸಾಹಿತಿ ಬನ್ನೂರು ಕೆ.ರಾಜು ಅಭಿಮತ



ಮೈಸೂರು, ಮಾ.17(ಜಿಎ)–ಬಣ್ಣದ ಬದುಕಿನ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿ ಕನ್ನಡ ಚಿತ್ರರಂಗಕ್ಕೆ ಹೊಸ ಪವರ್ ನೀಡಿರುವ ಪವರ್ ಸ್ಟಾರ್ ಡಾ.ಪುನೀತ್ ರಾಜಕುಮಾರ್ ಕನ್ನಡವಿರುವ ತನಕ ಎಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿರುತ್ತಾರೆ ಎಂದು ಸಾಹಿತಿ ಬನ್ನೂರು ಕೆ.ರಾಜು ತಿಳಿಸಿದರು.

ನಗರದ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ಕರ್ನಾಟಕ ರತ್ನ ಪವರ್ ಸ್ಟಾರ್ ಡಾ.ಪುನೀತ್ ರಾಜಕುಮಾರ್ ಅವರ ಜನ್ಮದಿನೋತ್ಸವದ ಸಾರ್ಥಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪದ್ಮಭೂಷಣ ಡಾ.ರಾಜಕುಮಾರ್ ಅವರು ಕನ್ನಡಕ್ಕೊಬ್ಬರೇ ರಾಜಕುಮಾರ್ ಆಗಿದ್ದರೆ, ಅವರ ಪುತ್ರ ಪುನೀತ್ ರಾಜಕುಮಾರ್ ಅವರು ತಂದೆಯನ್ನೂ ಮೀರಿಸಿ ಜಗತ್ತಿಗೊಬ್ಬರೇ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಆಗಿದ್ದರು ಎಂದರು.

ಪುನೀತ್ ರಾಜಕಾರಣಿಗಳಂತೆ ಪ್ರಣಾಳಿಕೆ ಇಟ್ಟುಕೊಂಡು ತುತ್ತೂರಿ ಊದಿಕೊಂಡು ಜನಸೇವೆ ಮಾಡಿದವರಲ್ಲ. ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗದಂತೆ ಯಾರಿಗೂ ಹೇಳದೆ ಒಂದೇ ಜನ್ಮದಲ್ಲಿ ನೂರು ಜನ್ಮಕ್ಕಾಗುವಷ್ಟು ಜನಸೇವಾ ಕೆಲಸ ಮಾಡಿದ್ದು, ಕೇವಲ ಅವರೊಬ್ಬ ಚಿತ್ರನಟನಾಗಿರದೆ ಸಮಾಜದ ಸಂಕಷ್ಟಗಳಿಗೆ ಸ್ಪಂದಿಸುವ ಹೃದಯವಂತರಾಗಿದ್ದರು. ಮೈಸೂರು ನಗರದ ಮಹಿಳೆಯರ ಪುನರ್ವಸತಿ ಕೇಂದ್ರ ಶಕ್ತಿಧಾಮ ಸೇರಿದಂತೆ ನೂರಾರು ಸೇವಾ ಸಂಸ್ಥೆಗಳಿಗೆ ಜೀವಧಾತುವಾಗಿದ್ದ ಅವರು ನೂರಾರು ಕುಟುಂಬಕ್ಕೆ ನೆರವಾಗುವ ಮೂಲಕ ಅಕ್ಷರಶಃ ತಂದೆಗೆ ತಕ್ಕ ಮಗನಾಗಿ ಕರ್ನಾಟಕ ಮಾತ್ರವಲ್ಲದೆ ಭಾರತದಿಂದಾಚೆಗೂ ಸಮಾಜಮುಖಿ ಕಲಾವಿದನಾಗಿ ವಿಶ್ವವ್ಯಾಪಿ ಕೀರ್ತಿಗಳಿಸಿದ್ದ ಪುನೀತ್ ರಾಜಕುಮಾರ್ ತನ್ಮೂಲಕ ಕನ್ನಡದ ಹಿರಿಮೆಯನ್ನು ವಿಶ್ವದೆತ್ತರಕ್ಕೂ ಕೊಂಡೊಯ್ದವರು ಎಂದು ಅವರ ಕಾರ್ಯಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಎಂ.ಪ್ರದೀಪ್ ಕುಮಾರ್, ಚಿತ್ರ ನಿರ್ಮಾಪಕ ಸಿದ್ದರಾಜು, ಚಿತ್ರನಟ ಸುಪ್ರೀತ್, ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್, ಸಮಾಜ ಸೇವಕ ಡಾ.ರಘುರಾಮ್ ವಾಜಪೇಯಿ, ಶಾಲೆಯ ಮುಖ್ಯೋಪಾಧ್ಯಾಯಿನಿ ಎಂ.ಜಿ.ಸುಗುಣಾವತಿ, ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಶ್ರೀಬಸವರಾಜೇಂದ್ರ ಸ್ವಾಮಿ ಸೇರಿದಂತೆ ಮತ್ತಿರರು ಉಪಸ್ಥಿತರಿದ್ದರು.

## ಮಾ.21: ಆರ್.ಧ್ರುವನಾರಾಯಣ್ ಅವರಿಗೆ ನುಡಿ ನಮನ

ಮೈಸೂರು,ಮಾ.17(ಪಿಎಂ)– ಕಾಂಗ್ರೆಸ್ ಹಿರಿಯ ನಾಯಕ, ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ಆರ್.ಧ್ರುವನಾರಾಯಣ್ ಅವರ ಉತ್ತರ ಕ್ರಿಯಾದಿ ದಿನವಾದ ಮಾ.21ರಂದು ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಭಾವಪೂರ್ಣ ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ.




ಮೈಸೂರಿನ ಇಂದಿರಾ ಗಾಂಧಿ ಕಾಂಗ್ರೆಸ್ ಭವನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 10.30ಕ್ಕೆ ಸಮೂಹ ಭಜನೆ, 11.30ಕ್ಕೆ ಬೌದ್ಧ ಬಿಕ್ಕು ಡಾ.ಕಲ್ಯಾಣಸಿರಿ ಭಂತೇಜಿ ಅವರಿಂದ ಪಂಚಶೀಲ ಬೋಧನೆ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಮೈಸೂರು ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷದ ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು, ದಲಿತ ಸಂಘರ್ಷ ಸಮಿತಿ, ರೈತ ಸಂಘಟನೆ, ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳು ಧ್ರುವನಾರಾಯಣ ಅವರಿಗೆ ನುಡಿ ನಮನ ಸಲ್ಲಿಸಲ್ಲಿದ್ದಾರೆ.

ನಂತರ ನಗರ–ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್‌ನಿಂದ ಧ್ರುವನಾರಾಯಣ ಅವರ ಸ್ಮರಣಾರ್ಥ ನಿರ್ಣಯವೊಂದನ್ನು ಅಂಗೀಕರಿಸಲಾಗುವುದು. ಮಧ್ಯಾಹ್ನ 2ಕ್ಕೆ ಭೋಜನ ವ್ಯವಸ್ಥೆ ಮಾಡಿದ್ದು, ಎಲ್ಲಾ ಕಾಂಗ್ರೆಸ್ ಬಂಧುಗಳು ಮತ್ತು ನಾಗರಿಕರು ಭಾಗವಹಿಸಬೇಕೆಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಉದ್ದೇಶಿತ ಲಾರಿ ಮುಷ್ಕರ ಹಿಂದಕ್ಕೆ

ಮೈಸೂರು,ಮಾ.17(ಪಿಎಂ)– ಬೆಂಗಳೂರು ನಗರದಲ್ಲಿ ಶುಕ್ರವಾರದಿಂದ (ಮಾ.17) ನಡೆಸಲು ಉದ್ದೇಶಿಸಿದ್ದ ಲಾರಿ ಮುಷ್ಕರ ಕೈಬಿಡಲಾಗಿದೆ. ಬೆಂಗಳೂರು ನಗರದಲ್ಲಿ ಪ್ರತಿದಿನ ಬೆಳಗ್ಗೆ 8ರಿಂದ 11ರವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 8ರವರೆಗೆ ಭಾರಿ ವಾಹನಗಳ ಸಂಚಾರಕ್ಕೆ ವಿಧಿಸಿದ್ದ ನಿರ್ಬಂಧ ಕೈಬಿಡಲಾಗಿದೆ ರಾಜ್ಯ ಸರ್ಕಾರದ ಸೂಚನೆಯಂತೆ ಲಾರಿ ಮಾಲೀಕರು, ಏಜೆಂಟರ ಜೊತೆ ಬೆಂಗಳೂರು ವಿಶೇಷ ಕಮಿಷನರ್ (ಸಂಚಾರ) ಎಂ.ಎ.ಸಲೀಂ ಗುರುವಾರ ಸಭೆ ನಡೆಸಿ, 7.50 ಟನ್ ತೂಕದ ಸರಕು ಸಾಗಣೆ ವಾಹನಗಳಿಗೆ ವಿಧಿಸಿದ್ದ ಸಂಚಾರ ನಿರ್ಬಂಧ ಹಿಂಪಡೆದ ಹಿನ್ನೆಲೆಯಲ್ಲಿ ಲಾರಿ ಮುಷ್ಕರ ಕೈಬಿಡಲಾಗಿದೆ.



ಮೈಸೂರು ಜಿಲ್ಲೆಯ ಎರಡನೇ ಅಪರ ಜಿಲ್ಲಾ ಸರ್ಕಾರಿ ವಕೀಲರಾಗಿ ಸರ್ಕಾರದಿಂದ ನಿಯೋಜನೆಗೊಂಡಿರುವ ಹೆಚ್.ಎಂ ಪ್ರಭು ಅವರನ್ನು ಮೈಸೂರಿನ ವಕೀಲರಾದ ಎ.ಜಿ. ಸುಧೀರ್, ಕೆ.ಆರ್. ಶ್ರೀನಿವಾಸ್, ಎಂ.ಸಿ. ರಾಜಶೇಖರ್, ಎಸ್.ಕೆ. ಮಧು ಅವರು ಅಭಿನಂದಿಸಿದರು.


# 'ಅಪ್ಪು ಆಲದ ಮರ' ದೃಶ್ಯ ಕಾವ್ಯ ಲೋಕಾರ್ಪಣೆ

ಮೈಸೂರು, ಮಾ.17(ಜಿಎ)–ಅಪ್ಪು ಕೇವಲ ಚಿತ್ರರಂಗಕ್ಕೆ ಮಾತ್ರ ಸೀಮಿತವಾಗದೇ ಅವರು ಕರ್ನಾಟಕ ಜನರನ್ನು ಪ್ರತಿನಿಧಿಸುವ ಸಂಕೇತವಾಗಿದ್ದರೂ ಎಂದು ಮೈಸೂರು ವಿಶ್ವವಿದ್ಯಾಲಯ ಹಂಗಾಮಿ ಕುಲಪತಿ ಪ್ರೊ.ಮುಜಾಫರ್ ಅಸ್ಸಾದಿ ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, 'ಅಸ್ತಿತ್ವ ಬಳಗ'ದ ಸಹಯೋಗದಲ್ಲಿ ಪುನೀತ್ ರಾಜ್‌ಕುಮಾರ್ ಜನ್ಮದಿನ ಪ್ರಯುಕ್ತ ಆಯೋಜಿಸಿದ್ದ 'ಅಪ್ಪು ಆಲದ ಮರ' ದೃಶ್ಯಕಾವ್ಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಸಂಸ್ಕೃತಿಯ ಹಿರಿಮೆಯು ಡಾ.ರಾಜ್ ಕುಮಾರ್ ಅವರ ಮೂಲಕ ಅಭಿವ್ಯಕ್ತಗೊಂಡಿದೆ. ಅವರು ಕನ್ನಡ ಅಸ್ಮಿತೆಯ ಪ್ರತೀಕವಾಗಿದ್ದರು. ಅದನ್ನು ಪುನೀತ್ ರಾಜ್‌ಕುಮಾರ್ ಮುಂದುವರಿಸಿಕೊಂಡು ಬಂದಿದ್ದರು. ಅವರ ನಗುವಿನಲ್ಲಿ ಸೌಂದರ್ಯವಿದೆ. ದಾನ–ಧರ್ಮ, ಸೇವೆಗಳು ಅವರ ನಗೆಯಲ್ಲಿ ಪ್ರತಿಫಲಿಸುತ್ತಿದ್ದು, ಶಾಶ್ವತವಾದ ನಾಯಕರಾಗಿ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ ಎಂದರು

ಡಾ.ರಾಜ್‌ಕುಮಾರ್ ಹಾಗೂ ಪುನೀತ್ ಇಬ್ಬರೂ ಕನ್ನಡಿಗರ ಮನಸ್ಸಿನ ಆಳಕ್ಕಿಳಿದ್ದಾರೆ. ಅವರಿಬ್ಬರೂ ಸಿನಿಮಾಗಳ ಮೂಲಕ ಸಾಮಾಜಿಕ ಬದಲಾವಣೆಯನ್ನು ಮಾಡಿದವರು. ಅಪ್ಪು ಸಾವು ಸಾಮಾನ್ಯದ್ದಲ್ಲ.



'ಅಪ್ಪು ಆಲದ ಮರ' ದೃಶ್ಯಕಾವ್ಯ ಲೋಕಾರ್ಪಣೆ ವೇಳೆ ನಟ ಪುನೀತ್ ರಾಜ್‌ಕುಮಾರ್ ಅವರ ಸೋದರಿ ಲಕ್ಷ್ಮಿ ಗೋವಿಂದರಾಜು ಭಾವುಕರಾದ ಕ್ಷಣ

ಅದು ಸುಂದರ ಪಯಣದ ಸಾವು. ಸೌಂದರ್ಯದ ಸಾವು. ಕನ್ನಡಿಗರ ಪ್ರತಿನಿಧಿತ್ವ ಹಾಗೂ ಸಂಕೇತವೊಂದರ ನಷ್ಟ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ರಾಜ್‌ಕುಮಾರ್ ಹಾಗೂ ಎಚ್.ಡಿ.ದೇವೇಗೌಡರು ಗ್ರಾಮೀಣ ಪ್ರದೇಶದಿಂದ ಬಂದು ಸಾಧನೆ ಮಾಡಿದ ಇಬ್ಬರು ಅದ್ಭುತ ವ್ಯಕ್ತಿತ್ವದವರು. ರಾಜ್‌ಕುಮಾರ್ ಅವರು ರಂಗಭೂಮಿಯ ಮೂಲದವರಾಗಿದ್ದರಿಂದ ಅವರ ಸಿನಿಮಾಗಳು ಗಟ್ಟಿತನದಿಂದ ಹಾಗೇ ಮನಸ್ಸಿನಲ್ಲಿ ಆಳವಾಗಿ ಉಳಿದುಕೊಳ್ಳುತ್ತಿದ್ದವು. ಗಂಧದಗುಡಿಯ ಕುಮಾರ್, ಮಂತ್ರಾಲಯ ಮಹಾತ್ಮೆಯ ರಾಘವೇಂದ್ರ ಸ್ವಾಮಿ ಪಾತ್ರಗಳು ಈಗಲೂ ಕಾಡುವ ಮೂಲಕ ಸಾರ್ವಕಾಲಿಕ ಸಿನಿಮಾಗಳಾಗಿವೆ ಎಂದರು.

### ಅಪ್ಪು ನೆನೆದು ಸೋದರಿ ಕಣ್ಣೀರು

ಕನ್ನಡ ಪ್ರಾಧ್ಯಾಪಕಿ ಡಾ.ಎನ್.ಕೆ.ಲೋಲಾಕ್ಷಿ ಗೀತೆಗೆ ಸಾಹಿತ್ಯ, ನಾಗೇಶ್ ಕಂದೇಗಾಲ ಅವರ ಸಂಗೀತ, ಚಿರಂಜೀವಿ ರೇವತ್‌ಯವರ ಸಂಕಲ ಹಾಗೂ ಚಿಂತನ್ ವಿಕಾಸ್ ಗಾಯನದ ಮೂಲಕ ಮೂಡಿ ಬಂದಿರುವ 'ಅಪ್ಪು ಆಲದ ಮರ' ದೃಶ್ಯಕಾವ್ಯವನ್ನು ಡಾ.ಪುನೀತ್ ರಾಜ್‌ಕುಮಾರ್ ಅವರ ಸಹೋದರಿ ಲಕ್ಷ್ಮಿ ಗೋವಿಂದರಾಜು ಬಿಡುಗಡೆಗೊಳಿಸಿ, ದೃಶ್ಯಕಾವ್ಯವನ್ನು ನೋಡುತ್ತ ನೆಚ್ಚಿನ ಅಪ್ಪು ನೆನೆದು ದುಃಖಿತರಾಗಿ ಕಣ್ಣೀರು ಹಾಕಿದರು. ಇಡೀ ಸಭಾಂಗಣದಲ್ಲಿದ ಪ್ರೇಕ್ಷಕರ ಕಣ್ಣಂಚಿನಲ್ಲಿ ನೀರು ಕಂಡಿತು.

ದಕ್ಷಿಣ ಕನ್ನಡ ಮತ್ತು ಕೊಡಗು ಸೇರಿದಂತೆ ಕರ್ನಾಟಕದ ಇತರ ಸ್ಥಳಗಳಲ್ಲಿ ಉಪಭಾಷೆ ಆಡುವ ಪ್ರದೇಶದಲ್ಲಿ ರಾಜ್‌ಕುಮಾರ್ ಕನ್ನಡವನ್ನು ತಮ್ಮ ಚಿತ್ರಗಳ ಮೂಲಕ ತಲುಪಿಸಿದರು. ಗೋಕಾಕ್ ಚಳವಳಿ ಮೂಲಕ ಭಾಷೆ ಜೀವನದ ಭಾಗ ಎಂದು ತಿಳಿಸಿಕೊಟ್ಟಿದ್ದರು. ಡಾ.ರಾಜ್, ಪುನೀತ್ ಅವರ ಕೊಡುಗೆಯನ್ನು ಕನ್ನಡಿಗರು ನಿತ್ಯ ಸ್ಮರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ವಿಜಯಕುಮಾರಿ ಎಸ್. ಕರಿಕಲ್, ವಕೀಲ ಅಪ್ಪು ಗಿರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

## ಮನೆ ಮಾರಾಟಕ್ಕಿದೆ
ವಿಜಯನಗರ 4ನೇ ಹಂತ, ಉತ್ತರದಿಕ್ಕಿನ 30x40 ರೂಪಾನಗರದಲ್ಲಿ 30x40 ನಿವೇಶನ ಮಾರಾಟಕ್ಕಿದೆ. MUDA Sites ಗಳು Investment ಗೆ ಲಭ್ಯವಿದೆ. ಡಿ.ಡಿ.ರಿಯಲ್ ಎಸ್ಟೇಟ್ ಡಿ.ದೇವರಾಜ್
**9343361444**

## ಸೈಟ್ ಮಾರಾಟಕ್ಕೆ ಇದೆ
ಜ್ಞಾನ ಭಾರತಿ ಲೇಔಟ್, ಜೆ.ಪಿ.ನಗರ ಹತ್ತಿರ, ವೆಸ್ಟ್ ಫೇಸ್, ರಾಷ್ಟ್ರೋತ್ಥಾನ ಸ್ಕೂಲ್ ರೋಡ್ 30x40 - Rs.26.50, Lakhs, Nego
**9901351633**

## WANTED
GLOBAL AGENCY
Security Marketing and Security Guard
Salary : 17,000 to 25,000, Address: Global Agency, #27/C, 1st Floor, Metagalli Post, Hebbal Main Road, Lokanayaka Nagara, Mysore - 16. Contact:
**9916739611**

## ಮಾರುವವರು - ಕೊಳ್ಳುವವರು
18x40 20x30 30x40 40x60 50x80 ಎಲ್ಲಾ ಅಳತೆಯ ಹೊಸ ಮನೆ, ಹಳೇಮನೆ ಸೈಟು – ಮೈಸೂರು ನಗರದ ಎಲ್ಲಾ ಬಡಾವಣೆಗಳಲ್ಲಿ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
**8618495118**

## ಭೋಗ್ಯಕ್ಕೆ ಇದೆ
ನಂ.83, 3ನೇ ಕ್ರಾಸ್, 2ನೇ ಹಂತ, ಅಶೋಕಪುರಂ ರೈಲ್ವೆ ಸ್ಟೇಷನ್ ಎದುರು ಅರವಿಂದನಗರ, ಮೈಸೂರು. 2 ರೂಂವುಳ್ಳ ನೆಲ ಮಹಡಿ, 1ನೇ ಮಹಡಿ, 2ನೇ ಮಹಡಿ ಭೋಗ್ಯಕ್ಕೆ ಇದೆ. ಸೂರ್ಯನ ಬಾಗಿಲು. ಸಂಪರ್ಕಿಸಿ:
**9740324112 9742883599**

## MUDA APPROVED SITES FOR SALE
Sites sale in Ananda Sagara, Pragathi Nagara, Paramananda Sagara, Kuberananda Sagara.
30x40, 60x40 & 50x80
Call: JK, 8951144240

## ಬೇಕಾಗಿದ್ದಾರೆ
ಆಫೀಸ್ ಅಸಿಸ್ಟೆಂಟ್
PUC/Degree with Basic Computer
ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
Call: 9844769223

## SHOP FOR RENT
10x10 f and 10x23 f, at No.8, Bharathiswamy Layout, Near Christ Public School, Bogadi, Suitable for Office, Godown, Grocery Business is for Rent. Contact:
**9916777948**

## SITE FOR SALE
At Just Rs.10 Lakhs onwards
**8123609405**

## ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ರಸಿದ್ಧ ಐಟಿ ಕಂಪನಿಗೆ ಗುತ್ತಿಗೆ ಆಧಾರದ (ಕಾಂಟ್ರಾಕ್ಟ್) ಮೇಲೆ ಹೌಸ್‌ಕೀಪಿಂಗ್ ಕೆಲಸ ಮಾಡುವ ಹುಡುಗರು ಬೇಕಾಗಿದ್ದಾರೆ. ಸೌಲಭ್ಯಗಳು : ವೇತನ, ಪಿ.ಎಫ್., ಇ.ಎಸ್.ಐ, ವಾರ್ಷಿಕ ಬೋನಸ್, ವಾರ್ಷಿಕ ಸಂಬಳ ಹೆಚ್ಚಳಿಕೆ, ಗ್ರಾಚ್ಯುಟಿ, ಸಮವಸ್ತ್ರ ಮತ್ತು ಶೂ. ವೇತನ ರೂ. 13,800/-, ವಯೋಮಿತಿ : 18 ರಿಂದ 35 ವರ್ಷ, ವಿದ್ಯಾರ್ಹತೆ : 7 ರಿಂದ 10ನೇ ತರಗತಿ ಪಾಸ್ ಅಥವಾ ಫೇಲ್, ಆಸಕ್ತಿಯುಳ್ಳವರು ಸಂಪರ್ಕಿಸಿ: ಎಸ್.ಎಲ್.ಎನ್. ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈ.ಲಿ. ನಂ.291/ಸಿ, ಹರಿಲಮ್ಮ ಬಿಲ್ಡಿಂಗ್, ಎಸ್.ಎಸ್.ಟಿ.ಪಿ. ಎದುರು, ಅರೋಮ ಬೇಕರಿ ಫ್ಯಾಕ್ಟರಿ ಔಟ್‌ಲೆಟ್ ಪಕ್ಕದಲ್ಲಿ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570 017
**9900509554 / 8105669977**

## ಹೊಸ ಮನೆ ಮಾರಾಟಕ್ಕಿದೆ
#1019, ಹಂಚ್ಯಾ ಸಾತಗಳ್ಳಿ 'B' ವಲಯ 20x30 ರಲ್ಲಿ G/F & F/F (South Face) ಹೊಸ ಮನೆ ಮಾರಾಟಕ್ಕಿದೆ. ಬೆಲೆ 64 ಲಕ್ಷ
**9448075383**

## TNI TECHNOLOGIES
Bogadi, Mysore - 570026
TRAINING + JOB
Office Essentials Tally with GST GST Skills, C, C++, Java, Python
**8951208347**

## ಬೇಕಾಗಿದ್ದಾರೆ
ಮೈಸೂರು ಹಾಗೂ ನಗುವಿನಹಳ್ಳಿ, ಸಿದ್ದಲಿಂಗಪುರ ಸುತ್ತಾಮುತ್ತಾ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 45 ವರ್ಷ ಒಳಪಟ್ಟು, ಇ.ಎಸ್.ಐ, ಪಿ.ಎಫ್ ಸೌಲಭ್ಯವಿರುತ್ತದೆ. #380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು. ಸಂಪರ್ಕಿಸಿ:
**9513089922 9513999755**

## ಪ್ರಮಾಣ ಪತ್ರ
ಹೆಚ್. ವರದರಾಜು ಅಲಿಯಾಸ್ ನಾಗರಾಜು ಆದ ನಾನು ಮನೆ ನಂ 20, 20ನೇ ಮೇನ್, 2ನೇ ಹಂತ, ಜೆ.ಪಿ.ನಗರ, ಮೈಸೂರಿನಲ್ಲಿ ವಾಸವಿದ್ದು, ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ವರದರಾಜ್.ಹೆಚ್ ಎಂದು ನಮೂದಾಗಿದ್ದು, ದಿನಾಂಕ 17.04.2019ರ ಹಕ್ಕು ಬಿಡುಗಡೆ ಪತ್ರದಲ್ಲಿ ನನ್ನ ಹೆಸರು ಹೆಚ್.ವರದರಾಜು ಉರುಫ್ ನಾಗರಾಜು ಎಂದು ನಮೂದಾಗಿರುತ್ತದೆ. ಈ ಮೇಲ್ಕಂಡ ಎರಡೂ ಹೆಸರುಗಳು ನನ್ನ ಹೆಸರೇ ಆಗಿರುತ್ತದೆ ಎಂದು ನೋಟರಿ ಸಿ.ಪಿ ಪದ್ಮರವರ ಮುಂದೆ ಪ್ರಮಾಣೀಕರಿಸುತ್ತೇನೆ. ಸಹಿ/-ವರದರಾಜ್.ಹೆಚ್

## SITE FOR SALE
30x40 Sites, Bank Loan upto 80%, Near Gurur Bus Stop, Ramabainagar, Mysore. DTCP approved (Corporation Limits) 1.5 kms from J P Nagar Ring Road.
**8660105902**

## ಬೇಕಾಗಿದ್ದಾರೆ
ಕುಶಾಲನಗರ, ಕೊಡುಗು ಅನುಭವವುಳ್ಳ ಇಂಡಕ್ಷನ್ ಹಾಗೂ ಸಬ್‌ಮರ್ಸಿಬಲ್ ಮೋಟಾರ್ ರಿವೈಂಡರ್, ಸ್ಟಾರ್ಟರ್ ರಿಪೇರಿ ಮಾಡುವವರು ಮತ್ತು ಲೇತ್ ಟರ್ನರ್ ಬೇಕಾಗಿದ್ದಾರೆ. ವೇತನ 20,000 ರಿಂದ 25,000 ವರೆಗೆ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ:
**9448433350 9945465002**

## ಸೈಟುಗಳು ಮಾರಾಟಕ್ಕಿವೆ
APPROVED DTCP
ವರುಣ ಹತ್ತಿರ 30X40 ಅಳತೆಯ ನಿವೇಶನಗಳು ಮಾರಾಟಕ್ಕಿವೆ.
80% ಬ್ಯಾಂಕ್ ಲೋನ್ ದೊರೆಯುತ್ತದೆ.
Rs. 18 Lakh Onwards
Contact: **9945111044**

## ನಾಟಿ ಔಷಧಿ
ಮಂಡಿನೋವು ಎಷ್ಟು ಹಳೆಯದಾದರೂ ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿವಸಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ.
**8884766288**

## SITE FOR SALE
40x75 West facing site at RT Nagar (Keragalli) is available for sale. Brokers please Excuse. Only genuine buyers can contact owner at
**96633 74402**

## ಶ್ರೀ ಓಂಶಕ್ತಿ ಜ್ಯೋತಿಷ್ಯರು
ಕೇರಳ ಶ್ರೀ ಗುರುಗಳ ಕೃಪೆಯಿಂದ
ಪ.: ನಾಗರಾಜು ಪಣಿಕರ್
ಮೊ.: **9448033798**
ನಿಮ್ಮ ಯಾವುದೇ ಸಮಸ್ಯೆಗಳಿಗೆ ನೇರ ಉತ್ತರ ಶೀಘ್ರ ಪರಿಹಾರವಿದೆ. 1ನೇ ಕ್ರಾಸ್, ಶನೇಶ್ವರ ಗೋಪುರ ಪಕ್ಕ, ಆರ್.ಎಂ.ಸಿ. ಹತ್ತಿರ, ತಿಲಕ್‌ನಗರ, ಮೈಸೂರು.

## ತಕ್ಷಣ ಬೇಕಾಗಿದ್ದಾರೆ
K F Uni Fab
1) Business Executives (ಇಂಗ್ಲೀಷ್ ಜ್ಞಾನ, Two Wheeler Must) ಸಂಬಳ 15,000 ಸಾವಿರ + ಪೆಟ್ರೋಲ್ + Incentives)
2) ಕಂಪ್ಯೂಟರ್ ಜ್ಞಾನವುಳ್ಳ ಯುವತಿ ಅಥವಾ ಮಹಿಳೆ
3) ಟೈಲರ್ಸ್, Helper, Cutters ಪುರುಷ ಹಾಗೂ ಮಹಿಳೆಯರು ಸಂಪರ್ಕಿಸಿ:
**9341895115 / 0821-4065132**
#1468/D 33, 1st Floor, Opposite More Hyper Market, NS Road, Devaraja Mohalla Shivarampet, Mysore - 570001. Email ID : kfunifab@gmail.com

## ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed. ವಿವಾಹ ನೋಂದಣಿಗೆ ಕರೆ ಮಾಡಿ (2nd Marriage also)
**9164743059**

## ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್
29.04.2023, 12.05.2023 ರಿಂದ 14 ದಿನಗಳ ದೆಹಲಿ, ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, 28.06.2023 ರಿಂದ 13 ದಿನಗಳ ವೈಷ್ಣೋದೇವಿ ಕಾಶ್ಮೀರ, ಗುಲ್ಮಾರ್ಗ್ ಅಮರನಾಥ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು–70
**9342287551 / 8050629305**

## ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
**8861612486**

## ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
**7406375196, 9880548596**

## ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
**6364079244**

## SITE FOR SALE
East Facing 50'x93' at Janthagalli, T.N Pura Road. Khata No. 9 & 11 Offer 90 Lakhs Agents Excuse
**9342182275**

## ACTIVELY HIRING
DATA ENTRY ASSISTANT
Any Qualification, Fresher or Experienced
Typing speed 60-80 WPM
9 AM to 6 PM (MON-SAT)
VLOOKUP BUSINESS SOLUTIONS PVT LTD.
Vijayanagar 1st Stage, Mysore
CONTACT : +91 6366940936

## COMMERCIAL SHOP FOR RENT
1025 Sft in 9th Cross, Vontikoppal Suitable for all types of Business purposes. Contact:
**9989432748 9701238100**

## MUDA SITE FOR SALE
Jnanabharathi Layout 2nd Phase, Dadadahalli, East Facing, 24 Lakhs
30x40
**9342123373**

## ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: **9008711654**

## ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
**9731891409**

## CHANGE OF NAME
This is to declare that, I, Fathima Siddika, aged about 42 years (correct date of birth 1-1-1981) resident of #712, Kere Road, K.N. Pura Extension, Mysore-570 019, have changed my name to Siddikha vide affidavit sworn to before Notary Mallikarjuna Swamy, on 6-2-2023. Hereafterwards I wish to be called and known for all acts, deeds and things as Siddikha only.
Sd/- Siddikha

## ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: **9880583804**
ಕೊಳ್ಳೇಗಾಲದ ದೊಡ್ಡ ಮಾಂತ್ರಿಕ ಅಘೋರಿ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಕೋರ್ಟು, ಭೂಮಿ, ಕೆಲಸ, ವ್ಯಾಪಾರ, ನಂದಿದ ಜನರಿಂದ ದೋಷ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನಗಳಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಬಾಯಿಯ ವಿಳಾಸ: ಚಿಟ್ಟಿ ಹತ್ತ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬನ್ ಬಸ್ ಸ್ಟ್ಯಾಂಡ್, ಮೈಸೂರು.

## ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: **9731839596**
ಇದುವರೆಗೂ ಕಾಣದ ರಹಸ್ಯ ತಾಂತ್ರಿಕ ರುದ್ರಮಾರಣ ದೇವಿ ಪೂಜೆಗಳ ಮೂಲಕ ಪ್ರೇಮ, ದಾಂಪತ್ಯ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಶತಸಿದ್ಧ. ನಂ.68, ಪಕ್ಕ ಮಾರ್ಗ ಗಿರಿ ಸ್ಟೀಲ್ ಶಿಲ್ಪಿಗಳು, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

## ಉದ್ಯೋಗ ಅವಕಾಶ
ಬಂದ ದಿವಸ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿದ್ದು ಸಂಬಳ ₹ 15,200–86000.
**9740733021 / 9535028750**

## ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 16,000/-(8 hours +W/o), ವಯೋಮಿತಿ: 50 ವರ್ಷ ಒಳಗೆ, ESI ಮತ್ತು PF ಊಟ, ತಿಂಡಿ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
**9538567819 9620777819**

## ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: **9880066886**

## ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
**8884439666**

## ಮನೆ ಬಾಡಿಗೆಗೆ ಅಥವಾ ಭೋಗ್ಯಕ್ಕೆ ಇದೆ
#33, 16ನೇ ಕ್ರಾಸ್, 6ನೇ ಮೇನ್, ಬೆಟ್ಟದ್ಮ ಕಾಂಪೌಂಡ್, ಆರ್.ಪಿ. ರೋಡ್, ನಂಜನಗೂಡು. ಸಂಪರ್ಕಿಸಿ:
Mob: **9739013777**

## ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
12 Hours Duty ಅನಂದೂರು (Pump House) KRS Road, 7 AM to 7 PM
**7996176555**

## ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ
ಶ್ರೀ ಕಾಮಾಕ್ಷಿ ಬಯೋ–ನಿಮ್
#203, ಬನ್ನಿಮಂಟಪ ಬಡಾವಣೆ, ಮೈಸೂರು–570015
**8088887802**

## ತಕ್ಷಣ ಬೇಕಾಗಿದ್ದಾರೆ
ಕಡಕೊಳ, ನಂಜನಗೂಡು, ತಾಂಡ್ಯ, ಹಿಮ್ಮಾವು ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 19,000/-, ESI ಮತ್ತು PF ಊಟ, ತಿಂಡಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
**9620667819 9880727819**

## ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
8/6:– ಚಾರ್ಧಾಮ್ ಯಾತ್ರಾ ಕೇದಾರನಾಥ್, ಬದರಿನಾಥ್, ಗಂಗೋತ್ರಿ, ಯಮುನೋತ್ರಿ,
17/4:– ಜಾರ್ಖಂಡ್, ಕೋಲ್ಕತ್ತಾ, ಭುವನೇಶ್ವರ, ಪುರಿ ಜಗನ್ನಾಥ್, ಕೋಣಾರ್ಕ್.
26/4:–ಜಮ್ಮು ಕಾಶ್ಮೀರ, ವೈಷ್ಣೋದೇವಿ, ಪಂಜಾಬ್.
8/5:– ಗುಜರಾತ್, ನಾಗನಾಥ್, ಸೋಮನಾಥ್, ದ್ವಾರಕಾ.
7/5:–ನೇಪಾಳ ಮುಕ್ತಿನಾಥ್, ಪಶುಪತಿನಾಥ್.
12/4:– ಶಿರಡಿ, 3 ಜ್ಯೋತಿರ್ಲಿಂಗ ದರ್ಶನ.
**9591017782 / 9964527782**

## ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. **9741250896**
ಕಾಣಿಕೋರ್ ನಾಲ್ಕು ದೈವ, ಕಲ್ಲುಟ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿವಾಹ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನು ಯಾವುದೇ ಸಮಸ್ಯೆಗಳಿಗೆ ಕೇವಲ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುತ್ತದೆ.
ವಿಳಾಸ: ವಿನಾಯಕ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡಾ ಹತ್ತ, ಸಿದ್ಧಾರ್ಥ ನಗರ, ಮೈಸೂರು

## ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: **9741806990**
ನಿಮ್ಮ ಜೀವನದಲ್ಲಿನ ಸ್ತ್ರೀ ಪುರುಷ ಪ್ರೇಮ ವಿವಾಹ, ದಾಂಪತ್ಯ ಸಮಸ್ಯೆ, ಸಂತಾನ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ವಿದ್ಯೆ, ಉದ್ಯೋಗ, ಕೋರ್ಟ್ ಕೇಸು, ವ್ಯಾಪಾರ ಇನ್ನು ಯಾವುದೇ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ.



SUNZONE SOLAR SYSTEM
VM Double Road, Kuvempunagar, Mysuru
**9845175443**

## ಬೇಕಾಗಿದ್ದಾರೆ
DTP operator ಕೆಲಸಕ್ಕೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ
ಸಂಬಳ Rs.15000/-
Ph.**9380142144**
ಶಿವರಾಂಪೇಟೆ, ಮೈಸೂರು

## SITE FOR SALE
40x60
Muda Site For Sale at Manasinagar Behind MPRO HOTEL
**7026901111**

## ಜಮೀನು ಮಾರಾಟಕ್ಕಿದೆ
4 ಎಕರೆ ಜಮೀನು ಗ್ರಾಮ ಮೈಸೂರು ತಾಲ್ಲೂಕು, ಲೇಔಟ್‌ಗಳಿಗೆ 1 ಕಿಲೋ ಮೀಟರ್ ಹತ್ತಿರದಲ್ಲಿದೆ. ಬೋಗಾದಿ ರಸ್ತೆ ಬೀರಿಹುಂಡಿ ಹತ್ತಿರ, ರಿಂಗ್ ರಸ್ತೆಯಿಂದ 12 ಕಿಲೋ ಮೀಟರ್. ಎಕರೆಗೆ 60 ಲಕ್ಷ ರೂ ಗಳು. ಕೊಳ್ಳುವವರು ಮಾತ್ರ ಸಂಪರ್ಕಿಸಿ:
**8050432216**

## HOUSE FOR SALE
20x30 West Face Ground & First Floor Dattagalli 3rd Stage. New own Construction House 68 Lakhs
**9448439004**

## 100% ಕೆಲಸ
ಮೈಸೂರಿನ ಕೈಗಾರಿಕ ಪ್ರದೇಶಗಳಾದ ಹೂಟಗಳ್ಳಿ, ನಂಜನಗೂಡು, ಹೆಬ್ಬಾಳ, ಮೇಟಗಳ್ಳಿ, ಕಡಕೊಳ ಮುಂತಾದ ಸ್ಥಳಗಳಲ್ಲಿರುವ ಕಂಪನಿಗಳಿಗೆ 7th, SSLC, PUC, IT, Pass/Fail ಆದ ಯುವಕ/ಯುವತಿಯರಿಗೆ Quality, Maintance, Store Incharge, Productiion Line, Packing, Helper ಗಳಾಗಿ ಬೇಕಾಗಿದ್ದಾರೆ. ಸಂಬಳ: 14500–37500/– (ESI+PF +OT) ಸೇರಿ
**9663704915, 9008603466**

## ಬೇಕಾಗಿದ್ದಾರೆ
SSLC, PUC, & Diploma ಪಾಸಾದವರು ಹೂಟಗಳ್ಳಿ ಕೈಗಾರಿಕೆ ಪ್ರದೇಶದಲ್ಲಿ ಕೆಲಸ ಮಾಡಲು ಬೇಕಾಗಿರುತ್ತಾರೆ
**8296917002 9844794222**

## ಹೊಸ ಮನೆ ಬಾಡಿಗೆಗೆ ಇದೆ
30x40 2BHK
ಸಸ್ಯಹಾರಿಗಳಿಗೆ ಆದ್ಯತೆ ಶ್ರೀಪುರವೇಶ್ವರ ಬಡಾವಣೆ ನ್ಯಾಯಾಂಗ ಬಡಾವಣೆಪಕ್ಕ ಮೈಸೂರು ಸಂಪರ್ಕಿಸಿ
**9480482815, 9482063693**

## ಮೈಸೂರಿನ ಸಸ್ಯಹಾರಿ ಹೋಟೆಲ್ ಒಂದಕ್ಕೆ
ದೋಸೆ ಭಟ್ಟರು (Part Time/FullTime)-2
ಕೌಂಟರ್ ಬಾಯ್ - 3
ರುಬ್ಬುವವರು - 2
ಅಲ್‌ರೌಂಡರ್ - 1 ಬೇಕಾಗಿದ್ದಾರೆ
**9901506954**

## ಹೊಸ ಮನೆ ಮಾರಾಟಕ್ಕಿದೆ
30x40
No.30, GF-2BHK FF One BHK
ಕಾವೇರಿ ಬಡಾವಣೆ KHB ಹೂಟಗಳ್ಳಿ ಪಕ್ಕ
**9632379974, 9731119250**

## Contact to Learn the following
Speaking English Properly
Communication Skills
Correspondence
2 other Skills
**9844456981**

## HOUSE CUM SITE FOR SALE
Royal innn Hotel 50x86.5, 45 Sq House Constructed, 50x50 Site is vacant Call for More Details
**9880025152**

## ಬೇಕಾಗಿದ್ದಾರೆ
LADIES P.G ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ (ಅಡುಗೆ ಹೆಲ್ಪರ್) ಕಡ್ಡಾಯವಾಗಿ P.G ಯಲ್ಲಿಯೇ ಉಳಿದುಕೊಳ್ಳಬೇಕು ಊಟ, ವಸತಿ ದೊರೆಯುತ್ತದೆ
**9972567537, 9035004605**

## SRI MOOKAMBIKA ENTERPRISES ಬೇಕಾಗಿದ್ದಾರೆ
Officeನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ Computerನಲ್ಲಿ ಅನುಭವವಿರಬೇಕು
ಸಂಬಳ: 10,000/- ರಿಂದ 15,000/-
**88841-79981**

## ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಹೋಟೆಲ್‌ಗಳಿಗೆ 7th, SSLC, PUC, ITI, Diploma, Any Degree Pass/Fail ಆದವರಿಗೆ Packing, Helper Quality, Production, Maintenance, Telephone Attender, Receptionist, Data Entry ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14000–38000/– ESI+PF +OT) ಸೇರಿ
**9980850141, 9980346131**

## Used Laptops
available (with warranty)
**74835 93989**
(Saraswathipuram)

## ಬೇಕಾಗಿದ್ದಾರೆ
18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು. ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು. ಸಂಪರ್ಕಿಸಿ:
Mob: **9164445955**

## ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ Loan Recovery ಮಾಡಲು Collection executive ಗಳು ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ, ಮಂಡ್ಯ, ಶ್ರೀರಂಗಪಟ್ಟಣ, ಮೈಸೂರು ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ದ್ವಿತೀಯ ಪಿಯುಸಿ ಪಾಸಾಗಿರುವವರಿಗೆ ಆದ್ಯತೆ.
**9980929313 / 9845311066**
Interview date : 20-03-2023

## SITE FOR SALE
D.C. Convertion Form No.3, 20x36 Vijaya Nagar IV Stage. Contact:
**9481815553 9035250232**

## ತಕ್ಷಣ ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹೆಲ್ಪರ್‌ಗಳು ITI, PUC, SSLC, Any Degree ಬೇಕಾಗಿದ್ದಾರೆ.
**9035367083 8123769346**

## ವಧು ಬೇಕಾಗಿದ್ದಾರೆ
33 ವಯಸ್ಸಿನ ಸ್ವಂತ ಉದ್ಯೋಗ ಹಾಗೂ ಸ್ವಂತ ಮನೆಯಿರುವ ಮೈಸೂರಿನ ಲಿಂಗಾಯತ ವರನಿಗೆ 30 ವರ್ಷದ ಲಿಂಗಾಯತ ವಧು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: **98450 48051**

## ಮನೆ ಮಾರಾಟಕ್ಕಿದೆ
2 ಬೆಡ್ ರೂಮಿನ ಸ್ನಾನದ ಕೋಣೆ ಸೇರಿದಂತೆ (24x50)ರ ಪೂರ್ವ ದಿಕ್ಕಿನ ಮನೆ ಮಾರಾಟಕ್ಕಿದೆ. ವಿಳಾಸ: #126, ಯಶ್ ಫಾರ್ಮಿನ ಬಡಾವಣೆ, ಬಟ್ಟಹುಂಡಿ, ಗದ್ದಿಗೆ ರಸ್ತೆ, ಮೈಸೂರು.
**8970552994, 8496998464**

## PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
**8749098879**

## ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಮತ್ತು ಎಲ್ಲಾ ವಿದ್ಯಾವಂತ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಡಾ.ಗುರುಜಿ ಮೈಸೂರು
**9448229184 7899625268**

## ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. 8 hours, ಸ್ಥಳ: ಸಾತಗಳ್ಳಿ ಡಿಪೋ, ವೇತನ – 10,000/–
**8310106613**

## COMMERCIAL (130X47) 80" FEET ROAD
@ Bramin's Layout MUDA Approved (Near Srirampura Ring Road) 60 Lakhs
**9538839926**

## SITE FOR SALE
26x28 North face Siddhalingeshwara layout Bogadhi 2nd Stage Near Nirmithi Kendra. Rate 42 Lakhs
**8197997137**

## HOUSE FOR SALE
20x30 Duplex House Near Dattagally. Contact
**8618255505 8310259191**

## ಮೈಸೂರಿನಲ್ಲಿ CATERING
ಕೇಟರಿಂಗ್ Catering ಮಾಡಬೇಕೆ ಅನುಭವ ಇದೆಯೇ ಮಾಡಲು ಇಚ್ಛೆ ಇದೆಯೇ ಮತ್ತು ಸಹಾಯ ಬೇಕೆ ಕೂಡಲೇ ಸಂಪರ್ಕಿಸಿ:
**9901080314**

## 43 ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ವಕ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮೈಸೂರು ಮಿತ್ರ



# ಭೈರವೇಶ್ವರಸ್ವಾಮಿ ದೇವಸ್ಥಾನ, ಮಠ ಉದ್ಘಾಟನೆ

ಮೈಸೂರು, ಮಾ.17– ತಾಲೂಕಿನ ದೂರ ಗ್ರಾಮದಲ್ಲಿ ಭೈರವೇಶ್ವರಸ್ವಾಮಿ ದೇವಸ್ಥಾನ ಮತ್ತು ಮಠವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ನಂತರ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೂರ ಹೆಸರಿಗೆ ದೂರವಾದರೂ ಮನಸ್ಸಿಗೆ ತುಂಬಾ ಹತ್ತಿರವಾದ ಊರು. ಮಠ ಹಾಗೂ ದೇವಸ್ಥಾನ ಎರಡೂ ಒಂದೇ ಕಡೆ ಇರುವುದು ನಿಜವಾಗಿಯೂ ವಿಶೇಷ. ಯಾವಾಗಲೂ ನಾವು ಆಡುವ ಮಾತು ಪರಿಶುದ್ಧವಾಗಿರಬೇಕು. ನಮ್ಮ ಮಾತು ಮತ್ತು ಮನಸ್ಸು ಒಂದಾದಾಗ ಭಗವಂತನ ಆಶೀರ್ವಾದ ನಮಗೆ ಸಿಗಲು ಸಾಧ್ಯ. ಗ್ರಾಮವು ಅಭಿವೃದ್ಧಿ ಹೊಂದಯಾಗಲು ಗ್ರಾಮದ ಪ್ರತಿಯೊಬ್ಬರು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಕನಕಪುರದ ಕಿರಿಯ ಶ್ರೀಗಳಾದ ಚೆನ್ನಬಸವಸ್ವಾಮಿ ಮಾತನಾಡಿ, ಶಾಸಕರು ಹಾಗೂ ಗ್ರಾಮಸ್ಥರ ನಡುವಿನ ಹೊಂದಾಣಿಕೆ ಇಷ್ಟು ಶಾಸ್ತ್ರೋಕ್ತವಾದ ದೇವಸ್ಥಾನ ನಿರ್ಮಾಣವಾಗಲು ಸಾಧ್ಯವಾಯಿತು. ಮನುಷ್ಯ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋದಾಗ ಮನಸ್ಥಿತಿ ಒಂದೇ ರೀತಿ ಇರುವುದಿಲ್ಲ. ಆದ್ದರಿಂದ ನಮ್ಮ ಮನಸ್ಸು ಸದಾ ನಿರ್ಮಲವಾಗಿರಬೇಕೆಂದರೆ ದೇವಸ್ಥಾನ ಮತ್ತು ಮಠಗಳು ಮುಖ್ಯ ಎಂದ ಅವರು ನಾವು ಕಾಶಿಗೆ ಹೋದಾಗ ಮೊದಲು ಭೈರವೇಶ್ವರನ ದರ್ಶನ ಪಡೆದು ನಂತರ ವಿಶ್ವನಾಥನ ದರ್ಶನ ಪಡೆಯಬೇಕು ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡ, ನಾನು ಶಾಸಕನಾಗಲು ಕಾರಣರಾದ ನಿಮ್ಮ ಋಣ ತೀರಿಸಲು ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ ಹೆಚ್ಚು ಅನುದಾನ ತಂದು ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕ್ಷೇತ್ರದಲ್ಲಿ ದೂರ ಗ್ರಾಮ ನನ್ನ ಕುಟುಂಬ ಹಾಗೂ ನನ್ನ ಊರಿದ್ದಂತೆ. ಆದ್ದರಿಂದ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಪಣ ತೊಟ್ಟು ಕೆಲಸ ನಿರ್ವಹಿಸಿದ್ದೇನೆ ಹಾಗೂ ಮುಂದೆಯೂ ನಿರ್ವಹಿಸುತ್ತೇನೆ. ನಾನು ನೀಡಿದ ಹಣದ ಜೊತೆಗೆ ಗ್ರಾಮಸ್ಥರ ಸಹಕಾರದೊಂದಿಗೆ ದೇವಸ್ಥಾನ ತುಂಬಾ ಅಚ್ಚುಕಟ್ಟಾಗಿ ನಿರ್ಮಾಣಗೊಂಡಿದೆ. ಇದಕ್ಕೆ ಕಾರಣ ಅಂಗವಿಕಲನಾದರೂ ಶ್ರಮಿಸಿರುವ ಮಾಜಿ ಗ್ರಾಪಂ ಸದಸ್ಯ ಎಂ.ಕುಮಾರ್ ಮತ್ತು ಮಾಜಿ ಎಪಿಎಂಸಿ ಉಪಾಧ್ಯಕ್ಷ ಎಂ.ನಾಗರಾಜು ಹಾಗೂ ಗ್ರಾಮಸ್ಥರು ಎಂದರು.

ಕಾರ್ಯಕ್ರಮದಲ್ಲಿ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಹುಲ್ಲಹಳ್ಳಿ ಇಮ್ಮಡಿ ಚೆನ್ನಮಲ್ಲ ದೇಶಿಕೇಂದ್ರಸ್ವಾಮೀಜಿ, ಬರಡನಪುರದ ಪರಶಿವಮೂರ್ತಿ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಕುದೇರು ಮಠದ ಗುರುಶಾಂತ ಸ್ವಾಮೀಜಿ, ಮಾದಳ್ಳಿ ಉಕ್ಕಿನಕಂತೆ ಮಠದ ಸಾಂಬಸದಾಶಿವಸ್ವಾಮೀಜಿ, ಸಂಗಮ ಕ್ಷೇತ್ರದ ಮಹೇಶ್ವರ ಸ್ವಾಮೀಜಿ, ಮಾಜಿ ಜಿಪಂ ಸದಸ್ಯೆ ರೂಪ, ಮಾಜಿ ಎಪಿಎಂಸಿ ಉಪಾಧ್ಯಕ್ಷ ಎಂ.ನಾಗರಾಜು, ಮಾಜಿ ಗ್ರಾಪಂ ಸದಸ್ಯ ಎಂ.ಕುಮಾರ್, ಅಂಗಡಿ ಪಾಪಣ್ಣ ಹಾಗೂ ಗ್ರಾಮಸ್ಥರು ಇದ್ದರು.



## ಬೈಕ್‌ಗೆ ಕಾರು ಡಿಕ್ಕಿ ಇಬ್ಬರಿಗೆ ತೀವ್ರ ಗಾಯ

ಬೆಟ್ಟದಪುರ, ಮಾ.17– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ತೀವ್ರ ಗಾಯಗೊಂಡಿರುವ ಘಟನೆ ಬೆಟ್ಟದಪುರದ ಶ್ರೀಚನ್ನಬಸವ ದೇಶಿಕೇಂದ್ರ ಮಠದ ಎದುರು ಶುಕ್ರವಾರ ಸಂಜೆ ನಡೆದಿದೆ.

ಕೌಲನಹಳ್ಳಿ ಗ್ರಾಮದ ನಿವಾಸಿ ಯೋಗಾಚಾರ್, ಅವರ ಪತ್ನಿ ರತ್ನಮ್ಮ ಗಾಯಗೊಂಡಿದ್ದು, ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಕಾರು ಮತ್ತು ಬೈಕ್ ಅನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

### ನಂ.ಗೂಡಲ್ಲಿ ಧ್ರುವ ಪುತ್ರ ದರ್ಶನ್‌ಗೆ ಬೆಂಬಲ ಸೂಚಿಸಿರುವ

# ಹೆಚ್‌ಸಿಎಂ ಸ್ಪರ್ಧೆಗೆ ವರಿಷ್ಠರು ಪರ್ಯಾಯ ಕ್ಷೇತ್ರ ಕಲ್ಪಿಸಲಿ

### ಮೈಮುಲ್ ನಿರ್ದೇಶಕ ಆರ್.ಚಲುವರಾಜು ಒತ್ತಾಯ

ತಿ.ನರಸೀಪುರ ಮಾ.17– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಹಠಾತ್ ನಿಧನಕ್ಕೆ ಮಿಡಿದಿರುವ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ನಂಜನಗೂಡಲ್ಲಿ ಧ್ರುವ ಪುತ್ರ ದರ್ಶನ್‌ಗೆ ಬೆಂಬಲ ಸೂಚಿಸಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದು, ಕಾಂಗ್ರೆಸ್ ವರಿಷ್ಠರು ಮಹದೇವಪ್ಪರ ಸ್ಪರ್ಧೆಗೆ ಪರ್ಯಾಯ ಕ್ಷೇತ್ರ ಕಲ್ಪಿಸಬೇಕು ಎಂದು ಮೈಮುಲ್ ನಿರ್ದೇಶಕ ಆರ್.ಚಲುವರಾಜು ಒತ್ತಾಯಿಸಿದರು.

ತಾಲೂಕಿನ ಬನ್ನೂರು ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಕಾಲಿಕ ನಿಧನ ಪಕ್ಷಕ್ಕೆ ಹಾಗೂ ರಾಜ್ಯ ರಾಜಕಾರಣಕ್ಕೆ ತುಂಬಲಾರದ ನಷ್ಟ ಅಂತಹ ಸನ್ನಿವೇಶದಲ್ಲಿ ಮಾನವೀಯ ಮೌಲ್ಯಗಳನ್ನು ರಾಜಕಾರಣದಲ್ಲಿ ಅಳವಡಿಸಿಕೊಂಡಿರುವ ಮಹದೇವಪ್ಪ ಸ್ಪರ್ಧೆಯಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ಅವರಿಗೆ ತಿ.ನರಸೀಪುರ ಕ್ಷೇತ್ರ ಹೊರತಾಗಿ ಸೂಕ್ತ ಕ್ಷೇತ್ರದಲ್ಲಿ ಅವಕಾಶ ನೀಡಬೇಕೆಂದು ಆಗ್ರಹಿಸಿದರು.



ನಾಲ್ಕೈದು ದಶಕಗಳ ಕಾಲ ಸಕ್ರೀಯ ರಾಜಕಾರಣದಲ್ಲಿರುವ ಮಹದೇವಪ್ಪ ಅವರು ಶಾಸಕ, ಸಚಿವರಾಗಿ ಸಾಮಾಜಿಕ ಬದ್ಧತೆಯೊಂದಿಗೆ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ದುಡಿದಿದ್ದಾರೆ. ಅಧಿಕಾರಕ್ಕಾಗಿ ಅಂಟಿ ಕೂರದೆ ಸೋಲಿಗೆ ಕುಗ್ಗದೆ– ಗೆಲುವಿಗೆ ಹಿಗ್ಗದೆ ಜನರ ಮೇಲಿನ ಗೌರವ ಕಡಿಮೆ ಮಾಡಿಕೊಳ್ಳದೆ ಸಾಮಾಜಿಕ ನ್ಯಾಯದ ಪರ ನಿಂತವರು. ಅಂತಹ ಜನನಾಯಕರು ರಾಜಕೀಯ ದಲ್ಲಿರಬೇಕು. ಹಾಗಾಗಿ ಕಾಂಗ್ರೆಸ್ ವರಿಷ್ಠರು ಚುನಾವಣೆ ಯಲ್ಲಿ ಹೆಚ್‌ಸಿಎಂ ಅವರನ್ನು ಸೂಕ್ತ ಕ್ಷೇತ್ರದಿಂದ ಸ್ಪರ್ಧೆಗೆ ಇಳಿಸಬೇಕು ಎಂದು ಮನವಿ ಮಾಡಿದರು.

ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಚೆನ್ನಕೇಶವ ಮಾತನಾಡಿ, ರಾಜ್ಯ ಹಾಗೂ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಲೆ ಇರುವುದರಿಂದ ಈ ಬಾರಿ 'ಕೈ'ಗೆ ಜನರು ಅಧಿಕಾರ ನೀಡಲಿದ್ದಾರೆ. ಕ್ಷೇತ್ರದಲ್ಲಿ ಮಹದೇವಪ್ಪ ಅವರ ಅಭಿವೃದ್ಧಿ ಕಾರ್ಯ ಮೆಚ್ಚಿರುವ ಜನರು ಕಾಂಗ್ರೆಸ್‌ಗೆ ಮತ್ತೊಮ್ಮೆ ಅವಕಾಶ ಕಲ್ಪಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಮುಲ್ ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್, ಗ್ರಾಪಂ ಸದಸ್ಯ ಡಿ. ಸುನೀಲ್ ಕುಮಾರ್, ಮಾಜಿ ಸದಸ್ಯ ಲೋಕೇಶ್ ಉಪಸ್ಥಿತರಿದ್ದರು.

> ತಿ.ನರಸೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ಗೆಲುವು ಅಭಾದಿತವಾಗಿದ್ದು, ಯುವಕರು ಹಾಗೂ ಹಿರಿಯರು ಬೋಸ್ ಅವರನ್ನು ಈ ಬಾರಿ ಪ್ರಥಮ ಸ್ಪರ್ಧೆಯಲ್ಲೇ ವಿಧಾನಸಭೆಗೆ ಆಯ್ಕೆ ಮಾಡಲಿದ್ದಾರೆ.
> – ಆರ್.ಚಲುವರಾಜು, ಮೈಮುಲ್ ನಿರ್ದೇಶಕ.

# ನಾಗರಹೊಳೆಯಲ್ಲಿ ಹುಲಿ ಕಳೇಬರ ಪತ್ತೆ



ಹನಗೋಡು, ಮಾ.17– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿ ವನ್ಯಜೀವಿ ವಲಯದ ಅಗಸನಹುಂಡಿ ಶಾಖೆಯ ಬಿ.ಆರ್.ಕಟ್ಟೆ ಗಸ್ತಿನ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಮಾ.17ರಂದು ಹುಲಿ ಕಳೇಬರ ಪತ್ತೆಯಾಗಿದೆ.

ಅಂದಾಜು 4ರಿಂದ 5 ವರ್ಷ ಪ್ರಾಯದ ಗಂಡು ಹುಲಿ ಕಳೇಬರ ಪತ್ತೆಯಾಗಿದ್ದು, ಮೃತದೇಹದ ವಿವಿಧ ಭಾಗಗಳಲ್ಲಿ ಗಾಯಗಳಾಗಿವೆ. ಪಶು ವೈದ್ಯಾಧಿಕಾರಿ ಮತ್ತು ಆನೆಗಳ ಪ್ರಭಾರಕ ಹೆಚ್.ರಮೇಶ್ ಮರಣೋತ್ತರ ಪರೀಕ್ಷೆ ನಡೆಸಿದ್ದು, ಸದರಿ ಗಂಡು ಹುಲಿ ಮತ್ತೊಂದು ಹುಲಿಯೊಂದಿಗಿನ ಆಂತರಿಕ ಕಾದಾಟದಿಂದ ಬೆನ್ನು ಮೂಳೆ ಮತ್ತು ಬಲ ಮುಂಗಾಲಿನ ಮೂಳೆ ಮುರಿದಿದೆ. ಹುಲಿಯೊಂದಿಗಿನ ಕಾದಾಟದಿಂದ ಗಾಯಗೊಂಡಿದ್ದ ಹುಲಿ ಮುಳ್ಳುಹಂದಿ ಬೇಟೆಯಾಡಲು ಯತ್ನಿಸಿದ್ದು, ಮುಳ್ಳುಗಳು ಬಾಯಿ ಮತ್ತು ಕಾಲಿಗೆ ಚುಚ್ಚಿ ಗಾಯಗಳಾಗಿರುವ ಪರಿಣಾಮ ಆಂತರಿಕ ರಕ್ತಸ್ರಾವದಿಂದ ಮೃತ ಪಟ್ಟಿರುವುದಾಗಿ ತಿಳಿಸಿದರು.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿ ಪ್ರಮಾಣಿತ ಕಾರ್ಯ ಚರಣಾ ವಿಧಾನದಂತೆ ಮರಣೋತ್ತರ ಪರೀಕ್ಷೆ ನಂತರ ಹುಲಿ ಕಳೇಬರಕ್ಕೆ ಅಗ್ನಿ ಸ್ಪರ್ಶ ಮಾಡಲಾಗಿದೆ. ಈ ವೇಳೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕ ಹರ್ಷಕುಮಾರ ಚಿಕ್ಕನರಗುಂದ, ಹುಣಸೂರು ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದಯಾನಂದ ಡಿ.ಎಸ್., ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರಾದ ಕು. ಕೃತಿಕಾ ಆಲೇನಹಳ್ಳಿ, ಮುಖ್ಯ ವನ್ಯಜೀವಿ ಪರಿಪಾಲಕರಿಂದ ನಾಮ ನಿರ್ದೇಶಿತ ಸದಸ್ಯ ಕೆ.ಎಲ್.ಮಾದಪ್ಪ, ವೀರನಹೊಸ ಹಳ್ಳಿ ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಗಣರಾಜ ಪಟಗಾರ, ಅಗಸನಹುಂಡಿ ಶಾಖೆ ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರ ಸಚಿನ್.ಸಿ, ಬಿ.ಆರ್.ಕಟ್ಟೆ ಗಸ್ತಿನ ಅರಣ್ಯ ಪಾಲಕ ಕೃಷ್ಣ ಮತ್ತು ವಲಯ ಸಿಬ್ಬಂದಿ ಹಾಜರಿದ್ದರು.

# ರಸ್ತೆ ಡಾಂಬರೀಕರಣ ಕಾಮಗಾರಿಗೆ ಗುದ್ದಲಿ ಪೂಜೆ

ಹನಗೋಡು, ಮಾ.17– ವಿವಿಧ ಯೋಜನೆಯಡಿ 8 ಕೋಟಿ ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಗುದ್ದಲಿ ಪೂಜೆ ನೆರವೇರಿಸಿದರು.

ಹನಗೋಡು ಹೋಬಳಿ ಹರಳಹಳ್ಳಿಯಲ್ಲಿ ಶುಕ್ರವಾರ ಲೋಕೋಪಯೋಗಿ ಇಲಾಖೆ ನಬಾರ್ಡ್ ಯೋಜನೆಯಡಿ 4 ಕೋಟಿ ರೂ. ವೆಚ್ಚದಲ್ಲಿ ಕಪ್ಪು ರಸ್ತೆ ಅಭಿವೃದ್ಧಿ, ಬ್ಲಾಕ್ ಸ್ಪಾಟ್ ಯೋಜನೆಯಡಿ 3.75 ಕೋಟಿ ರೂ. ಹಾಗೂ ಪಿಎಂಜಿಎಸ್‌ವೈ ಯೋಜನೆಯಡಿ 25 ಲಕ್ಷ ರೂ. ವೆಚ್ಚದಲ್ಲಿ ಸಂಪೂರ್ಣ ಗುಂಡಿಮಯವಾಗಿರುವ ಕಿರಂಗೂರು–ಹರಳಹಳ್ಳಿ–ನಾಗರಹೊಳೆ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ 6.75 ಕಿಮೀ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಶಾಸಕರು, ಈ ರಸ್ತೆ ಜಿಪಂ ವ್ಯಾಪ್ತಿಗೆ ಸೇರಿದ್ದರಿಂದ ಕಡಿಮೆ ಅನುದಾನದಲ್ಲಿ ಈ ಹಿಂದೆ ರಸ್ತೆ ಅಭಿವೃದ್ಧಿ ಪಡಿಸಲಾಗಿತ್ತು. ಆದರೆ ಈ ಭಾಗ ಕಾಡಂಚಿನ ಪ್ರದೇಶವಾಗಿರುವುದರಿಂದ ಅತೀ ಹೆಚ್ಚು ಮಳೆಯಾಗುವುದರಿಂದ ದೀರ್ಘ ಕಾಲ ಬಾಳಿಕೆ ಬಾರದಿರುವ ಕಾರಣ ಇದನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿ ದೊಡ್ಡ ಮೊತ್ತದಲ್ಲಿ ಈ ರಸ್ತೆಯನ್ನು ಡಾಂಬರೀಕರಣದೊಂದಿಗೆ ಆಧುನೀಕರಣಗೊಳಿಸಲಾಗುತ್ತಿದೆ. ಈ ರಸ್ತೆ ದೊಡ್ಡ ಮರದ ಕಟ್ಟೆ ಬಳಿ 250 ಮೀ ಸಿಸಿ ರಸ್ತೆ ಹಾಗೂ ಕೆರೆ ಏರಿಯ ಎರಡು ಬದಿ ಬ್ಯಾರಿಕೇಟ್ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು.



**ಸೇತುವೆ ನಿರ್ಮಾಣ:** ಈ ಹಿಂದೆ ಸಿದ್ದರಾಮಯ್ಯ ಸರ್ಕಾರದಲ್ಲಿ ಹರಳಹಳ್ಳಿ–ವಡ್ಡಂಬಾಳು ಸಂಪರ್ಕಕ್ಕೆ ಲಕ್ಷ್ಮಣತೀರ್ಥ ನದಿಗೆ ಸೇತುವೆ ನಿರ್ಮಾಣಕ್ಕೆ ಪ್ರಾಸ್ತಾವನೆ ಸಲ್ಲಿಸಿದ್ದೆ. ಆದರೆ 2018ರ ಚುನಾವಣೆಯಲ್ಲಿ ನಾನು ಸೋತೆ. ನಂತರ ನಡೆದ ಉಪ ಚುನಾವಣೆಯಲ್ಲಿ ಗೆದ್ದರೂ ಕೊರೊನಾ, ಪ್ರಕೃತಿ ಹಾಗೂ ಸರ್ಕಾರದ ತಾರತಮ್ಯದ ಸುಳಿಯಲ್ಲಿ ಸಿಲುಕಿ ಈ ಯೋಜನೆ ಸಕಾರಗೊಳ್ಳಲು ಸಾಧ್ಯವಾಗಲಿಲ್ಲ. ಮುಂದಿನ ದಿನಗಳಲ್ಲಿ ಈ ಯೋಜನೆಗೆ ಆದ್ಯತೆ ನೀಡಿ ಸೇತುವೆ ನಿರ್ಮಾಣ ಮಾಡಲಾಗುವುದು. ಗ್ರಾಮದ ಶಾಲಾ ಮಕ್ಕಳು ಹಾಗೂ ಶಾಲಾಭಿವೃದ್ಧಿ ಸಮಿತಿ ಕೋರಿಕೆ ಮೇರೆಗೆ ಶಾಲಾ ಕಟ್ಟಡ ಮಂಜೂರು ಮಾಡಲಾಗುವುದೆಂದರು.

ಕಾರ್ಯಕ್ರಮದಲ್ಲಿ ಕಿರಂಗೂರು ಗ್ರಾಪಂ ಸದಸ್ಯರಾದ ಸ್ವಪ್ನ, ಹರೀಶ್, ಮುಖಂಡರಾದ ಯ.ರಾಜೇಗೌಡ, ತಿಮ್ಮೇಗೌಡ, ರವೀಗೌಡ, ಬಸವೇಗೌಡ, ಬಸವರಾಜಪ್ಪ, ತಾಯಮ್ಮ, ಮಾದೇಗೌಡ, ಭೈರೇಗೌಡ, ಬಸವಯ್ಯ, ಹೊಂಬೇಗೌಡ, ಶಿವಕುಮಾರ್, ಲೋಕೇಶ, ಗೋಪಾಲ್, ಕಸ್ತೂರಿಗೌಡ, ವಿನಯ್, ಎ.ಟಿ.ರವಿ, ವೆಂಕಟೇಶ್, ಎಚ್.ವಿ. ಗಣೇಶ್, ಚಂದ್ರು, ಇಂಜಿನಿಯರ್ ಪ್ರಭಾಕರ್ ಸೇರಿದಂತೆ ಇತರರಿದ್ದರು.



ನಂಜನಗೂಡು ತಾಲೂಕಿನ ಕುರಹಟ್ಟಿ ಡೈರಿ ಕಾಮಗಾರಿಗೆ ಅಧ್ಯಕ್ಷ ಮಹೇಶ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ನಿರ್ದೇಶಕರಾದ ಸಿದ್ದರಾಜು, ಸ್ವಾಮಿ, ಹೊನ್ನಪ್ಪ, ಶಿವಕುಮಾರ್, ಶಾರದ, ಮಹದೇವಪ್ಪ, ವಿರೂಪಾಕ್ಷ, ನಂಜುಂಡಸ್ವಾಮಿ ಇದ್ದರು.

# ಜನತೆ ಆಶೀರ್ವಾದಿಂದ ತಾಲೂಕು ಅಭಿವೃದ್ಧಿ: ಜಿಡಿಹೆಚ್



ಹುಣಸೂರು, ಮಾ.17– ಜನತೆ ಆಶೀರ್ವಾದವಿದ್ದರೆ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ನಿಲುವಾಗಿಲು ಗ್ರಾಮದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡ 50ಕ್ಕೂ ಹೆಚ್ಚು ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಗಲಿರುಳು ದುಡಿಯುತ್ತಿದ್ದಾರೆ. ಆ ಕಾರಣಕ್ಕಾಗಿ ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಕುಮಾರಣ್ಣ ಮುಖ್ಯಮಂತ್ರಿಯಾಗಬೇಕು. ಮಹಿಳೆಯರಿಗೆ 2 ಸಾವಿರ ಕೊಡುವುದಾಗಿ ಕಾಂಗ್ರೆಸ್‌ನವರು ಸುಳ್ಳು ಹೇಳಿ ನಿಮ್ಮನ್ನು ವಂಚಿಸುತ್ತಿದ್ದಾರೆ. ಹೀಗಾಗಿ ಮಹಿಳೆಯರ ರಕ್ಷಣೆಗೆ ಜೆಡಿಎಸ್ ಅಧಿಕಾರಕ್ಕೆ ಬರುವುದು ಅವಶ್ಯಕ. ಪ್ರತಿಯೊಬ್ಬರು ಜೆಡಿಎಸ್‌ಗೆ ಮತ ನೀಡುವ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯರಾದ ಸುಬ್ಬಮ್ಮ, ಜಯಮ್ಮ, ಮಹದೇವಸ್ವಾಮಿ, ವಿವೇಕಾನಂದ ಟ್ರಸ್ಟ್ ಅಧ್ಯಕ್ಷ ಲೋಕೇಶ್, ಮಹೇಶ್, ಸಂತೋಷ್ ಇನ್ನಿತರರು ಜೆಡಿಎಸ್ ಸೇರ್ಪಡೆಯಾದರು. ಕಾರ್ಯಕ್ರಮದಲ್ಲಿ ಶ್ರೀಧರ್, ಸತೀಶ್ ಕುಮಾರ್, ಶಿವಕುಮಾರ್, ಗಣೇಶ್, ರಾಜೇಗೌಡ ಇದ್ದರು.

## ಇಂದು ವಿದ್ಯುತ್ ಅದಾಲತ್

ಹೆಚ್.ಡಿ.ಕೋಟೆ, ಮಾ.17– ಸರ್ಕಾರದ ಆದೇಶದ ಮೇರೆಗೆ ತಾಲೂಕಿನ ಹೈರಿಗೆ ಗ್ರಾಮದಲ್ಲಿ ಮಾ.18ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಹೈರಿಗೆ ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರು ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೆ.ಚಂದು ಕುಮಾರ್ ತಿಳಿಸಿದ್ದಾರೆ.

## ಕೆ.ಎಸ್.ಮಹೇಶ್‌ಕುಮಾರ್ ನಿಧನ



ನಂಜನಗೂಡು, ಮಾ.17– ಮಾಜಿ ಪುರಸಭಾ ಸದಸ್ಯ ಕೆ.ಎಸ್.ಮಹೇಶ್ ಕುಮಾರ್(62) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರಿ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಕಪಿಲಾ ನದಿ ತಟದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಕನ್ನಡ ಹೋರಾಟಗಾರ ತಾಯೂರು ವಿಠಲಮೂರ್ತಿ ಸಂತಾಪ ಸೂಚಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ



# ವರಿಷ್ಠರು ಸೂಚಿಸಿದರೆ ಪಕ್ಷ ಸಂಘಟನೆಗೆ ಸಿದ್ಧ

### ಬಿಜೆಪಿ ಹಿರಿಯ ಮುಖಂಡ ಎಸ್.ಶಂಕರ್

ತಿ.ನರಸೀಪುರ, ಮಾ.17– ಕೌಟುಂಬಿಕ ಹಾಗೂ ವೈಯಕ್ತಿಕ ಕಾರಣಗಳಿಂದ ಸಕ್ರೀಯ ರಾಜಕಾರಣದಿಂದ ದೂರವಿದ್ದೆ. ವರಿಷ್ಠರು ಸೂಚಿಸಿದರೆ ಮುಂದಿನ ದಿನಗಳಲ್ಲಿ ಪಕ್ಷ ಸಂಘಟನೆಗೆ ಸಿದ್ಧನಿದ್ದೇನೆ ಎಂದು ಬಿಜೆಪಿ ಹಿರಿಯ ಮುಖಂಡ ಎಸ್.ಶಂಕರ್ ತಿಳಿಸಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಶುಕ್ರವಾರ ಬೆಂಬಲಿಗರು ಹಾಗೂ ಅಭಿಮಾನಿಗಳೊಂದಿಗೆ ವಿಶೇಷ ಪೂಜೆ ಸಲ್ಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದಕ್ಕೆ ಪಕ್ಷಕ್ಕೆ ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಅಭಾರಿಯಾಗಿದ್ದೇನೆ. ಪಕ್ಷದ ಋಣ ತೀರಿಸಲು ಜಿಲ್ಲೆಯಲ್ಲಿ ಸಂಘಟನೆಗೆ ಯಾವುದೇ ಅಪೇಕ್ಷೆಯಿಲ್ಲದೆ ದುಡಿಯುತ್ತೇನೆ. ಕ್ಷೇತ್ರದಲ್ಲಿ ವರಿಷ್ಠರು ಕಣಕ್ಕಿಳಿಸುವ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತೇನೆ ಎಂದರು.



ಕಳೆದ 5 ವರ್ಷದಲ್ಲಿ ಹಲವು ಬದಲಾವಣೆಗಳಾಗಿವೆ. ಕೆಲವು ಸಂದರ್ಭ ಗಾಳಿ ಸುದ್ದಿ, ಗಂಭೀರ ಆರೋಪಗಳಿಗೆ ಆಧಾರ ಮತ್ತು ದಾಖಲೆಗಳಿಲ್ಲದೆ ಪ್ರತಿಕ್ರಿಯಿಸಲು ಸಾಧ್ಯವಿಲ್ಲ. ರಾಜಕಾರಣದಲ್ಲಿ ತೆರೆ ಮೇಲಿನ ಘಟನೆ ನೋಡುವುದು ಒಂದೆಡೆಯಾದರೆ, ತೆರೆ ಹಿಂದಿನ ಘಟನೆ ನೋಡಲು ಕಾಣುವುದಿಲ್ಲ. ಅವುಗಳನ್ನು ಗಂಭೀರವಾಗಿಯೂ ಪರಿಗಣಿಸಲು ಸಾಧ್ಯವಿಲ್ಲ. ಆಧಾರ, ಸಾಕ್ಷಿಗಳಿಲ್ಲದೆಯೇ ನಾವೂ ಕೂಡ ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಬನ್ನೂರು ಪುರಸಭಾ ಸದಸ್ಯ ಶಿವಣ್ಣ ಮಾತನಾಡಿ, ತಿ.ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆಗೆ ಹೊಸದೊಂದು ಆಯಾಮ ನೀಡಲು ಶಕ್ತಿಮೀರಿ ಶ್ರಮಿಸಿರುವ ಎಸ್.ಶಂಕರ್‌ಗೆ ವರಿಷ್ಠರು ಪಕ್ಷದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು. ಮುಂಬರುವ ಚುನಾವಣೆಯಲ್ಲಿ ಅವರೊಟ್ಟಿಗೆ ನಾವು ಕೂಡ ಪಕ್ಷದ ಅಭ್ಯರ್ಥಿ ಗೆಲುವಿಗೆ ದುಡಿಯುತ್ತೇವೆ ಎಂದರು.

ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಜಯರಾಮ, ಮುಖಂಡರಾದ ಕೆಂಪಣ್ಣ, ಕೃಷ್ಣ, ಚಾಮರಾಜ, ಸುರೇಶ, ಆನಂದ, ಕುನ್ನಯ್ಯ, ರವೀಂದ್ರ, ನಾರಾಯಣ ಹಾಗೂ ಇನ್ನಿತರರಿದ್ದರು.

> ಜನರ ನಾಡಿ ಮಿಡಿತ ಅರಿತು ಕೆಲಸ ಮಾಡುತ್ತಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಹಠಾತ್ ನಿಧನ ರಾಜಕೀಯ ಕ್ಷೇತ್ರಕ್ಕಷ್ಟೇ ಅಲ್ಲ ಸಮಾಜಕ್ಕೂ ತುಂಬಲಾರದ ನಷ್ಟ. ನಮ್ಮ ಕುಟುಂಬದಲ್ಲೂ ಮೂವರನ್ನು ಕಳೆದುಕೊಂಡು ಆ ದುಃಖದಿಂದ ಹೊರಬಂದಿಲ್ಲ. ಧ್ರುವನಾರಾಯಣ್ ಅಗಲಿಕೆ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ದೇವರು ಕುಟುಂಬಕ್ಕೆ ನೀಡಲಿ.
> –ಎಸ್.ಶಂಕರ್, ಬಿಜೆಪಿ ಹಿರಿಯ ಮುಖಂಡ